2. ನಿಯಮ 69ರ ಮೇರೆಗೆ ನಡೆದ ಚರ್ಚೆಗೆ ಮುಖ್ಯಮಂತ್ರಿಗಳಿಂದ ಉತ್ತರ

ವಿಷಯ: ಲೋಕಾಯುಕ್ತರು ರಾಜೀನಾಮೆ ನೀಡಿರುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವಾರದಿಂದ ಸದನದಲ್ಲಿ ಬಹಳ ಪ್ರಮುಖವಾದಂಥ ಎರಡು ವಿಷಯಗಳ ಬಗ್ಗೆ ಸಮಗ್ರವಾದಂಥ ಮತ್ತು ಸುದೀರ್ಘವಾದಂಥ ಚರ್ಚೆ ನಡೆದಿದೆ. ಸದನದ ಪ್ರತಿಪಕ್ಷದ ನಾಯಕರು ಸೇರಿ ಸನ್ಮಾನ್ಯ ಸದಸ್ಯರುಗಳು ತಮ್ಮ ಅಮೂಲ್ಯವಾದ ಸಲಹೆಗಳನ್ನು ನೀಡಿದ್ದಾರೆ. ಈ ಮಧ್ಯೆ ಮಾಧ್ಯಮಗಳು ಮತ್ತು ಅವುಗಳ ಮೂಲಕ ರಾಜ್ಯದ ಜನರು ಮತ್ತು ವಿಚಾರವಂತರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ ಮತ್ತು ಸಲಹೆಗಳನ್ನು ಕೊಟ್ಟಿದ್ದಾರೆ. ಅವರಿಗೆ ನಾನು ಹೃತ್ಪೂರ್ವಕವಾದಂಥ ವಂದನೆಗಳನ್ನು ಸಲ್ಲಿಸುತ್ತೇನೆ. ನನಗೆ ನೆನಪಿರುವಂತೆ ನಾನು ಶಾಸಕನಾದ ಮೇಲೆ ಒಂದು ವಿಷಯದ ಬಗ್ಗೆ ಇಷ್ಟೊಂದು ಸುದೀರ್ಘವಾಗಿ ಒಂದು ವಾರದ ಕಾಲ ಚರ್ಚೆ ನಡೆದಿರುವುದು ನನಗೆ ನೆನಪಿಲ್ಲ. ಈ ವಿಷಯದ ಮಹತ್ವವನ್ನು ಅರ್ಥ ಮಾಡಿಕೊಂಡು ತಾವು ಗೌರವಾನ್ವಿತ ಎಲ್ಲ ಸದಸ್ಯರುಗಳಿಗೆ ಇಷ್ಟೊಂದು ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೂ ಸಹ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಿನ್ನೆ ಸರ್ವ ಪಕ್ಷಗಳ ಸಭಾನಾಯಕರ ಜೊತೆ ನಡೆದ ಚರ್ಚೆಯಲ್ಲಿ ಬಹಳ ಒಳ್ಳೆಯ ಸಲಹೆಗಳು ಕೂಡ ನನಗೆ ಸಿಕ್ಕಿದೆ. ಪ್ರತಿಪಕ್ಷದವರ ಈ ರೀತಿಯ ಒಂದು ಸಹಕಾರದಿಂದ ನಾನು ಇನ್ನೂ ಹೆಚ್ಚು ಉತ್ಸಾಹದಿಂದ ಕೆಲಸ ಮಾಡುವಂಥ ಹುಮ್ಮಸ್ಸು ನನಗೆ ಸಿಕ್ಕಿದೆ. ಅವರಿಗೂ ಸಹ ನಾನು ಹೃತ್ಪೂರ್ವಕವಾದಂತ ವಂದನೆಗಳನ್ನು ಸಲ್ಲಿಸುತ್ತೇನೆ.. ಈ ನನ್ನ ಪ್ರತ್ಯುತ್ತರದಲ್ಲಿ ನಾನು ಎರಡು ಪ್ರಮುಖ ಅಂಶಗಳ

ಬಗ್ಗೆ ಉತ್ತರ ನೀಡುವುದಕ್ಕೆ ಹೊರಟಿದ್ದೇನೆ. ಅದರಲ್ಲಿ ಒಂದನೆಯದಾಗಿ ಗಣಿಗಾರಿಕೆ ಬಗ್ಗೆ, ಮತ್ತೊಂದು ಲೋಕಾಯುಕ್ತರ ಬಗ್ಗೆ. ಈ ಎರಡೂ ವಿಷಯಗಳನ್ನು ಕುರಿತು ಹಲವಾರು ವರ್ಷಗಳಿಂದ ನಾವು ನಡೆದು ಬಂದಂಥ ದಾರಿ, ಇತ್ತೀಚಿನ ದಿವಸಗಳಲ್ಲಿ ಉದ್ಭವವಾಗಿರತಕ್ಕಂಥ ಸಮಸ್ಯೆಗಳು, ನಮ್ಮ ಕಲಾವಧಿಯಲ್ಲಿ ನಾವು ತೆಗೆದುಕೊಂಡಂಥ ಅಗತ್ಯ ಕಾರ್ಯಕ್ರಮಗಳ ಬಗ್ಗೆ ನಾನು ವಿವರಣೆ ನೀಡುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಈ ಸಮಸ್ಯೆಗೆ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ಕೆಲವು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದ್ದು, ಅದರ ಅವಶ್ಯಕತೆ ಬಗ್ಗೆ ಸಹ ನಾನು ಈ ಸದನದಲ್ಲಿ ನನಗೆ ಇರುವ ಮಾಹಿತಿಗಳನ್ನು ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಗಣಿಗಾರಿಕೆಯಿಂದ ಪರಿಸರದ ಮೇಲೆ ಆಗಿರುವಂತಹ ನಕಾರಾತ್ಮಕ ಪರಿಣಾಮಗಳು ಕಲ್ಪನೆ ಮಾಡಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ನನಗೆ ಸಿಕ್ಕಿರುವಂತಹ ಅಂಕಿ ಅಂಶಗಳ ಪ್ರಕಾರ ಇಡೀ ದೇಶದಲ್ಲಿ 1.64 ಲಕ್ಷಕ್ಕೂ ಹೆಚ್ಚು ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲಾಗುತ್ತಿದೆ ಎನ್ನುವ ವಿಚಾರ ಅತ್ಯಂತ ಆತಂಕಕಾರಿಯಾದಂತಹ ಸಂಗತಿ. ಇತ್ತೀಚೆಗೆ ರಾಷ್ಟ್ರದ ಇಂಗ್ಲೀಷ್ ಪಾಕ್ಷಿಕ front lineನಲ್ಲಿ July 16ರ ಸಂಚಿಕೆಯಲ್ಲಿ ರಾಷ್ಟ್ರಾದ್ಯಂತ ಗಣಿಗಾರಿಕೆ ಮಾಫಿಯಾ ಚಟುವಟಿಕೆ ಬಗ್ಗೆ ವಿವರವಾದಂತಹ ಚಿತ್ರಣವನ್ನು ಅವರು ನೀಡಿದ್ದಾರೆ. ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿಕೊಂಡಿರುವಂತಹ ಕಾರ್ಪೋರೇಟ್ ರಾಜಕೀಯ ಗುಂಪುಗಳು, ಮಾಫಿಯಾ ಚಟುವಟಿಕೆಗಳು ಒಂದು ರೀತಿ ಗಾಬರಿ ಹುಟ್ಟಿಸುವಂಥದ್ದಾಗಿದೆ. ಇದೇ ರೀತಿ ಅವ್ಯಾಹಿತವಾಗಿ ಗಣಿಗಾರಿಕೆ ನಡೆಯುವುದಕ್ಕೆ ನಾವು ಬಿಟ್ಟರೆ ಪರಿಸರದಲ್ಲಿ ಒಂದು ಅಸಮತೋಲನದ ಜೊತೆಗೆ ಬಹಳ ದೊಡ್ಡ ಮಟ್ಟದಲ್ಲಿ ಜನರ ವಲಸೆಗೂ ಇದು ಕಾರಣವಾಗುತ್ತದೆ ಎನ್ನುವ ಅಭಿಪ್ರಾಯವಿದೆ. ಮುಖ್ಯವಾಗಿ ಅರಣ್ಯ

ಪ್ರದೇಶಗಳಲ್ಲಿ ಶತಶತಮಾನಗಳಿಮದ ವಾಸಿಸುತ್ತಿರುವಂತಹ ಗುಡ್ಡಗಾಡು ಜನ ತಮ್ಮ ಆಶ್ರಯವನ್ನು ಕಳೆದುಕೊಂಡು ಹೊರಗೆ ಹೋಗುವಂತಹ ಪರಿಸ್ಥಿತಿ ಇದೆ. ಈ ಗಣಿಗಾರಿಕೆಯ ಪರಿಣಾಮ ಉಗ್ರವಾದಿ ಸಂಘಟನೆಗಳಾದಂಥ ಮಾವೋವಾದಿಗಳು, ನಕ್ಷಲೀಯರು ಮತ್ತಿತರ ಸಂಘಟನೆಗಳು, ಆದಿವಾಸಿ ಮತ್ತು ಅರಣ್ಯವಾಸಿ ಜನಾಂಗದವರಿಗೆ ಅವರ ಸಂಬಂಧಕ್ಕೆ ಬರುವ ರೀತಿಯಲ್ಲಿ ಆ ಜನಾಂಗದವರು ಬಲಿಯಾಗುವಂತಹ ಅಪಾಯ ಸಹ ನಮ್ಮ ಮುಂದೆ ಕಾಣುತ್ತಿದೆ. ಒಂದು ಅಂದಾಜಿನ ಪ್ರಕಾರ ರಾಷ್ಟ್ರಾದ್ಯಾಂತ ಸುಮಾರು 15.000 ಅನುಮತಿಯಿಲ್ಲದೇ ಅಕ್ರಮವಾಗಿ ಗಣಿಗಾರಿಕೆ ಮಾಡುವಂಥಾದ್ದು ಇದೆ ಎನ್ನುವ ವಿಚಾರ ಇದೆ. ಸಕ್ರಮವಾಗಿ ಎಂದರೆ ಪರವಾನಗಿ ಹೊಂದಿರುವವರು ಇಡೀ ದೇಶದಲ್ಲಿ ಅಂಕಿ ಅಂಶಗಳ ಪ್ರಕಾರ 8,700 ಇದ್ದರೆ, 15,000 ಅಕ್ರಮ ಗಣಿಗಾರಿಕೆಗಳು ಇವೆ. 2008ರಲ್ಲಿ ವಿಜ್ಞಾನ ಮತ್ತು ಪರಿಸರ ಅಧ್ಯಯನ ಕೇಂದ್ರ ಕೈಗೊಂಡ ಒಂದು ಅಧ್ಯಯನ ಮತ್ತು ಸಂಶೋಧನೆಯ ಪ್ರಕಾರ ಗಣಿಗಾರಿಕೆಯಿಂದಾಗಿ ಪರಿಸರ ಮತ್ತು ಜನತೆಯ ಮೇಲೆ ಅಗಾಧವಾಗಿ ದುಷ್ಪರಿಣಾಮ ಆಗುವುದು ದೃಢಪಟ್ಟಿದೆ. ನನಗೆ ಅನಿಸುತ್ತದೆ, ಈ ಇಂಗ್ಲೀಷ್ ಪಾಕ್ಷಿಕ front lineನಲ್ಲಿ July 16ರಲ್ಲಿ ಬಂದಿರುವ ವರದಿ, ಕರ್ನಾಟಕದಲ್ಲಿ ನಾವು ಪ್ರತ್ಯಕ್ಷವಾಗಿ ಈ ಅಕ್ರಮ ಗಣಿಗಾರಿಕೆಯಲ್ಲಿ ನೋಡುತ್ತಿರುವಂತಹ ಅನುಭವ ಹಾಗೂ ದೇಶದ ಬೇರೆ ಬೇರೆ ಭಾಗದಲ್ಲಿ ಗಣಿಗಾರಿಕೆಯಲ್ಲಿ ಸಿಕ್ಕದಿರುವಂತಹ ಅಂಕಿ ಅಂಶಗಳನ್ನು ನೋಡಿದಾಗ ಈ ಬಗ್ಗೆ ಗೌರವಾನ್ವಿತ ಪ್ರಧಾನಿಯವರಿಗೆ ಪತ್ರವನ್ನು ಬರೆದಿದ್ದೇನೆ. ಈ ದೇಶದಲ್ಲಿ ಈ ಅಕ್ರಮ ಗಣಿಗಾರಿಕೆಯನ್ನು ತಡೆಯುವುದಕ್ಕೆ ಒಂದೇ ಒಂದು ಮಾರ್ಗ ಏನೆಂದರೆ export ಅನ್ನು complete ಆಗಿ ರದ್ದು ಮಾಡಬೇಕು, Value added industries ಗೆ ಮಾತ್ರ ಕಬ್ಬಿಣದ ಅದಿರನ್ನು ಕೊಡುವಂತಹ ಒಂದು ವಿನೂತನವಾದಂತಹ ಚಿಂತನೆಯನ್ನು ಕೇಂದ್ರ ಸರ್ಕಾರ

ಮಾಡಬೇಕು. ಇದರ ಬಗ್ಗೆ ಲೋಕಸಭೆಯಲ್ಲಿ ಚರ್ಚೆಯಾಗಬೇಕು. ಈ ಹಿನ್ನೆಲೆಯಲ್ಲಿ ನನ್ನಲ್ಲಿರುವಂತಹ ಎಲ್ಲಾ ಮಾಹಿತಿಯನ್ನು ಈ ದೇಶದ ಎಲ್ಲಾ ಗೌರವಾನ್ವಿತ ಸಂಸತ್ ಸದಸ್ಯರಿಗೆ, ಮಾನ್ಯ ಪ್ರಧಾನಿಯವರಿಗೆ, ಮಾನ್ಯ ರಾಷ್ಟ್ರಪತಿಗಳಿಗೆ ನನ್ನ ಮನವಿಯನ್ನು ಕಳುಹಿಸಿಕೊಡುತ್ತಿದ್ದೇನೆ. ನಾನು ಖುದ್ದಾಗಿ ರಾಷ್ಟ್ರಪತಿಯವರನ್ನು ಭೇಟಿ ಮಾಡಿ, ಮಾನ್ಯ ಪ್ರಧಾನಿಯವರನ್ನು ಭೇಟಿ ಮಾಡಿ, ಈ ಒಂದು ವಾರದ ಚರ್ಚೆ ಮತ್ತು ನಮ್ಮ ಕರ್ನಾಟಕದಲ್ಲಿ ಆಗಿರುವಂತಹ ಅನುಭವ, ಯಾವ ಮಟ್ಟದಲ್ಲಿ ಅಕ್ರಮ ಗಣಿಗಾರಿಕೆ ಆಗುತ್ತಿದೆ ಎನ್ನುವ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಗಣಿ ನೀತಿ ಜಾರಿಗೆ ಬರಬೇಕು. ಈ ಬಗ್ಗೆ ನಾನು ಎಲ್ಲರಿಗೂ ಪತ್ರವನ್ನು ಬರೆಯುತ್ತೇನೆ. ಮಾನ್ಯ ರಾಷ್ಟ್ರಪತಿಯವರನ್ನು ಹಾಗೂ ಪ್ರಧಾನಿಯವರನ್ನು ಸಹ ಭೇಟಿ ಮಾಡುತ್ತೇನೆ. ಈ ಸದನದಲ್ಲಿ ಮಾನ್ಯ ಜಯಚಂದ್ರರವರು ಹೇಳಿದಂತೆ ನಾಳೆ ನಾಡಿದ್ದರಲ್ಲಿ ಎರಡು ಸಾಲಿನ ಒಂದು ನಿರ್ಣಯವನ್ನು ಹೊರದೇಶಗಳಿಗೆ ಕಬ್ಬಿಣದ ಅದಿರನ್ನು ಸಾಗಣೆ ಮಾಡುವುದರ ಬಗ್ಗೆ ನಿರ್ಬಂಧ ಮಡಬೇಕೆಂದು ಹೇಳಿ ಅತ್ಯಂತ ವಿನಯದಿಂದ ಮಾನ್ಯ ಪ್ರಧಾನಿಯವರನ್ನು ಪ್ರಾರ್ಥನೆ ಮಾಡುವಂತಹ ಒಂದು ನಿರ್ಣಯವನ್ನು ನಾನು ಮಂಡನೆ ಮಾಡುತ್ತೇನೆ. ಮಾನ್ಯ ಪ್ರತಿಪಕ್ಷದ ನಾಯಕರು ತಾವು ಇಷ್ಟಪಟ್ಟರೆ ತಾವಾದರೂ ಮಂಡನೆ ಮಾಡಬಹುದು. ಈ ಮನೆಯಲ್ಲಿ ಅದನ್ನು ಮಂಡನೆ ಮಾಡೋಣ. ಮಾನ್ಯ ಅಧ್ಯಕ್ಷರೇ, ಅತ್ಯಂತ ಪ್ರಾಮಾಣಿಕವಾಗಿ ಇಡೀ ದೇಶದ ಅಂಕಿ-ಅಂಶಗಳನ್ನು ತರಿಸುವಂತಹ ಕೆಲಸವನ್ನು ನಮ್ಮ ಇಲಾಖೆಯ ಅಧಿಕಾರಿಗಳು ಮತ್ತು ನಾವೆಲ್ಲ ಸೇರಿ ಮಾಡಿದ್ದೇವೆ. ಸ್ವಾತಂತ್ರ್ಯ ನಂತರ ಮೊದಲ 45 ವರ್ಷಗಳಲ್ಲಿ ಗಣಿಗಾರಿಕೆಯಿಂದಾಗಿ ಎರಡೂವರೆ ಕೋಟಿಗೂ ಹೆಚ್ಚು ಜನ ತನ್ನ ಮೂಲ ನೆಲೆಗಳಿಂದ ಶೇಕಡ 25ರಷ್ಟು ಜನರಿಗೆ ವಸತಿ ಕಲ್ಪಿಸುವುದಕ್ಕೆ ಆಗಿಲ್ಲ. ಈ ರೀತಿ ತಲ್ಲಣಗೊಂಡಿರುವಂತಹ ಜನರಲ್ಲಿ ಅರ್ಧದಷ್ಟು ಮಂದಿ ಗುಡ್ಡಗಾಡಿನ ಜನ ಆ ಸಮುದಾಯಕ್ಕೆ ಸೇರಿದವರು ಎನ್ನುವುದು

ಅಧ್ಯಯನದಿಂದ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ದೇಶದಲ್ಲಿ ಗಣಿಗಾರಿಕೆಗೆ ಬಳಸಲಾದ ಅರಣ್ಯ ಪ್ರದೇಶಗಳ ವಿಸ್ತಾರ ಪ್ರಮುಖವಾದ ರಾಜ್ಯಗಳಲ್ಲಿ ಹೇಳುವುದಾದರೆ, ಉದಾಹರಣೆಗೆ ಒರಿಸ್ಸಾದಲ್ಲಿ 15,387 ಹೆಕ್ಟೇರ್ ಎಂದರೆ ಒಟ್ಟು ಭೂ ಪ್ರದೇಶದ ಶೇಕಡವಾರು ಪ್ರಮಾಣ 16.2 ರಷ್ಟು, ಛತ್ತೀಸ್‌ಗಡದಲ್ಲಿ 14,421 ಹೆಕ್ಟೇರ್ ಎಂದರೆ ಒಟ್ಟು ಭೂ ಪ್ರದೇಶ ಒಟ್ಟು 15.2 ರಷ್ಟು, ಆಂಧ್ರಪ್ರದೇಶ 13,352 ಹೆಕ್ಟೇರ್ ಎಂದರೆ ಭೂ ಪ್ರದೇಶ ಶೇಕಡ 14.2ರಷ್ಟು, ಮಧ್ಯಪ್ರದೇಶದಲ್ಲಿ 10,058 ಹೆಕ್ಟೇರ್ ನಲ್ಲಿ ಶೇಕಡ 10.6 ರಷ್ಟು, ಗುಜರಾತ್‌ನಲ್ಲಿ 9,664 ಹೆಕ್ಟೇರ್‌ನಲ್ಲಿ ಭೂ ಪ್ರದೇಶದಲ್ಲಿ ಶೇಕಡ 10.2 ರಷ್ಟು, ಜಾರ್ಖಂಡ್‌ನಲ್ಲಿ 9,059 ಹೆಕ್ಟೇರ್‌ನಲ್ಲಿ ಶೇಕಡ 0.95 ಕರ್ನಾಟಕದಲ್ಲಿ ಬಹಳ ಮುಖ್ಯವಾಗಿ 7,558 ಹೆಕ್ಟೇರ್‌ನಲ್ಲಿ ಎಂದರೆ ಶೇಕಡ 0.80 ರಾಜಸ್ಥಾನ್ 4,996 ಹೆಕ್ಟೇರ್‌ನಲ್ಲಿ ಶೇಕಡ 0.53, ಈ ರೀತಿ ಮಾಹಿತಿಗಳು ಇವೆ. ಒಂದು ಸಂಗತಿ ಸಾಮಾನ್ಯ ಜನರಿಗೆ ಗೊತ್ತಿರುವಂಥಾದ್ದು ಖನಿಜಗಳು ಈ ಭಗವಂತ ಕೊಟ್ಟಂತಹ ಸಂಪತ್ತು ಪುನರ್ ಉತ್ಪಾದಿಸುವಂತಹ ವಸ್ತುಗಳಲ್ಲ. ಅನೇಕ ಸಾವಿರಾರು ವರ್ಷಗಳಿಂದ ಇರುವಂತಹ ಈ ಸಂಪತ್ತು, ಅದನ್ನು ಇತಿಮಿತಿಯೊಳಗೆ ಬಳಸದಿದ್ದರೆ ಮುಂದಿನ ಪೀಳಿಗೆಗೆ ನಾವು ಏನನ್ನು ಬಿಟ್ಟು ಹೋಗುತ್ತೇವೆನ್ನುವಂತಹ ಸಮಗ್ರವಾದ ಚಿಂತನೆ ದೇಶದಲ್ಲಿ ನಡೆಯಬೇಕಾಗಿದೆ. ಜಗತ್ತಿನ ಯಾವುದೇ ಮುಂದುವರೆದ ದೇಶ ಈ ರೀತಿ ಖನಿಜ ಸಂಪತ್ತನ್ನು ಲೂಟಿ ಮಾಡುವುದಕ್ಕೆ ಬಿಟ್ಟಿಲ್ಲ. ನಾವು ನಮ್ಮ ದೇಶದಲ್ಲಿ ಮಾತ್ರ ಧಾರಾಳವಾಗಿ ಇದಕ್ಕೆ ಪರವಾನಗಿಯನ್ನು ಕೊಟ್ಟುಕೊಂಡು ಬರುತ್ತಿದ್ದೇವೆ. ಈ ಗಣಿಗಾರಿಕೆ ಅರಣ್ಯನಾಶ ಮತ್ತು ಜಲ ಮೂಲಗಳ ಕಣ್ಮರೆ ವಿಶೇಷವಾಗಿ ಅಂತರ್ಜಲ ಮಟ್ಟದ ಕುಸಿತಕ್ಕೆ ಕಾರಣವಾಗುತ್ತಿದೆ. ಅದನ್ನು ನಾವು ಗಣಿಗಾರಿಕೆ ಆಗಿರುವಂತಹ ಪ್ರದೇಶದಲ್ಲಿ ನೋಡಿಕೊಂಡು ಬಂದಾಗ ಪ್ರತ್ಯಕ್ಷ ನಮ್ಮ ಅನುಭವಕ್ಕೆ ಬರುತ್ತದೆ. ಜೊತೆಗೆ ಜನಜೀವನಕ್ಕೆ ಮಾರಕವಾದ ವಿಷವಸ್ತುಗಳು

ಗಣಿಗಾರಿಕೆಯಿಂದ ಹವಾಮಾನದಲ್ಲಿ ಬೆರೆತು ಅನೇಕರು ನಿರೀಕ್ಷೆ ಮಾಡುವುದಕ್ಕೆ ಆಗದಿರುವಂತಹ, ಕಲ್ಪನೆ ಮಾಡಿಕೊಳ್ಳುವುದಕ್ಕೆ ಆಗದಿರುವಂತಹ ಜಾಡ್ಯಗಳು ಮತ್ತು ರೋಗಗಳಿಗೆ ಜನ ತುತ್ತಾಗುವುದನ್ನು ದೊಡ್ಡ ಪ್ರದೇಶದಲ್ಲಿ ಗಣಿಗಾರಿಕೆ ಆಗಿರುವಂತಹ ಬಳ್ಳಾರಿ ಇರಬಹುದು ಅಥವಾ ಬೇರೆ ಪ್ರದೇಶ ಇರಬಹುದು, ಅದನ್ನು ನೀವು ಈಗಲೇ ಹೋಗಿ ನೋಡಬಹುದು, ಅದರಿಂದ ಅಲ್ಲಿ ಕಲಸ ಮಾಡುತ್ತಿರುವಂತಹವರ ಯುವಕರ ಆರೋಗ್ಯದ ಮೇಲೆ ಯಾವ ರೀತಿ ದುಷ್ಪರಿಣಾಮ ಆಗುತ್ತಿದೆ ಎನ್ನುವುದನ್ನು ನಾವು ಪ್ರತ್ಯಕ್ಷ ನೋಡಬಹುದು. ಗಣಿಗಾರಿಕೆ ಎಂದೂ ಸಹ ಪರಿಸರ ಸ್ನೇಹಿ ಅಲ್ಲ, ಈ ವಿಷಯ ಎಲ್ಲರಿಗೂ ಗೊತ್ತಿರುವಂಥದ್ದು, ಇದಕ್ಕೆ ಅತ್ಯಂತ ಉತ್ತಮವಾದಂತ ಸುರಕ್ಷತಾ ಕ್ರಮಗಳನ್ನು ಕೈಗೊಂಡರೂ ಕೂಡ ಪರಿಸರದ ಮೇಲೆ ನಿಶ್ಚಿತವಾಗಿ ದುಷ್ಪರಿಣಾಮಗಳನ್ನು ಬೀರುವಂಥ ಗಣಿಗಳೂ ಉಂಟು. ಈ ಪರಿಸರ ಸಮತೋಲನವನ್ನು ಕಾಪಾಡುವುದಕ್ಕೆ ಮತ್ತು ಮುಂದಿನ ಪೀಳಿಗೆಗೆ ನಿಸರ್ಗ ಸಂಪತ್ತನ್ನು ಉಳಿಸಲು ಗಣಿಗಾರಿಕೆ ಮೇಲೆ ತೀವ್ರವಾದಂಥ ನಿರ್ಬಂಧವನ್ನು ಹೇರುವಂಥದ್ದು ಅನಿವಾರ್ಯ ಮತ್ತು ಅಗತ್ಯವೆಂಬುದನ್ನು Centre for Science and Environment ಅಧ್ಯಯನ ಮಾಡಿದೆ. ಇದು ವಿಶೇಷ ಶ್ರಮವಹಿಸಿ, ಅದನು ಪ್ರತಿಪಾದನೆ ಮಾಡಿದೆ. ಭಾರತ ದೇಶದಲ್ಲಿ ಕರ್ನಾಟಕ ರಾಜ್ಯವಲ್ಲದೇ ಇತರೆ ರಾಜ್ಯಗಳಲ್ಲೂ ಕಬ್ಬಿಣದ ಅದಿರಿನ ಗಣಿಗಾರಿಕೆಯನ್ನು ನಡೆಸಿ ಉತ್ಪಾದನೆಯನ್ನು ಮಾಡುತ್ತಿದೆ. ಅವುಗಳಲ್ಲಿ ಪ್ರಮುಖವಾದ ರಾಜ್ಯಗಳೆಂದರೆ ಒರಿಸ್ಸಾ, ಛತ್ತಿಸ್‌ಗಡ್, ಗೋವಾ ಮತ್ತು ಜಾರ್ಖಂಡ್, ಇದು ಅಲ್ಲದೇ ಆಂಧ್ರಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಾಸ್ಥಾನ, ಈ ರಾಜ್ಯಗಳು ಸಹ ಸೇರಿವೆ. ರಾಜ್ಯಾವಾರು ಕಬ್ಬಿಣದ ಅದಿರಿನ ಉತ್ಪಾದನೆ ವಿವರಗಳು ಮಿಲಿಯನ್ ಟನ್‌ಗಳಲ್ಲಿ ಈ ಕೆಳಕಂಡಂತೆ ಇವೆ. ಒರಿಸ್ಸಾದಲ್ಲಿ ಶೇ. 33ರಷ್ಟು, ಕರ್ನಾಟಕ ರಾಜ್ಯ ಶೇ. 25ರಷ್ಟು, ಛತ್ತೀಸ್‌ಗಡ ಶೇ. 16ರಷ್ಟು, ಗೋವಾ ಶೇ. 15ರಷ್ಟು, ಜಾರ್ಖಂಡ್ ಶೇ. 11 ರಷ್ಟು ಇದೆ ಈಗೆ

ಈ ಘಟನಾವಳಿಗಳು ನಡೆಯುತ್ತಿವೆ. ದೇಶದಲ್ಲಿರುವಂಥ ಕಬ್ಬಿಣದ ಅದಿರಿನ ಉತ್ಪಾದನೆ ಸ್ಥಳೀಯ ಬಳಕೆ ಹಾಗೂ ರಫ್ತು ವಿವರ ಈ ಕೆಳಕಂಡಂತೆ ಇವೆ. 2002–03ನೇ ಸಾಲಿನಲ್ಲಿ 99.07 ಮಿಲಿಯನ್ ಟನ್ ಉತ್ಪಾದನೆ ಆದರೆ, ಸ್ಥಳೀಯ ಬಳಕೆಯಾಗಿರುವಂಥದ್ದು ಕೇವಲ 40.94%, 48.02% ರಫ್ತು ಆಗಿದೆ. 2003–04ನೇ ಸಾಲಿನಲ್ಲಿ 122.84 ಮಿಲಿಯನ್ ಟನ್ ಉತ್ಪಾದನೆಯಾದರೆ, ಅದರಲ್ಲಿ 44.97 ಮಿಲಿಯನ್ ಟನ್ ಸ್ಥಳೀಯ ಬಳಕೆಗೆ, 67,57 ಮಿಲಿಯನ್ ಟನ್ ರಫ್ತಿಗೆ, ಅಂದರೆ ಶೇ. 51% ರಫ್ತಾಗಿದೆ. 2004–05ರಲ್ಲಿ 145.94 ಮಿಲಿಯನ್ ಟನ್ ಉತ್ಪಾದನೆ ಆದರೆ, ಸ್ಥಳೀಯವಾಗಿ ಉಪಯೋಗ ಮಾಡಿರುವಂಥದ್ದು ಶೇ. 48.15 ರಫ್ತು ಆಗಿರುವಂಥದ್ದು ಶೇ. 54% 2005–06ನೇ ಸಾಲಿನಲ್ಲಿ ಶೇ. 154.43% ಆದರೆ, ಸ್ಥಳೀಯ ಬಳಕೆಯಾಗಿರುವಂಥದ್ದು ಶೇ 58.23, ರಫ್ತು ಆಗಿರುವಂತದ್ದು ಶೇ. 89.27 ಅಂದರೆ ಶೇ. 57% ಆಗಿದೆ. 2006–07ರಲ್ಲಿ 172.30 ಮಿಲಿಯನ್ ಟನ್ ಆದರೆ, ಸ್ಥಳೀಯ ಬಳಕೆಯಾಗಿರುವಂಥದ್ದು 56.28, ರಫ್ತು 93.79 ಅಂದರೆ ಶೇ. 54 ರಷ್ಟು ಆಗಿದೆ.

2007–08ರಲ್ಲಿ 206.94 ಮಿಲಿಯನ್ ಟನ್ ಉತ್ಪಾದನೆಯಾದರೆ, ಸ್ಥಳೀಯ ಬಳಕೆಯಾಗಿರುವಂಥದ್ದು 81.20 ರಫ್ತು ಶೇ. 104 ಅಂದರೆ ಶೇ. 50ರಷ್ಟು ಆಗಿದೆ. 2008–09ರಲ್ಲಿ 210 ಮಿಲಿಯನ್ ಟನ್ ಉತ್ಪಾದನೆಯಾದರೆ, ಸ್ಥಳೀಯ ಬಳಕೆ 90%, ರಫ್ತು 105.87 ಅಂದರೆ ಶೇ. 48 ಇದೆ. ಇನ್ನು ಗಣಿಗಾರಿಕೆಯಲ್ಲಿ ಕರ್ನಾಟಕ ರಾಜ್ಯದ ಸ್ಥಿತಿಗತಿ ಯಾವ ರೀತಿ ಇದೆಯೆಂದರೆ, ಕರ್ನಾಟಕ ಇಡೀ ದೇಶದಲ್ಲೆ ಅತೀ ಹೆಚ್ಚಿನ ಅಂದರೆ ಶೇ. 74 ರಷ್ಟು magnetite ಹಾಗೂ ಶೇ. 11ರಷ್ಟು hematite ಕಬ್ಬಿಣದ ಅದಿರನ್ನು ಹೊಂದಿರುವಂಥ ರಾಜ್ಯವಾಗಿದೆ. ಅಂದರೆ ಅತ್ಯಂತ ಫಲವತ್ತಾದ ಕಬ್ಬಿಣದ ಅದಿರು ಸಿಗುವಂಥ ರಾಜ್ಯ ನಮ್ಮದಾಗಿದೆ. ಇದರ ವಿವರಗಳನ್ನು ಆಮೇಲೆ ಕೊಡುತ್ತೇನೆ, ಕಳೆದ 10 ವರ್ಷಗಳಲ್ಲಿ ಮಿತಿ

ಮೀರಿದ ಗಣಿಗಾರಿಕೆ ಮತ್ತು ಕಬ್ಬಿಣದ ಅನಿಯಂತ್ರಿತ ರಫ್ತಿನಿಂದ ರಾಜ್ಯದ ಮೇಲೆ ಆಗಿರುವಂಥ ಪರಿಣಾಮ ನಾವು ನೀವು ಯಾರು ಊಹೆ ಮಾಡುವುದಕ್ಕೆ ಸಾಧ್ಯವಿಲ್ಲ. ರಾಜ್ಯದ ಖನಿಜ ಸಂಪತ್ತು ಕರಗಿ ಶ್ರೀಮಂತ ರಾಷ್ಟ್ರಗಳಿಗೆ ಹರಿದು ಹೋಗುತ್ತಿದ್ದರೆ, ಸರ್ಕಾರದ ಖಜಾನೆಗೂ ವ್ಯಾಪಕ ನಷ್ಟವಾಗಿದೆ. ಇದರಿಂದ ನಮ್ಮ ಖಜಾನೆಯು ಭರ್ತಿಯಾಗಲಿಲ್ಲ, ನಾಡಿನ ಜನರ ಅಭಿವೃದ್ಧಿಗೂ ಇದರ ಸದ್ಬಳಕೆಯಾಗಲಿಲ್ಲ. ಇದರಿಂದ ಯಾರಿಗೋ ಹಿಡಿಯಷ್ಟು ಜನರಿಗೆ ಇದರ ಲಾಭವಾಯಿತು. ಇದರಿಂದ ಪರಿಸರದ ಮೇಲೆ ಆಗಿರುವಂಥ ಪರಿಣಾಮವನ್ನು ನಾವು ನೀವು ಕಲ್ಪನೆ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಇದು ಅಲ್ಲದೇ ರಾಜ್ಯದ ರಸ್ತೆಗಳು ಅದಿರಿನ ಸಾಗಾಣಿಕೆಯಿಂದ ಗುಂಡಿ ಬಿದ್ದಿವೆ, ನಮ್ಮ ಹಣಕಾಸಿನ ಇತಿಮಿತಿಯಲ್ಲಿ ರಿಪೇರಿ ಮಾಡುವುದಕ್ಕೂ ಆಗದೇ ಸಂಕಟದಲ್ಲಿರುವಂಥದ್ದು ಮತ್ತೆ ಗಣಿಗಾರಿಕೆ ಪ್ರದೇಶಗಳಲ್ಲಿ ಸಾಮಾನ್ಯ ಜನರ ಜೀವನ ಸಂಪೂರ್ಣ ಹದಗೆಟ್ಟಿರುವಂಥದ್ದು, ನಾನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಅಕ್ರಮ ಗಣಿಗಾರಿಕೆ ಮತ್ತು ಅನಿಯಂತ್ರಿತ ಗಣಿಕಾರಿಕೆಯನ್ನು ನಿಲ್ಲಿಸುವುದಕ್ಕೆ ಒಂದು ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡಿದ್ದೇನೆ. ಅದರ ಪರಿಣಾಮ ಏನು, ಅಕ್ರಮ ಗಣಿಗಾರಿಕೆಯನ್ನು ಎಷ್ಟು ತಡೆಯುವುದಕ್ಕೆ ಸಾಧ್ಯವಾಯಿತೆಂಬ ಬಗ್ಗೆ ಚರ್ಚೆ ಮಾಡೋಣ. ಆದರೆ ದೇಶದ ಇತಿಹಾಸದಲ್ಲಿ ಅದಿರಿನ ರಫ್ತು ನಿಷೇಧ ಮಾಡಿ ರಾಜ್ಯದೊಳಗೆ ಮೌಲ್ಯವರ್ದಿತ ಉದ್ದೇಶಗಳಿಗೆ ಈ ಕಬ್ಬಿಣದ ಅದಿರು ಬಳಕೆಯಾಗಬೇಕೆನ್ನುವಂಥದ್ದು ನಮ್ಮ ಸರ್ಕಾರದ ದೃಢ ನಿರ್ಧಾರ. ಹಾಗಾಗಿ ನಾನು ಅಧಿಕಾರಕ್ಕೆ ಬಂದ ಮೂರ್‍ನಾಲ್ಕು ತಿಂಗಳುಗಳಲ್ಲಿ ನೂತನ ಗಣಿ ನೀತಿಯನ್ನು ಜಾರಿಗೆ ತಂದಿದ್ದೇನೆ. ಅನಿಯಂತ್ರಿತ ಗಣಿಗಾರಿಕೆ ಮುಂದುವರೆದರೆ ಇನ್ನು ಕೆಲವೇ ವರ್ಷಗಳಲ್ಲಿ ಅಮೂಲ್ಯವಾದಂಥ ನಮ್ಮ ಖನಿಜ ಭಂಡಾರ ಖಾಲಿಯಾಗಿ ಮುಂದಿನ ಪೀಳಿಗೆಗೆ ನಾವು ಅನ್ಯಾಯ ಮಾಡಿದ ಹಾಗೆ ಆಗುತ್ತದೆನ್ನುವ ಅರಿವಿನಿಂದ ಇದನ್ನು ಮನಗಂಡು

ರಾಜ್ಯದ ಈ ಅಮೂಲ್ಯ ಕನಿಜ ಸಂಪತ್ತನ್ನು ರಕ್ಷಣೆ ಮಾಡುವ ದೃಷ್ಟಿಯಿಂದ ಮೌಲ್ಯವರ್ಧನೆಗೆ ಮಾತ್ರ ಖನಿಜಗಳ ಬಳಕೆ ಹಾಗೂ ಪರಿಸರ ಸಮತೋಲನ ಕಾಪಾಡುವ ದೃಷ್ಟಿಯಿಂದ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಹೊಸ ಗಣಿಗಾರಿಕೆ ನೀತಿಯನ್ನು ರೂಪಿಸಿ ಜಾರಿಗೊಳಿಸಿದ್ದೇನೆ. ನಾನು ಅತ್ಯಂತ ಜವಾಬ್ದಾರಿಯಿಂದ ಒಂದು ಮಾತನ್ನು ಹೇಳುತ್ತೇನೆ. ನಾನು ಅಧಿಕಾರಕ್ಕೆ ಬಂದಮೇಲೆ ಸಣ್ಣ ಪುಟ್ಟದ್ದಕ್ಕೆ ಒಂದಿಬ್ಬರಿಗೆ ಕೇಂದ್ರ ಸರ್ಕಾರದಿಂದ ಅನುಮತಿ ಸಿಕ್ಕಿರುವಂಥದ್ದು ಬಿಟ್ಟರೆ, ನಾನು ಇದರ ವಿವರಗಳನ್ನು ಹೇಳುತ್ತೇನೆ. 2008ರ ಡಿಸೆಂಬರ್‌ನಿಂದ ಮೌಲ್ಯವರ್ಧನೆಗೆ ಮಾತ್ರ ಅವಕಾಶವಿರುವಂಥ ಒಂದು ಗಣಿಗಾರಿಗೆ ನೀತಿ ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗಿದೆ. ಮತ್ತೆ ಅದನ್ನು ರಫ್ತು ಮಾಡುವ ಬದಲು ಸ್ಥಳೀಯವಾಗಿ ಉದ್ಯಮಗಳನ್ನು ಸ್ಥಾಪಿಸಿ, ಕಚ್ಚಾ ವಸ್ತುಗಳನ್ನು ಬಳಸಿಕೊಂಡು ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸುವ ಉದ್ಯಮಗಳಿಗೆ ಮಾತ್ರ . ಪ್ರೋತ್ಸಾಹ ನೀಡಲಾಗುತ್ತಿದೆ. ಇದರಿಂದಾಗಿ ಸ್ಥಳೀಯರಿಗೆ ಉದ್ಯೋಗದ ಅವಕಾಶಗಳು ಹೆಚ್ಚಾಗುವುದಲ್ಲದೇ ಸ್ಥಳೀಯ ಸಂಪನ್ಮೂಲಗಳು ಸ್ಥಳೀಯರಿಗಾಗಿ ನಾಡಿನ ಅಭಿವೃದ್ಧಿಗಾಗಿಯೇ, ಬಳಸುವುದಕ್ಕೆ ಇದರಿಂದ ಸಾಧ್ಯವಾಗುತ್ತದೆಂದು ನನ್ನ ಚಿಂತನೆ. ಇತ್ತೀಚೆಗೆ ಅಂದರೆ ಜೂನ್ ತಿಂಗಳ 3 ಮತ್ತು 4ನೇ ತಾರೀಖಿನಂದು ಬೆಂಗಳೂರಿನಲ್ಲಿ ಜರುಗಿದ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಕಬ್ಬಿಣ ಮತ್ತು ಉಕ್ಕು ಉದ್ಯಮಗಳಿಗೆ ಅನುಮೋದನೆ ನೀಡಿದಾಗ ನಾವು ಷರತ್ತುಗಳನ್ನು ಹಾಕಿದ್ದೇವೆ. ಅವರೆಲ್ಲರೂ ಭೂಮಿಯನ್ನು acquire ಮಾಡಿದ್ದಾರೆ. ಹಣವನ್ನು ಕಟ್ಟಿದ್ದಾರೆ. ಅವರು ಕಾರ್ಖಾನೆಯನ್ನು ಪ್ರಾರಂಭ ಮಾಡುವುದನ್ನು confirm ಮಾಡಿಕೊಂಡ ಮೇಲೆ, ಅವರಿಗೆ value added ಗೋಸ್ಕರ ಗಣಿಯನ್ನು ಕೊಡುವುದಕ್ಕೆ ಚಿಂತನೆ ಮಾಡಿ ಅನುಮೋದನೆ ಕೊಡುವ process ಈಗಾಗಲೇ

ನಮ್ಮದು ಪ್ರಾರಂಭವಾಗಿದೆ. ಅಂದರೆ ಮೌಲ್ಯವರ್ಧಿತ ವಸ್ತುಗಳನ್ನು ಉತ್ಪಾದಿಸುವ ಉದ್ದಿಮೆಗಳಿಗೆ ಮಾತ್ರ ಗಣಿಗಾರಿಕೆ ಅವಕಾಶ ನೀಡಲಾಗುತ್ತದೆ. ಅಂಥವರಿಗೆ ಮಾತ್ರ ಗಣಿಗಾರಿಕೆ ಪರವಾನಗಿಯನ್ನು ನೀಡಲಾಗುವುದೆಂದು ಇದರಿಂದ ಸ್ಪಷ್ಟವಾಗುತ್ತದೆ. ಹಳೆಯ ಪರವಾನಗಿಗಳನ್ನು ಉಪಯೋಗಿಸಿಕೊಂಡು. . .

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೇ. . .

ಶ್ರೀ ಬಿ. ಎಸ್. ಯಡಿಯೂರಪ್ಪ: ಮಾನ್ಯ ಸಿದ್ದರಾಮಯ್ಯನವರೆ, ನಾನು yield ಆಗಿಲ್ಲ.

ಶ್ರೀ ಸಿದ್ದರಾಮಯ್ಯ: Before proceeding further . . . ಒಂದೇ ಒಂದು ನಿಮಿಷ ಕುಳಿತುಕೊಳ್ಳಿ. ಇಷ್ಟೊಂದು ಕಠಿಣವಾದರೆ ಹೇಗೆ?

ಶ್ರೀ ಬಿ. ಎಸ್. ಯಡಿಯೂರಪ್ಪ: ಮಾನ್ಯ ಮಾತನಾಡುವ ವೇಗಕ್ಕೆ ಅಡ್ಡಿಯಾಗುತ್ತದೆ.

ಶ್ರೀ ಸಿದ್ಧರಾಮಯ್ಯ: ನಮಗೆ ಆಗಲಿಲ್ಲವೆ? ನೀವು ಹೇಳಿದ ಹಾಗೆಲ್ಲ ನಾವು ಕೇಳಿದ್ದೇವೆ. Before we proceed investors meet ಮುಂತಾದವುಗಳಿಗೆ ಹೋಗುವುದಕ್ಕೆ ಮುಂಚಿತವಾಗಿ, 2008ರಲ್ಲಿ ತಂದಿರುವ ಗಣಿ ನೀತಿ ಪ್ರಕಾರ ಅಕ್ರಮ ಗಣಿಗಾರಿಕೆ ನಿಲ್ಲಿಸಲು ಇವರಿಗೆ ಸಂಪೂರ್ಣ ಅಧಿಕಾರವಿದೆ. Under the Mines and Minerals Development and Regulation Act, 1956, ರಾಜ್ಯ ಸರ್ಕಾರಕ್ಕೇ ಬೇಕಾದಷ್ಟು ಅಧಿಕಾರವಿದೆ, ಇದು ಮೊದಲನೆಯದು, ಎರಡನೆಯದಾಗಿ Additional Chief Secretary ಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದಾರೆ. ಮುಖ್ಯಮಂತ್ರಿಗಳು ಕನಿಷ್ಠ ವರ್ಷಕ್ಕೊಮ್ಮೆ ಒಂದು ಸಭೆ ನಡೆಸಬೇಕೆಂದು ತೀರ್ಮಾನ

ಮಾಡಿಕೊಂಡಿದ್ದಾರೆ. Additional Chief Secretary ಎಷ್ಟು ಸಭೆಗಳನ್ನು ಮಾಡಿದರು? ಮುಖ್ಯಮಂತ್ರಿಗಳು ಕಳೆದ ಎರಡು ವರ್ಷಗಳಲ್ಲಿ ಎಷ್ಟು ಸಭೆಗಳನ್ನು ಮಾಡಿದರು? ಅಕ್ರಮ ಗಣಿಗಾರಿಕೆ ನಿಲ್ಲಿಸಲಿಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎನ್ನುವುದನ್ನು ಹೇಳಿದರೆ ನಮಗೂ ಅನುಕೂಲವಾಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ: ಒಳ್ಳೆಯದು, ನಾನು ಮಾಹಿತಿ ಕೊಡುತ್ತೇನೆ. ಹಳೆಯ ಪರವಾನಗಿಗಳನ್ನು ಉಪಯೋಗ ಮಾಡಿಕೊಂಡು, ಖನಿಜದ ರಫ್ತಿನಲ್ಲಿ ತೊಡಗಿರುವಂಥ ಕಂಪನಿಗಳ ವ್ಯವಹಾರವನ್ನು ನಿಯಂತ್ರಿಸಿ ಆ ಮೂಲಕ ಅಕ್ರಮ ಗಣಿಗಾರಿಕೆಯನ್ನು ಮತ್ತು ರಾಜ್ಯದ ಹೇರಳ ಖನಿಜ ಸಂಪತ್ತನ್ನು ಹೊರದೇಶಗಳಿಗೆ ಸಾಗಿಸುವ ಪ್ರವೃತ್ತಿಗೆ ಕಡಿವಾಣ ಹಾಕಲು ನಮ್ಮ ಸರ್ಕಾರ ಬದ್ಧವಾಗಿದೆ. ಇದಕ್ಕೆ ನಮಗೆ ನಿಮ್ಮ ಸಹಕಾರ ಬೇಕು. ಈಗಿರುವ ನಿಯಮಾವಳಿಯಂತೆ, ಇವತ್ತು ಅವನು renewalಗೆ ಬಂದಾಗ ನಾನು ಕಣ್ಣುಮುಚ್ಚಿಕೊಂಡು renewalಗೆ ಕಳುಹಿಸಬೇಕು. ಇಲ್ಲದಿದ್ದರೆ ಅವನು ಕೋರ್ಟಿಗೆ ಹೋಗುತ್ತಾನೆ ಅಥವಾ ಕೇಂದ್ರದ ಮೊರೆ ಹೋಗುತ್ತಾನೆ ಅದಕ್ಕಾಗಿ even renewalಗೂ ಸಹ ತಡೆಯಾಜ್ಞೆ ಕೊಡಲು ಅಥವಾ ರಾಜ್ಯ ಸರ್ಕಾರ ಅದಕ್ಕೆ ಅನುಮತಿ ಕೊಡುವುದಿಲ್ಲ ಎಂದು ಹೇಳುವಂಥ ಅಧಿಕಾರ ನಮ್ಮಲ್ಲಿ ಇಲ್ಲ. ಅಷ್ಟೇ ಅಲ್ಲ, ನ್ಯಾಯಬದ್ಧವಾಗಿ ವ್ಯವಹಾರ ಮಾಡುತ್ತೇವೆ ಎಂದು ಹೇಳಿಕೊಂಡು ಯಾರು ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿದ್ದಾರೆ, ಅವರು ಅಕ್ರಮ ನಡೆಸುತ್ತಿದ್ದಾರೆ ಎಂದು ಸಾಬೀತಾದಾಗ ಅವರ ಲೈಸೆನ್ಸನ್ನೇ ವಜಾ ಮಾಡುವುದಕ್ಕೆ ನಾವು ಕಠಿಣವಾದ ಕ್ರಮವನ್ನು ಕೈಗೊಳ್ಳ ಬೇಕಾಗುತ್ತದೆ. ಅದಕ್ಕೆ ನಾನು ನಿಮ್ಮ ಸಲಹೆಯನ್ನು ಕೇಳುವವನಿದ್ದೇನೆ. ಇದರ ಬಗ್ಗೆ ಸುದೀರ್ಘವಾದ ಚರ್ಚೆಯನ್ನು ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ. ಈ ಮನೆಯ ಎಲ್ಲಾ ಗೌರವಾನ್ವಿತ ಸದಸ್ಯರ ಸಹಕಾರ ನನಗೆ ಸಿಕ್ಕಿದರೆ ನಾನು

ನಿಶ್ಚಿತವಾಗಿ ಈ ಅಕ್ರಮ ಗಣಿಗಾರಿಕೆಯನ್ನು ರದ್ದು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಗಣಿಗಾರಿಕೆ ಮಾಡಲು ಲೈಸೆನ್ಸ್ ಪಡೆದು, ಅದರಲ್ಲಿ ಅವರು ಬದುಕಿರುವವರೆಗೆ ಒಂದು ಗುಡ್ಡವನ್ನು ಹಾಗೇ ಇಟ್ಟುಕೊಂಡು ಪಕ್ಕದ ಗುಡ್ಡದಲ್ಲಿ ಗಣಿಗಾರಿಕೆ ಮಾಡುವುದು ನಡೆಯುತ್ತಿದೆ. ಇದರಲ್ಲಿ ಅರಣ್ಯ ಇಲಾಖೆಯ ಅಧಿಕಾರಿಗಳೂ ಶಾಮೀಲಾಗಿದ್ದಾರೆ, ಪೊಲೀಸ್ ಇಲಾಖೆ ಸೇರಿ ಎಲ್ಲರೂ ಈ ದಂಧೆಯಲ್ಲಿ ಒಟ್ಟಾಗಿರುವುದು ಹೇಗೆ ಎನ್ನುವುದನ್ನು ನಾನು ಕೊಡುತ್ತೇನೆ. "ಈ ರಾಜ್ಯದ ಮುಖ್ಯಮಂತ್ರಿಯಾಗಿ ನೀವೇ ಹೀಗೆ ಹೇಳಿಬಿಟ್ಟರೆ ಹೇಗೆ ಯಡಿಯೂರಪ್ಪನವರೇ" ಎಂದರೆ ಇದು ನಡೆಯುತ್ತಿದೆ ಸ್ವಾಮಿ, ಈ ಬಗ್ಗೆ ಮಾಹಿತಿಗಳನ್ನು ನಾನು ಮುಂದೆ ಕೊಡುತ್ತೇನೆ. ಅದಕ್ಕಾಗಿ ನನಗೆ ನಿಮ್ಮ ಸಂಪೂರ್ಣ ಸಹಕಾರ ಬೇಕು. ಆದ್ದರಿಂದಲೇ ಈ ಖನಿಜಗಳ ರಫ್ತು ನಿಷೇಧಿಸುವಂತೆ ಕೋರಿ ನಾನು ದಿನಾಂಕ 3-7-2010 ರಂದು ಮಾನ್ಯ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ನಮ್ಮ ರಾಜ್ಯ ಸೇರಿ ಹೇರಳ ನಿಜ ಸಂಪತ್ತುಳ್ಳ ಎಲ್ಲ ರಾಜ್ಯಗಳಲ್ಲೂ ಈ ನಿಷೇಧ ಜಾರಿಗೆ ಬರಬೇಕು. ಮೌಲ್ಯವರ್ಧನೆ ಮೂಲಕ ಅದರಿಂದ ಉತ್ಪನ್ನಗಳನ್ನು ತಯಾರಿಸುವಂಥ ಕಾರ್ಖಾನೆಗಳನ್ನು ಸ್ಥಾಪಿಸುವವರಿಗೆ ಮಾತ್ರ ಗಣಿಗಾರಿಕೆಗೆ ಪರವಾನಗಿ ನೀಡುವಂಥ ಪದ್ಧತಿ ಜಾರಿಗೆ ಬರಬೇಕು. ಇದಕ್ಕೆ ಕೇಂದ್ರ ಸರ್ಕಾರ ಅಗತ್ಯವಾದ ಕಾನೂನು ತಿದ್ದುಪಡಿ ತರಬೇಕು ಎಂದು ಹೇಳಿ ಪ್ರಧಾನ ಮಂತ್ರಿಗಳಿಗೆ ನಾನು ಪತ್ರವನ್ನು ಬರೆದಿದ್ದೇನೆ. ರಾಜ್ಯದಿಂದ ನಾವು ಒಂದು ನಿಯೋಗ ಹೋಗೋಣ, ಪ್ರಧಾನಿಯವರನ್ನು ಭೇಟಿ ಮಾಡೋಣ, ರಾಷ್ಟ್ರಪತಿಯವರನ್ನು ಭೇಟಿ ಮಾಡೋಣ, ಕೇಂದ್ರದ ಪ್ರತಿಪಕ್ಷದ ನಾಯರನ್ನು ಭೇಟಿ ಮಾಡೋಣ. ಇದರ ಮೂಲಕ ಕರ್ನಾಟಕ ರಾಜ್ಯ ಅಕ್ರಮ ಗಣಿಗಾರಿಕೆಯ್ನು ನಿಲ್ಲಿಸುವುದಕ್ಕೆ ದೇಶದಲ್ಲಿ ಒಂದು ಹೊಸ ತಿರುವನ್ನು ಕೊಡುವಂಥ ಹೆಗ್ಗಳಿಕೆಗೂ ಸಹ ನಾವು ಪಾತ್ರರಾಗುತ್ತೇವೆ. ಅದಕ್ಕಾಗಿ ಸರ್ವಾನುಮತದಿಂದ ಒಂದು ನಿರ್ಣಯವನ್ನು ಸಹ ಇಲ್ಲಿ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಡೋಣ ಎಂದು ನಾನು

ಪ್ರಾರಂಭದಲ್ಲೇ ಹೇಳಿದೆ. ಈ ಅಕ್ರಮ ಗಣಿಗಾರಿಕೆಯನ್ನು ನಿಯಂತ್ರಿಸುವುದಕ್ಕೆ ನಮ್ಮ ಸರ್ಕಾರ ಹಲವು ನಿರ್ದಿಷ್ಟ ಕ್ರಮಗಳನ್ನು ಕೈಗೊಂಡಿದೆ. ಮೊದಲನೆಯದು, ಮೊದಲು ಇದ್ದ bulk permit ವ್ಯವಸ್ಥೆ ಬದಲು ಪ್ರತಿ ಲೋಡ್ ಮತ್ತು ಟ್ರಿಪ್‌ಗೆ ನಿರ್ದಿಷ್ಟ ಪರವಾನಗಿ ನಿಡುವಂಥ ವ್ಯವಸ್ಥೆ ಜಾರಿ ಮಾಡುವುದು. bulk permit ಎಂದರೆ ಗಣಿಗಾರಿಕೆ ಮಾಡುವವನ ಹತ್ತಿರವೇ ಎಲ್ಲವೂ ಇದ್ದು, ಅವನೇ ಲಾರಿಗೆ ಬರೆದುಕೊಟ್ಟು, ಮತ್ತೆ ಅದನ್ನೇ ಅವನು ವಾಪಸ್ಸು ತಂದು, ಮತ್ತೆ ಅದನ್ನೇ ಉಪಯೋಗಿಸಿಕೊಂಡು ಎಲ್ಲ ರೀತಿಯ ದಂಧೆಗಳನ್ನು ಮಾಡುವುದಕ್ಕೆ ಅವಕಾಶವಿತ್ತು. ಲೋಕಾಯುಕ್ತರ ಪ್ರಯತ್ನದಿಂದ bar coding ಹಾಗೂ Hologram ವ್ಯವಸ್ಥೆಯನ್ನು ನಾವು ಜಾರಿಗೆ ತಂದಿದ್ದೇವೆ. ವಿವಿಧ ಇಲಾಖೆಗಳ ಸಮನ್ವಯದೊಡನೆ ಅಂದರೆ ಗಣಿ ಇಲಾಖೆ, ಅರಣ್ಯ ಇಲಾಖೆ, ವಾಣಿಜ್ಯ ತೆರಿಗೆ ಇಲಾಖೆ, ಸಾರಿಗೆ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗಳ ನಡುವೆ ಸಮನ್ವಯದೊಡನೆ ಪ್ರಮುಖ ಆಯಕಟ್ಟಿನ ಸ್ಥಳಗಳಲ್ಲಿ ಸಮಗ್ರವಾದಂಥ ತನಿಖೆಗೆ ಅವಕಾಶವಿರುವಂಥ ಚೆಕ್‌ಪೋಸ್ಟ್‌ಗಳ ಸ್ಥಾಪನೆ, ಖನಿಜಗಳ ಮೇಲಿನ ರಾಜಧನ ವರ್ಷಕ್ಕೆ 80 ಕೋಟಿ ರೂಪಾಯಿ ಬರುತ್ತಿದ್ದುದು, ನಾವು ಈ ಎಲ್ಲ ಬಿಗಿ ಮಾಡಿದ ಮೇಲೆ ನಮ್ಮ ಸರ್ಕಾರಕ್ಕೆ 320 ಕೋಟಿ ರಾಜಧನ ಬರುತ್ತಿದೆ. ರಾಜ್ಯದ ಹೆದ್ದಾರಿಗಳಲ್ಲಿ 10 ಕಡೆ ಗಣಕೀಕೃತ toll plaza ಗಳ ಸ್ಥಾಪನೆಗೂ ಸಹ ನಾವು ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಖನಿಜ ಸಾಗಿಸುವ ವಾಹನಗಳ ತೀವ್ರ ತಪಾಸಣೆ ಮಾಡುತ್ತಿದ್ದು, ಕಳೆದ 2 ವರ್ಷಗಳಲ್ಲಿ 16.45 ಲಕ್ಷ ವಾಹನಗಳನ್ನು ತಪಾಸಣೆ ಮಾಡಿ ಅಕ್ರಮ ಎಸಗಿದ್ದ 30,400 ವಾಹನಗಳ ಮೇಲೆ ದಂಡ ಹಾಕಿದ್ದೇವೆ. ಸುಮಾರು ಆರೂವರೆ ಲಕ್ಷ ಟನ್ ಕಬ್ಬಿಣದ ಅದಿರನ್ನು ವಶಪಡಿಸಿಕೊಂಡು ಹರಾಜು ಹಾಕಿದ್ದೇವೆ. ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಹೆಚ್ಚಿಸುವುದಕ್ಕೆ E-Permit ವ್ಯವಸ್ಥೆಯನ್ನು

ಜಾರಿಗೊಳಿಸುವ ಉದ್ದೇಶ ನಮಗಿದೆ. ಉಪಗ್ರಹ ಆಧಾರಿತ ಸಮೀಕ್ಷೆಗಳ ಮೂಲಕ ಅಕ್ರಮ ಗಣಿಗಾರಿಕೆ ಬಗ್ಗೆ ಮಾಹಿತಿ ಸಂಗ್ರಹಣೆ ಮಾಡುವ ವ್ಯವಸ್ಥೆ ಮಾಡುತ್ತಿದ್ದೇವೆ. ಗಣಿ ವಲಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ತಪಾಸಣೆ ಮತ್ತು ಪರಿಶೀಲನಾ ಕಾರ್ಯಗಳಿಗೆ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಸಮನ್ವಯ ಮತ್ತು ಉನ್ನತಾಧಿಕಾರಿಗಳ ಒಂದು ಸಮಿತಿಯನ್ನು ರಚನೆ ಮಾಡಲಾಗಿದೆ. ಅದಲ್ಲದೇ, ಪ್ರತಿ ಲಾರಿಯ ಮೇಲೆ 500 ರೂಪಾಯಿ ತೆರಿಗೆ ಹಾಕುವಂಥ ಒಂದು ಸರ್ಕಾರಿ ಆದೇಶವನ್ನು ನಾನು ಈಗಾಗಲೇ ಹೊರಡಿಸಿದ್ದೇನೆ. ಕರ್ನಾಟಕ ಕೈಗಾರಿಕಾ ನೀತಿ 2009–14ರ ಪ್ರಸ್ತುತ ಅನುಷ್ಠಾನದಲ್ಲಿದ್ದ ರಾಜ್ಯದ ಮಾನವ ಮತ್ತು ನೈಸರ್ಗಿಕ ಸಂಪನ್ಮೂಲವನ್ನು ವ್ಯವಸ್ಥಿತ ಮತ್ತು ವೈಜ್ಞಾನಿಕ ರೀತಿಯಲ್ಲಿ ಬಳಸಿಕೊಂಡು ಮುಂದಿನ 5 ವರ್ಷಗಳಲ್ಲಿ 10 ಲಕ್ಷ ಮಂದಿಗೆ ಉದ್ಯೋಗಾವಕಾಶವನ್ನು ದೊರಕಿಸುವಂಥ ಒಂದು ಗುರಿಯನ್ನು ನಮ್ಮ ಸರ್ಕಾರ ಇಟ್ಟುಕೊಂಡಿದೆ. ರಾಜ್ಯ ಸರ್ಕಾರದ ವಿಶೇಷ ಪ್ರಯತ್ನ ಮತ್ತು ತೀವ್ರ ಕ್ರಮಗಳ ಹೊರತಾಗಿಯೂ ಗಣಿಗಾರಿಕೆ ಮತ್ತು ರಫ್ತು ಚಟುವಟಿಕೆ ಅವ್ಯಾಹತವಾಗಿ ನಡೆದಿದ್ದು, ರಾಜ್ಯದ ನೈಸರ್ಗಿಕ ಸಂಪನ್ಮೂಲ ಇನ್ನು ಕೆಲವೇ ವರ್ಷಗಳಲ್ಲಿ ನಶಿಸಿ ಹೋಗುವಂಥ ಅಪಾಯವಿದೆ. ಆದ್ದರಿಂದ ಖನಿಜಗಳನ್ನು ಕಚ್ಚಾ ರೂಪದಲ್ಲಿ ಮಾತ್ರ ರಫ್ತು ಮಾಡದಂತೆ ಮತ್ತು ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸುವುದಕ್ಕೆ ಪ್ರೋತ್ಸಾಹಿಸುವಂತೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ನೀತಿಗಳನ್ನು ರೂಪಿಸುವುದು ಜರೂರು ಅಗತ್ಯವಿದೆ. ನಾವಂತೂ ಈಗಾಗಲೇ ಶಾಸನ ಮಾಡಿದ್ದೇವೆ. ಈ ದಿಸೆಯಲ್ಲಿ ಖನಿಜ ಸಂಪನ್ಮೂಲ ಹೇರಳವಾಗಿರುವ ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯೊಂದನ್ನು ಕರೆದು ವಿಸ್ತೃತವಾಗಿ ಚರ್ಚೆ ಮಾಡಿ ನಿರ್ಣಯ ಕೈಗೊಳ್ಳುವಂತೆ ನಾನು ಪ್ರಧಾನ ಮಂತ್ರಿಗಳನ್ನು ಪ್ರಾರ್ಥನೆ ಮಾಡುತ್ತೇನೆ. ಈ ಬಗ್ಗೆ ಅವರಿಗೆ ನಾನು ಮನವಿಯನ್ನು ಸಲ್ಲಿಸುವವನಿದ್ದೇನೆ. ಇನ್ನೊಂದು ಮಾತನ್ನು ನಾನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಇವತ್ತು ಈ

ಗಣಿಗಾರಿಕೆಯಿಂದ ನಮ್ಮ ರಾಜ್ಯದಲ್ಲಿ ಏನೇನು ಅನಾಹುತವಾಗಿದೆ ಎನ್ನುವ ವಿಷಯದಲ್ಲಿ ನಾನು ಯಾರಿಗೂ ಬೆಟ್ಟು ಮಾಡಿ ತೋರಿಸುವುದಿಲ್ಲ. ಏಕೆಂದರೆ ಒಂದು ಬೆಟ್ಟು ನಿಮ್ಮನ್ನು ತೋರಿಸಿದರೆ, ನಾಲ್ಕು ಬೆಟ್ಟು ನನ್ನನ್ನೇ ನೋಡುತ್ತಿರುತ್ತದೆ. ಕಳೆದ ಎರಡು ವರ್ಷಗಳಲ್ಲಿ ಇದರ ಅರಿವು ನನಗಿದೆ. ಆದರೆ ಏನಾಗಿದೆ ಎನ್ನುವ ಬಗ್ಗೆ ಈ ಮನೆಗೆ ವರದಿ ಸಲ್ಲಿಸುವುದು ಮಾಹಿತಿ ಕೊಡುವುದು ಇಷ್ಟು ವರ್ಷಗಳು ಆಗದೇ ಇದ್ದರೂ ಸಹ ಇವತ್ತು ಇದು ನನ್ನ ಕರ್ತವ್ಯವಾಗಿದೆ. ಗಣಿಗಾರಿಕೆ ಕ್ಷೇತ್ರದಲ್ಲಿ ಕಳೆದ 10 ವರ್ಷಗಳಿಂದ ನಿರೀಕ್ಷೆಗೆ ಮೀರಿ ಬೆಳವಣಿಗೆಯಾಗಿರುವುದು ಕಂಡು ಬರುತ್ತದೆ. ಗಣಿ ಉದ್ಯಮದ ಈ ಬೆಳವಣಿಗೆಯಿಂದಾಗಿ ಅನಧಿಕೃತ ಗಣಿಗಾರಿಕೆ, ಒತ್ತುವರಿ ಪ್ರಕರಣ, ಅಕ್ರಮ ಅದಿರು ಸಾಗಾಣೆ ಮಾಡಿ ಹೊರದೇಶಕ್ಕೆ ರಫ್ತು ಮಾಡುವ ಪ್ರಸಂಗ ನಿರಂತರವಾಗಿ ನಡೆದುಕೊಂಡು ಬಂದಿದೆ. ಈ ರೀತಿಯ ಅಕ್ರಮ ಗಣಿಗಾರಿಕೆ ಚಟುವಟಿಕೆಗಳು ಈ ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲದೆ, ಗಣಿಗಾರಿಕೆ ನಡೆಯುವ ಎಲ್ಲ ರಾಜ್ಯಗಳಲ್ಲಿಯೂ ನಡೆಯುತ್ತಿರುವಂಥದ್ದು ಸರ್ವೆಸಾಮಾನ್ಯವಾಗಿ ನಿಮಗೆಲ್ಲರಿಗೂ ಗೊತ್ತಿರುವಂಥ ಸಂಗತಿ. ನಮ್ಮ ರಾಜ್ಯಕ್ಕೆ ಸಂಬಂಧಿಸಿದಂತೆ ಕಳೆದ 6–7 ವರ್ಷಗಳ ಅಂಕಿ ಅಂಶಗಳನ್ನು ಪರಿಶೀಲಿಸಿದಾಗ, ಅಕ್ರಮವಾಗಿ ಕಬ್ಬಿಣದ ಅದಿರು ರಫ್ತಿಗೆ ಪರವಾನಿಗೆ ನೀಡಿದ ಪ್ರಮಾಣಕ್ಕಿಂತ ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಕಬ್ಬಿಣದ ಅದಿರನ್ನು ಅನಧಿಕೃತವಾಗಿ ಸಾಗಿಸಿ ರಫ್ತು ಮಾಡುವಂಥದ್ದು ಈ ಕೆಳಕಂಡ ಅಂಕಿ ಅಂಶಗಳಿಂದ ವೇದ್ಯವಾಗುತ್ತದೆ. ಉದಾಹರಣಗೆ, 2003–04ನೇ ಸಾಲಿನಲ್ಲಿ ಅನುಮತಿ ಕೊಟ್ಟಿದ್ದು 25,27,001 metric tonne, ರಫ್ತಾಗಿರುವುದು 45,76,962 metric tonne, ಅಂದರೆ ವ್ಯಾತ್ಯಾಸ 20,49,961 metric tonne ಕಬ್ಬಿಣದ ಅದಿರು ಕಾನೂನು ಬಾಹಿರವಾಗಿ permit ಇಲ್ಲದೆ ಹೊರಗಡೆ ಹೋಗಿದೆ. 2004–05ರಲ್ಲಿ 64,51,665 metric tonne ಗೆ ಅನುಮತಿ

ನೀಡಿರುವಂಥದ್ದು, ಹೊರಗಡೆ ಹೋಗಿರುವುದು 1,16,91,183 metric tonne, ವ್ಯಾತ್ಯಾಸ ಎಷ್ಟೆಂದರೆ 52,39,518 metric tonne, ಇಷ್ಟು ಅನುಮತಿ ಇಲ್ಲದ ಹೊರಗಡೆಗೆ ರಫ್ತಾಗಿದೆ. 2005–06ರಲ್ಲಿ 92,99,600 metric tonne, ರಫ್ತಾಗಿರುವುದು 1,14,71,092 metric tonne, ಅಂದರೆ ವ್ಯತ್ಯಾಸ 21,71,492 metric tonne, 2006–07ರಲ್ಲಿ ಅನುಮತಿ ಸಿಕ್ಕಿರುವಂಥದ್ದು 60,55,833 metric tonne, ರಫ್ತಾಗಿರುವುದು 1,08,00,478 metric tonne, ಅಂದರೆ 47,44,645 metric tonne permit, ಇಲ್ಲದೆಯೇ ರಫ್ತಾಗಿದೆ. 2007–08ರಲ್ಲಿ ಅನುಮತಿ ಸಿಕ್ಕಿರುವಂಥದ್ದು 89,73,490 metric tonne ರಫ್ತಾಗಿರುವುದು 1,47,34,538 metric tonne, ಅಂದರೆ ವ್ಯತ್ಯಾಸ 57,61,048 metric tonne. 2008–09ರಲ್ಲಿ ಅನುಮತಿ ನೀಡಿರುವುದು 76,64,127 metric tonne, ರಫ್ತಾಗಿರುವುದು 1,10,60,251 metric tonne, ವ್ಯಾತ್ಯಾಸ 33,96,126 metric tonne, 2009–10ರಲ್ಲಿ ಈ ದಂಧೆ ಎಲ್ಲ ಎಲ್ಲೆ ಮೀರಿ ನಡೆದ ಪರಿಣಾಮ ಅನುಮತಿ ನೀಡಿರುವುದು 60,71,482 metric tonne, ರಫ್ತಾಗಿರುವುದು 1,31,99,419 metric tonne, ಅಂದರೆ ವ್ಯತ್ಯಾಸ 71,27,930 metric tonne, ಇದು ಇತ್ತೀಚೆಗೆ ನಡೆದಿರುವುದರಲ್ಲಿ highest ಇದೆ. ಇದನ್ನು ಎಲ್ಲ ಮಾನ್ಯ ಸದಸ್ಯರು ಗಮನಿಸಬೇಕು. ಈ ರಾಜ್ಯದ ಅದಿರು ಕೇವಲ ಮಂಗಳೂರು, ಕಾರವಾರ ಬೇಲೇಕೇರಿ ಬಂದರುಗಳಲ್ಲಿ ಮಾತ್ರ ಹೋಗದೆ ನೆರೆ ರಾಜ್ಯಗಳಲ್ಲಿರುವ ಬಂದರುಗಳಾದ ಚನ್ನೈ ಗೋವಾ, ಕೃಷ್ಣಪಟ್ಟಣಂ, ಕಾಕಿನಾಡ ಮತ್ತು ವೈಜಾಗ್ ನಿಂದ ಹೋಗಿದೆ. ಹಿಂದೆ ಹೇಳಿದ್ದಕ್ಕೆ ಸೇರಿಸಿಕೊಂಡು ಅದರ

ವಿವರ ನೋಡಿದರೆ ಗಾಬರಿಯಾಗುತ್ತದೆ. 2003-04ರಲ್ಲಿ ಚನ್ನೈಗೆ 71 lakhs metric tonne ಮರ್ಮಗೋವಾಕ್ಕೆ 74 lakhs metric tonne ವೈಜಾಗ್‌ಕ್ಕೆ 6 lakhs metric tonne ಹೋಯಿತು. 2004-05ರಲ್ಲಿ 102 lakhs metric tonne ಚನ್ನೈಗೆ ಮರ್ಮಗೋವಾಕ್ಕೆ 72 lakhs metric tonne ಕಾಕಿನಾಡಕ್ಕೆ 42 ಸಾವಿರ metric tonne ಮರ್ಮಗೋವಾಕ್ಕೆ ವೈಜಾಗಕ್ಕೆ 8 ಲಕ್ಷ metric tonne ಹೋಯಿತು. 2005-06ರಲ್ಲಿ 7 ಲಕ್ಷ metric tonne ಚನ್ನೈಗೆ, 13 ಲಕ್ಷ metric tonne ಮರ್ಮಗೋವಾಕ್ಕೆ 22 ಸಾವಿರ metric tonne ಕೃಷ್ಣಪಟ್ಟಣಂಗೆ, ಕಾಕಿನಾಡಕ್ಕೆ 1.6 ಲಕ್ಷ metric tonne ವೈಜಾಗ್‌ಗೆ 2 ಲಕ್ಷ metric tonne ಹೋಯಿತು. 2006-07ರಲ್ಲಿ, ಚನ್ನೈಗೆ 4 ಲಕ್ಷ ಟನ್, ಮರ್ಮಗೋವಾಗೆ 9 ಲಕ್ಷ ಟನ್, ಕೃಷ್ಣಕಟ್ಟಣಂಗೆ 37 ಸಾವಿರ ಟನ್ ಕಾಕಿನಾಡಕ್ಕೆ 1.5 ಲಕ್ಷ ಟನ್ ಹೋಯಿತು. 2007-08ರಲ್ಲಿ 31 ಲಕ್ಷ ಟನ್ ಚನ್ನೈಗೆ, 56 ಲಕ್ಷ ಟನ್ ಮರ್ಮಗೋವಾಕ್ಕೆ, ಕೃಷ್ಣಪಟ್ಟಣಂಗೆ 9 ಲಕ್ಷ ಟನ್, ಕಾಕಿನಾಡಕ್ಕೆ 5 ಲಕ್ಷ ಟನ್, ವೈಜಾಗ್‌ಗೆ 1.5 ಲಕ್ಷ ಟನ್ ಹೋಯಿತು. 2008--09ರಲ್ಲಿ 67 ಲಕ್ಷ ಟನ್ ಚನ್ನೈಗೆ, ಮರ್ಮಗೋವಾಕ್ಕೆ 40 ಲಕ್ಷ ಟನ್, ಕೃಣ್ಣಪಟ್ಟಣಂಗೆ 35 ಲಕ್ಷ ಟನ್, ಕಾಕಿನಾಡಕ್ಕೆ 13 ಲಕ್ಷ ಟನ್ ಹೋಯಿತು. 2009-10ರಲ್ಲಿ ಕಾರಣ ಏನೋ ಗೊತ್ತಿಲ್ಲ. ಈ ವ್ಯವಹಾರಗಳನ್ನು ತನಿಖೆ ಮಾಡಿ ನೋಡಿದಾಗ ಸ್ವಲ್ಪ ಕಡಿಮೆಯಾಗಿದೆ. ಏಕೆಂದು ಅರ್ಥವಾಗಲಿಲ್ಲ. 2009-10ರಲ್ಲಿ ಚನ್ನೈಗೆ ಕೇವಲ 2.5 ಲಕ್ಷ ಟನ್, ಕೃಷ್ಣಪಟ್ಟಣಂಗೆ ಕೇವಲ 14 ಲಕ್ಷ ಟನ್, ಕಾಕಿನಾಡಕ್ಕೆ 18 ಸಾವಿರ ಟನ್ ಈ ರೀತಿ ಮೇಲ್ಕಂಡ ಬಂದರುಗಳಿಂದ ಅನಧಿಕೃತವಾಗಿ ರಫ್ತಾಗಿದೆ. ನಾನು ಯಾವುದನ್ನೂ ಮುಚ್ಚಿಡುವುದಿಲ್ಲ. ಈ ದಾಖಲೆಗಳನ್ನು ಪುಸ್ತಕವಾಗಿ ಪ್ರಿಂಟ್ ಮಾಡಿ ನೀವು ಹೋಗುವುದರೊಳಗೆ ನಾನೇನು ಮಾತನಾಡಿದ್ದೇನೆ,

ಎಲ್ಲಾ ವಿವರಗಳನ್ನೂ ಈ ಮನೆಯ ಸದಸ್ಯರಿಗೆ, ಎಂಪಿಗಳಿಗೆ, ಪ್ರಧಾನಿಗೆ, ರಾಷ್ಟ್ರಪತಿಗೆ, ದೇಶದ ಎಲ್ಲ ಮುಖ್ಯಮಂತ್ರಿಗಳಿಗೆ ನಾನು ಕಳುಹಿಸಿಕೊಡುತ್ತೇನೆ. ಈ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ನನ್ನ ಸರ್ಕಾರ ಅಧಿಕಾರಕ್ಕೆ ಬರುವ ಮೊದಲು ಸಹ ಇಂಥ ಅಕ್ರಮ ಅದಿರು ಸಾಗಾಣಿಕೆ ದಂದೆ ನಡೆಯುತ್ತಿತ್ತು ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿತ್ತು ಎಂದು ಗೌರವಾನ್ವಿತ ಈ ಮನೆಯ ಸದಸ್ಯರಿಗೆ ತಿಳಿಸಲಿಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಷಯವೇನೆಂದರೆ ಇಲಿ ಯಾರ್‍್ಯಾರು ಕಬ್ಬಿಣದ ಅದಿರು ಸ್ನೇಹಿತರು ಇದ್ದೀರಿ, ಬಂಧು ಬಳಗದವರಿಗೆ ಕೊಡಿಸಿದ್ದೀರಿ, ಅವರಿಂದ ನೋಡಿ ತಿಳಿದುಕೊಳ್ಳಿ, ಪ್ರತಿ ವಾಹನಕ್ಕೆ 16 ಟನ್ ಕಬ್ಬಿಣದ ಅದಿರನ್ನು ಹಾಕಿಕೊಂಡು ಹೋಗುವುದಕ್ಕೆ ಪರವಾನಿಗೆ ನೀಡುತ್ತೇನೆ. ಆದರೆ, 18,20,24,30 ಟನ್, ಜಯಚಂದ್ರರವರು ಹೇಳಿದ ಹಾಗೆ 40 ಟನ್‌ವರೆಗೆ ಲಾರಿಯಲ್ಲಿ ಹಾಕಿಕೊಂಡು ಹೋಗುವುದರಿಂದ ಈ ವ್ಯಾತ್ಯಾಸ ಇಲ್ಲಿಯೇ ನಿಮಗೆ ಸಿಗುತ್ತದೆ.

ಶ್ರೀ ಸಿದ್ಧರಾಮಯ್ಯ: 40 ಟನ್ ಹಾಕುತ್ತಾರೆ

ಶ್ರೀ ಬಿ. ಎಸ್. ಯಡಿಯೂರಪ್ಪ: ಹೌದು, ಅದನ್ನು ಇಲ್ಲಾ ಎಂದು ಹೇಳುವುದಿಲ್ಲ. ಬಹಳ ಜನರು ಪರವಾನಗಿಯನ್ನೇ ತೆಗೆದುಕೊಳ್ಳುವುದಿಲ್ಲ. Duplicate receipts ಗಳೆಲ್ಲ ಏನೇನು ಕತೆಯಿದೆ, ಅದೆಲ್ಲಾ ಕರ್ಮಕಾಂಡ. ಕೆಲವರನ್ನು ನೇಣು ಹಾಕಬೇಕಾಗುತ್ತದೆ. ಯಾರು ಅಧಿಕಾರಿಗಳು ಶಾಮೀಲಾಗಿದ್ದಾರೆ, ನಿನ್ನೆ ನೀವು ಹೇಳಿದಿರಿ, ಅವರನ್ನು ನೇಣು ಹಾಕಬೇಕಾಗುತ್ತದೆ. ಇದನ್ನು ಅಷ್ಟು ಸುಲಭದಲ್ಲಿ ಬಿಡಲು ಆಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ: ನೇಣಿಗೆ ಹಾಕಬೇಕೆಂದು ನಾನು ಹೇಳಿದಾಗ ನಿಮಗೆ ಈ ಕೋಪ ಬರಲಿಲ್ಲ ಆದರೆ ಈಗ ನೀವು ಅದನ್ನು ಹೇಳುವಾಗ ಕೋಪ ಬರುತ್ತಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ: ನೀವು ಹೇಳಿದಾಗಲೂ ನಾನು ಕೋಪ ಮಾಡಿಕೊಳ್ಳಲಿಲ್ಲ. ನಾನು ನೀವು ಹಳ್ಳಿಯಲ್ಲಿ ಬೆಳೆದಂಥವರು ಹಳ್ಳಿ back ground ನಿಂದ ಬಂದಿರತಕ್ಕವರು. ಈ ಭಾಷೆಯೇ ನಮ್ಮ ಹಳ್ಳಿಯಲ್ಲಿರುವ ರೈತನಿಗೆ ಅರ್ಥವಾಗುವುದು. ಈ ರೀತಿ ಕಬ್ಬಿಣದ ಅದಿರು ಸಾಗಾಣಿಕೆಯಾಗುತ್ತಿದೆ. ಗಣಿ ಗುತ್ತಿಗೆಗಳಲ್ಲಿ ಪರವಾನಗಿಗಳನ್ನು ಉಪಯೋಗಿಸಿ ಪಟ್ಟಾ ಜಮೀನಿನಲ್ಲಿ ಅಥವಾ ಅರಣ್ಯದ ಜಮೀನಿನಲ್ಲಿ ಅದಿರನ್ನು ತೆಗೆದು ಸಾಗಿಸಿರುವುದು ಅನಧಿಕೃತ ಸಾಗಾಣಿಕೆಯಾಗಿದೆ. ಒಂದೇ ಪರ್ಮಿಟ್‌ನ್ನು ಹಲವಾರು ಬಾರಿ ಉಪಯೋಗಿಸಿ ಸಹ ಅನಧಿಕೃತವಾಗಿ ಸಾಗಾಣಿಕೆ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜಕೀಯ ಪ್ರೇರಿತವಾಗಿ ಪ್ರತಿಪಕ್ಷಗಳು ನಮ್ಮ ಸರ್ಕಾರವನ್ನು ಹೊಣೆಗಾರಿಕೆ ಮಾಡಿರುವುದು ಎಷ್ಟರ ಮಟ್ಟಿಗೆ ನ್ಯಾಯ? ನಮ್ಮ ರಾಜ್ಯದ ಖನಿಜ ಸಂಪತ್ತು ಲೂಟಿ ಆಗದಂತೆ ತಡೆಗಟ್ಟತಕ್ಕ ಕಟ್ಟುನಿಟ್ಟಿನ ಕ್ರಮವನ್ನು ನಮ್ಮ ಸರ್ಕಾರ ತೆಗೆದುಕೊಳ್ಳುತ್ತಿದೆ. ಇದ್ದಕೆ ಪೂರಕವಾಗಿ ಈ ರೀತಿ ಅನಾರೋಗ್ಯಕರ ಪರಿಸ್ಥಿತಿ ಉದ್ಭವಿಸುವುದಕ್ಕೆ ಮೂಲ ಕಾರಣವದಂಥ ಗಣಿ ಗುತ್ತಿಗೆಗಳ ಮಂಜೂರಾತಿಯ ಬಗ್ಗೆ ಕೆಲವು ಮಾಹಿತಿಯನ್ನು ಈ ಸದನಕ್ಕೆ ಕೊಡಬಯಸುತ್ತೇನೆ. ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದ ಅಧಿಕಾರದ ಅವಧಿಯಲ್ಲಿ ಗಣಿಗಾರಿಕೆಗೆ ಸಲ್ಲಿಸಿದ ಅರ್ಜಿಗಳ ವಿಚಾರಣೆಯನ್ನು ಅವರೇ ನಡೆಸಿ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಅಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟಿರಲಿಲ್ಲ. ಧರ್ಮ್‌ಸಿಂಗ್‌ರವರು ಇದ್ದಾಗ ಮುಖ್ಯಮಂತ್ರಿಯವರೇ ಗಣಿಗಾರಿಕೆಯನ್ನು ಯಾರಿಗೆ ಕೊಡಬೇಕು ಎಂಬ ಬಗ್ಗೆ ಸಭೆ ಮಾಡಿ ನೋಟೀಸ್ ಕೊಟ್ಟು ಅವರೇ ಕುಳಿತು ಮಾಡುತ್ತಿದ್ದ ಪದ್ದತಿ ಇತ್ತು. ಅಲ್ಲಿ ತೀರ್ಮಾನ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತಿದ್ದರು. ಅನಂತರ ಬಂದ ಸರ್ಕಾರ ಈ ವಿಚಾರದಲ್ಲಿ ಅಧಿಕಾರವನ್ನು ಇಲಾಖೆಯ ಕಾರ್ಯದರ್ಶಿಯವರಿಗೆ ನೀಡಿದೆ. ತದನಂತರ ಬಂದಂಥ ಸರ್ಕಾರಗಳು ಯಾರ್ಯಾರು ಮಹಾತ್ಮರು

ಪುಣ್ಯಾತ್ಮರಿದ್ದರು ಅವರೆಲ್ಲರೂ ಸೇರಿ ಮಾಡಿದಂಥ ಕೆಲಸ ಇದು. ವಿವಿಧ ಸರ್ಕಾರದ ಅಧಿಕಾರದ ಅವಧಿಯಲ್ಲಿ ಗಣಿ ಗುತ್ತಿಗೆಗೆ ಶಿಫಾರಸ್ಸು ಮಾಡಿರುವ ವಿವರ. ಬಹಳ ದೂರಕ್ಕೆ ಹೋಗುವುದಿಲ್ಲ. ಹತ್ತಿರದಲ್ಲಿ ಏಕೆಂದರೆ ನಾವು ನೀವೆಲ್ಲಾ ಇಲ್ಲೇ ಸದಸ್ಯರಾಗಿದ್ದೆವು. ಧರ್ಮ್‌ಸಿಂಗ್ ರವರ ಕಾಲದಲ್ಲಿ ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿರತಕ್ಕದ್ದು 43, ಕೇಂದ್ರದಿಂದ ಅನುಮತಿ ನೀಡಿರತಕ್ಕದ್ದು 37, ಈ ಬಗ್ಗೆ ಅಧಿಸೂಚನೆ ಹೊರಡಿಸಿರುವುದು 30. ಕುಮಾರಸ್ವಾಮಿಯವರ ಕಾಲದಲ್ಲಿ ಶಿಫಾರಸ್ಸು ಮಾಡಿರತಕ್ಕದ್ದು 47, ಕೇಂದ್ರದ ಅನುಮತಿ ಕೊಟ್ಟಿರುವುದು 22, ಅಧಿಸೂಚನೆ ಹೊರಡಿಸಿರುವುದು 19, ಘನತೆವೆತ್ತ ರಾಜ್ಯಪಾಲರ ಅವಧಿಯಲ್ಲಿ ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿರುವುದು 22, ಕೇಂದ್ರದಿಂದ ಅನುಮತಿ ನೀಡಿರುವುದು 14, ಅಧಿಸೂಚನೆ ಹೊರಡಿಸಿರುವುದು 9, ನಾನು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಶಿಫಾರಸ್ಸು ಮಾಡಿರುವುದು 22, ಕೇಂದ್ರ ಸರ್ಕಾರ ಅನುಮತಿ ನೀಡಿರುವುದು 2ಕ್ಕೆ ಮಾತ್ರ.

ಶ್ರೀ ಸಿದ್ದರಾಮಯ್ಯ: 2 ಅಲ್ಲಾ 5

ಶ್ರೀ ಬಿ. ಎಸ್. ಯಡಿಯೂರಪ್ಪ: ನನ್ನ ಹತ್ತಿರ ಇರುವ ಅಂಕಿ ಅಂಶವನ್ನು ಹೇಳಿದ್ದೇನೆ. 5 ಯಾವುದು ಎಂದು ಹೇಳಿದರೆ ನಾನು ಉತ್ತರ ಕೊಡುತ್ತೇನೆ. ಒಂದು ವೇಳೆ ಇದ್ದರೆ ತಿದ್ದಿಕೊಳ್ಳುತ್ತೇನೆ ನಾನೇನು ಬೃಹಸ್ಪತಿಯಲ್ಲ. ನನ್ನ ಹತ್ತಿರ ಇರುವ ಅಂಕಿಅಂಶವನ್ನು ಹೇಳಿದ್ದೇನೆ. ಮುಚ್ಚಿಡುವುದು ಏನೂ ಇಲ್ಲ. ಅವನು ಯಾರಾದರೂ ತಪ್ಪುಗ್ರಹಿಕೆ ಮಾಹಿತಿ ಕೊಟ್ಟಿದ್ದರೆ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ: 5ಕ್ಕೆ ಕೊಟ್ಟಿರುವ ದಾಖಲೆ ಇದೆ. ಅದನ್ನು ಓದಿ ಹೇಳಲೇ?

ಶ್ರೀ ಬಿ. ಎಸ್. ಯಡಿಯೂರಪ್ಪ: ನೀವು ಹೇಳುತ್ತಿರುವುದನ್ನು ಇಲ್ಲವೆಂದು ಹೇಳುತ್ತಿಲ್ಲ. ನನಗಿಂತಾ ನಿಮಗೆ ಮುಂಚೆ ಮಾಹಿತಿಯನ್ನು

ಕೊಡುವ ಅಧಿಕಾರಿಗಳು ನಮ್ಮಲ್ಲಿ ಇದ್ದಾರೆ ಎಂಬುದು ನನಗೆ ಗೊತ್ತಿದೆ. ಒಳ್ಳೆಯ ಮಾಹಿತಿ ಕೊಟ್ಟರೆ ನನ್ನದೇನೂ ವಿರೋಧವಿಲ್ಲ.

ಶ್ರೀ ಸಿದ್ದರಾಮಯ್ಯ: ನಿಮಗೆ ಅನುಕೂಲ ಆಗಲಿ ಎಂದು

ಶ್ರೀ ಬಿ. ಎಸ್. ಯಡಿಯೂರಪ್ಪ: ನನ್ನದೇನೂ ತಪ್ಪಿಲ್ಲ. ತಾವು ಹೇಳಿದರೆ ಒಪ್ಪಿಕೊಂಡು ಬಿಡುತ್ತೇನಲ್ಲಾ. ಅದರಲ್ಲಿ ಎರಡು ಪ್ರಶ್ನೆ ಇಲ್ಲ. ಇವರು ಯಾರು ಕೊಟ್ಟಿದ್ದಾರೆ ಅದರ ವಿವರ ಕೊಡಿಯೆಂದು ಕೇಳುತ್ತೇನೆ. ನಿಮಗೂ ಕೊಡುತ್ತೇನೆ. ನನ್ನ ಹತ್ತಿರ ಇಲ್ಲದಿರುವುದನ್ನು ನೀವೂ ಕೊಡಿ. 2 ಅಲ್ಲ ಎಂದು ನೀವು ದಾಖಲೆಗಳನ್ನು ಕೊಟ್ಟರೆ ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ಒಪ್ಪಿಕೊಳ್ಳುವುದಿಲ್ಲವೆಂದು ಹೇಳಲು ನಾನು ಯಾರು?

ಶ್ರೀ ಸಿದ್ದರಾಮಯ್ಯ: ಎರಡು ರಿನೀವಲ್, 5 ಹೊಸದು

ಶ್ರೀ ಬಿ. ಎಸ್. ಯಡಿಯೂರಪ್ಪ: ಎಲ್ಲರೂ ಗಮನಿಸಬೇಕಾದ ಅಂಶವೇನೆಂದರೆ, ಹೆಚ್ಚಿನ ಕಂಪನಿಗಳು ಮೌಲ್ಯವರ್ಧನೆಗೆ ತೊಡಗದೆಯೇ ಜಾಗತಿಕ ಮಾರುಕಟ್ಟೆಯಲ್ಲಿ ಕಬ್ಬಿಣದ ಅದಿರಿನ ಬೆಲೆ ಗಗನಕ್ಕೇರಿದ ಸಮಯದಲ್ಲಿ ರಫ್ತುಮಾಡಿ ಮಾರಾಟ ಮಾಡಿರುವಂಥದ್ದು ಬಹಳ ಗಮನಾರ್ಹವಾದ ಒಂದು ಸಂಗತಿ. ತಮಗೆ ಅತ್ಯಂತ ವಿನಯದಿಂದ ನಿನ್ನೆ ನಮ್ಮ ರೇವಣ್ಣನವರು ಹೇಳಿದ ಕೆಲವು ಅಂಶಗಳನ್ನು ಹೇಳಬಯಸುತ್ತೇನೆ. ಈ ಅನುಮತಿ ಪಡೆದಿರುವುದರಲ್ಲಿ ಬಹಳ ಜನ ರಾಜಕೀಯ ಪಕ್ಷದ ಮುಖಂಡರುಗಳ ಹೆಸರು ಮತ್ತು ಸಂಬಂಧಿಕರ ಹೆಸರೂ ಇದೆ. ಆ ಮಾಹಿತಿಯ ಬಗ್ಗೆ ತಮಗೆಲ್ಲಾ ಪುಸ್ತಕವನ್ನೇ ಪ್ರಿಂಟ್ ಮಾಡಿಸಿ ಕೊಡುತ್ತೇನೆ. ಅದನ್ನು ಕೊನೆಯಲ್ಲಿ ಹೇಳುತ್ತೇನೆ. ಅದರ ಬಗ್ಗೆ ನಿಮ್ಮ ಹತ್ತಿರವೇ ಮಾಹಿತಿ ಇದೆಯಲ್ಲಾ? ಅದರ ಮಾಹಿತಿಯನ್ನು ಕೊಡುತ್ತೇನೆ.

ಶ್ರೀ ಎಚ್. ಸಿ. ಬಾಲಕೃಷ್ಣ: ಇಲ್ಲೇ ಹೇಳಿ. ಜನರಿಗೆ ಗೊತ್ತಾಗಬೇಕು

ಶ್ರೀ ಬಿ. ಎಸ್. ಯಡಿಯೂರಪ್ಪ: ಕೊಡುತ್ತೇನೆ

ಡಾ|| ಹೆಚ್. ಸಿ. ಮಹದೇವಪ್ಪ: ಡೌಟ್‌ಫುಲ್ ಇರುವವರಿಗೆ ನನ್ನದು ಇದೆ, ನನ್ನದು ಇಲ್ಲವೆಂದು ನಿದ್ರೆ ಬರುವುದಿಲ್ಲ. ಆದ್ದರಿಂದ ಮುಖ್ಯಮಂತ್ರಿಯವರು ಯಾರದ್ದು ಇದೆ, ಯಾರದ್ದು ಇಲ್ಲವೆಂದು ಹೇಳಿದರೆ ಒಳ್ಳೆಯದು.

ಶ್ರೀ ಬಿ. ಎಸ್. ಯಡಿಯೂರಪ್ಪ: ಬೆಳಗಾಂನಲ್ಲಿ ಜಗಳ ಆಡಲಿಲ್ಲವೆ? ಹೊಡೆದಾಟ ಆಗಲಿಲ್ಲವೆ?

ಶ್ರೀ ಜಿ. ಪರಮೇಶ್ವರ್: ಮುಖ್ಯಮಂತ್ರಿಗಳು ಅದನ್ನು ಹೇಳಿದರೆ ನಮ್ಮದು ಇಲ್ಲವೆಂದಾದರೂ ಗೊತ್ತಾಗುತ್ತದೆ. ಆದ್ದರಿಂದ ಅದನ್ನು ಹೇಳಿಬಿಡಿ. ಸಮಗ್ರ ತನಿಖೆಗೆ ವಹಿಸಿಬಿಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ: ಇಷ್ಟು ವರ್ಷಗಳ ಅನುಭವದಲ್ಲಿ ಇಲ್ಲಿ ಕುಳಿತುಕೊಂಡು ಮಾತನಾಡುವಂಥವರು, ಸಿದ್ದರಾಮಯ್ಯನವರೂ ಸೇರಿ ಉಪಮುಖ್ಯಮಂತ್ರಿಯಾಗಿದ್ದಾಗ, ಯಾವ್ಯಾವ ಸಮಯದಲ್ಲಿ ಯಾವ್ಯಾವ ಅಸ್ತ್ರವನ್ನು ನಾನು ಹೊರಗಡೆ ಬಿಡಬೇಕು, ಯಾವ ಸಮಯದಲ್ಲಿ ಯಾವ ಮಾಹಿತಿಯನ್ನು ನಿಮಗೆ ಒದಗಿಸಬೇಕು, ಏಕೆಂದರೆ ಈಗಲೇ ಎದ್ದುನಿಂತುಕೊಂಡು ಬಿಡುತ್ತೀರಲ್ಲಾ? ಈಗಲೇ ಹೆಸರು ಹೇಳಲು ಶುರು ಮಾಡಿದರೆ ತಾಂಡವ ನೃತ್ಯ ಈಗಲೇ ಶುರುವಾದರೆ? ಆದ್ದರಿಂದ ಅದರ ಬಗ್ಗೆ ಕೊನೆಯಲ್ಲಿ ಕೊಡುತ್ತೇನೆ.

ಶ್ರೀ ಎಚ್.ಸಿ. ಬಾಲಕೃಷ್ಣ: ಹಾಗಾದರೆ ನೀವು ಕೊಟ್ಟಂಥ ಮಾಹಿತಿ ಅರ್ಥಂಬರ್ಥವೆಂದು ಆಯಿತು.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡುತ್ತೇನೆ, ಸದನದಲ್ಲಿ ಬೇರೆಯವರ ಬಗ್ಗೆ ಸಂಶಯ ಪಡುವುದು ಬೇಡ. ಯಾರು ಗಣಿ ಮಕ್ಕಳು ಯಾರು ಮಣ್ಣಿನ ಮಕ್ಕಳು ಎಂಬುದು ಸವಿಸ್ತಾರವಾಗಿ ಗೊತ್ತಾಗಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಕೊಡುತ್ತೇನೆ. ನಾನು ಏನನ್ನೂ ಮುಚ್ಚಿಡುವುದಿಲ್ಲ. ವಿನಮ್ರತೆಯಿಂದ ಈ ಸದನದ ಸದಸ್ಯರಲ್ಲಿ ಈ ನಾಡಿನ 6 ಕೋಟಿ ಜನರಲ್ಲಿ ಹೇಳುವುದಕ್ಕೆ ಬಯಸುವುದೇನೆಂದರೆ, ನನ್ನ ಅನುಭವದಲ್ಲಿ ಈ ಸಂಪತ್ತು ಲೂಟಿ ಆಗುವುದನ್ನು ನಿಲ್ಲಿಸುವ ಹಿನ್ನೆಲೆಯಲ್ಲಿ, ನಾನು ಹಳ್ಳಿಯಿಂದ ಬೆಳೆದು ಬಂದವನು. ಅದಕ್ಕಾಗಿಯೇ ಈ ಗಣಿಗಾರಿಕೆಯನ್ನು value added industries ಗಳಿಗೆ ಮಾತ್ರ ಕೊಡಬೇಕು ಎನ್ನುವ ದೃಷ್ಟಿಯಿಂದ ತೀರ್ಮಾನ ತೆಗೆದುಕೊಂಡೆ. Global investment meet ನಲ್ಲಿ ಜಗತ್ತಿನ ಮೂಲೆ ಮೂಲೆಗಳಲ್ಲಿ ಇದ್ದಂಥ ಪ್ರಖ್ಯಾತ ಕಬ್ಬಿಣದ ಉಕ್ಕನ್ನು ತಯಾರು ಮಾಡುವಂಥ ದೊಡ್ಡ ದೊಡ್ಡ ಮಾಲೀಕರು ಬಂದದ್ದು, ಈಗಲೂ ಬರುತ್ತಿರುವುದಕ್ಕೆ ಮುಖ್ಯವಾಗಿ ಎರಡು ಕಾರಣಗಳು. 1. ಬಹಳ ಅಮೂಲ್ಯವಾದ ಕಬ್ಬಿಣದ ಅದಿರು ಇಲ್ಲಿ ಸಿಗುತ್ತದೆ. ಇವನು ಯಾರೋ ಹಳ್ಳಿ ರೈತನ ಮಗ ಯಡಿಯೂರಪ್ಪ ಎಂಬುವವನು ಬಂದು ರಫ್ತು ಮಾಡುವುದನ್ನು ನಿಲ್ಲಿಸಿಬಿಟ್ಟಿರುವುದರಿಂದ, ಹೊಸದಾಗಿ ಪರ್ಮಿಟ್ ಕೊಡದೇ ಇರುವುದರಿಂದ ನಾವೇ ಬಂದು ಇಲ್ಲಿ ಕೈಗಾರಿಕೆಗಳನ್ನು ಹಾಕಿದರೆ ಹೆಚ್ಚು ಲಾಭದಾಯಕವಾಗುತ್ತದೆ, ಕಬ್ಬಿಣದ ಅದಿರು ಪಕ್ಕದಲ್ಲೇ ಸಿಗುತ್ತದೆ ಎಂದೇ ಇಷ್ಟು ದೊಡ್ಡ ಪ್ರಮಾಣದಲ್ಲಿ Global investment meet ನಲ್ಲಿ ಸ್ಟೀಲ್ ಇಂಡಸ್ಟ್ರೀಸ್ ಹಾಕುವುದಕ್ಕೋಸ್ಕರ ಬಹಳ ದೊಡ್ಡ ದೊಡ್ಡವರು ಬಂದದ್ದು ಇದೇ ಕಾರಣಕ್ಕೋಸ್ಕರ ಎಂಬುದನ್ನು ವಿನಮ್ರತೆಯಿಂದ ನಿಮಗೆ ಹೇಳಲು ಇಷ್ಟಪಡುತ್ತೇನೆ. ಹಿಂದಿನ ಸರ್ಕಾರ ಕಬ್ಬಿಣದ ಅದಿರಿನ ಗಣಿಗಾರಿಕೆಗೆ ಮಾತ್ರ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದರೇ ಹೊರತು ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆಯೇ ಈ ಬಹುಮೌಲ್ಯ ಖನಿಜಗಳಾದ ಚಿನ್ನ, ವಜ್ರ, ಪ್ಲಾಟಿನಂ ಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿರುವುದರಿಂದ ಪ್ರತಿಷ್ಠಿತ ಕಂಪನಿಗಳು ರಾಜ್ಯದಲ್ಲಿ ಬಂಡವಾಳ ಮತ್ತು ತಂತ್ರಜ್ಞಾನವನ್ನು

ತೊಡಗಿಸುವುದಕ್ಕೆ ಮುಂದೆ ಬಂದಿರುವುದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಮೊದಲು ಹಿಂದಿನ ಸರ್ಕಾರದಲ್ಲಿ ಅನಧಿಕೃತ ಗಣಿಗಾರಿಕೆ ಪ್ರಕರಣಗಳನ್ನು ಮಾನ್ಯ ಲೋಕಾಯುಕ್ತಕ್ಕೆ ವಹಿಸಿದ್ದರು. ಇದು ಎಲ್ಲರಿಗೂ ಗೊತ್ತಿದೆ. ನಮ್ಮ ಸರ್ಕಾರ ಅಧಿಕಾರ ವಹಿಸಿಕೊಂಡ ಕೂಡಲೇ ಅನಧಿಕೃತ ಗಣಿಗಾರಿಕೆ ನಡೆಸುತ್ತಿರುವುದನ್ನು ನಾವು ಗಂಭೀರವಾಗಿ ಪರಿಗಣಿಸಿ ನಮ್ಮ ಸರ್ಕಾರದ ಅವಧಿಯೂ ಸೇರಿದಂತೆ ತನಿಖೆಯಾಗಬೇಕೆಂದು ಲೋಕಾಯುಕ್ತರವರಿಗೆ ನಾನು ಪತ್ರ ಬರೆದೆ. 24-12-2008 ರವರೆಗೆ ವಿಸ್ತರಿಸುವ ನಿರ್ಧಾರ ತೆಗೆದುಕೊಂಡೆ. ಅಲ್ಲದೆ ಹೊಸ ಗಣಿ ನೀತಿ ಜಾರಿಗೆ ಬರುವವರೆಗೆ ಹೊಸ ಗಣಿ ಗುತ್ತಿಗೆಗಳಿಗೆ ಶಿಫಾರಸ್ಸು ಮಾಡಬಾರದು ಎನ್ನುವ ನಿರ್ಣಯಕ್ಕೆ ನಾನು ಬಂದು, ಆವತ್ತಿನಿಂದ ಇವತ್ತಿನವರೆಗೆ ಕೇಂದ್ರಕ್ಕೆ, value addedಗೆ ಮಾತ್ರ recommendation ಮಾಡುತ್ತೇನೆಯೇ ಹೊರತು ಹೊರಗಡೆ ರಫ್ತು ಮಾಡುವುದಕ್ಕೆ ಬಿಡುವುದಿಲ್ಲವೆಂದು ಒಂದು ಪರ್ಮಿಟ್‌ಗೆ ನಾನು ಸಹಿ ಮಾಡಿಲ್ಲ, ಒಂದು recommendation ಕೇಂದ್ರಕ್ಕೆ ಕಳುಹಿಸಿಲ್ಲ. ನಾವು ಕೊಟ್ಟಿರುವುದು ಈ ಷರತ್ತಿನ ಮೇಲೆ. ಕೇವಲ value added ಎಂದು ಯಾರು ಕೈಗಾರಿಕೆ industries ಇದೆ, ಅವರಿಗೆ ಮಾತ್ರ ನೀವು supply ಮಾಡಬೇಕು. ಹೊರಗಡೆ ರಫ್ತು ಮಾಡಕೂಡದು. ಹೀಗಾಗಿ ಲೈಸನ್ಸ್ ಕೊಟ್ಟಿರುವುದು ಎರಡು ಮಾತ್ರ. ಮಾನ್ಯ ಸಿದ್ದರಾಮಣ್ಣನವರೆ ತಾವು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಬಾಲಕೃಷ್ಣರವರೆ, ಈ ಅಕ್ರಮ ಗಣಿಗಾರಿಕೆಯನ್ನು ರಕ್ಷಣೆ ಮಾಡುವ ಇಚ್ಛೆ ನನಗಿದ್ದರೆ, ಕುಮಾರಸ್ವಾಮಿಯವರ ಅವಧಿ ನನ್ನ ಅವಧಿಯೂ ಸೇರಿದಂತೆ ಎಲ್ಲವನ್ನೂ ತನಿಖೆ ಮಾಡಿ ಎಂದು ಲೋಕಾಯುಕ್ತರಿಗೆ ನಾನೇಕೆ ಹೇಳುತ್ತಿದ್ದೆ, ಸುಮ್ಮನಿರಬಹುದಾಗಿತ್ತಲ್ಲ? ಏಕೆಂದರೆ ಲೋಕಾಯುಕ್ತರವರು ತನಿಖೆ ಮಾಡಿ ವರದಿ ಕೊಟ್ಟಿರುವುದು ಹಿಂದಿನ ಸರ್ಕಾರದ್ದು. ಕುಮಾರಸ್ವಾಮಿಯವರದಲ್ಲ, ಈಗಿನದು ಅಲ್ಲ.

ಅದಕ್ಕಾಗಿ ನಾನು ಆ ತನಿಖೆಗೆ ಕೊಟ್ಟಿದ್ದೇನೆ. ಏಕೆಂದರೆ, ಬಹಳ ಜನಕ್ಕೆ ಇದು ಗೊತ್ತಿಲ್ಲ. ಮಾನ್ಯ ಲೋಕಾಯುಕ್ತರು ಸಮಗ್ರವಾಗಿ ತನಿಖೆ ನಡೆಸಿ ನೀಡಿರುವ ವರದಿ 1-1-2000 ರಿಂದ 22-03-2006 ರ ಅವಧಿಗೆ ಅನ್ವಯವಾಗುತ್ತದೆ. ಈ ಅವಧಿಯಲ್ಲಿ ಕಾಂಗ್ರೆಸ್ ಸರ್ಕಾರ ಮತ್ತು ಕಾಂಗ್ರೆಸ್-ಜೆ.ಡಿ.ಎಸ್. ಸಮ್ಮಿಶ್ರ ಸರ್ಕಾರ ಅಧಿಕಾರದಲ್ಲಿತ್ತು ಎನ್ನುವ ಮಾಹಿತಿಯನ್ನು ಈ ಸದನಕ್ಕೆ ಕೊಡಲಿಚ್ಚಿಸುತ್ತೇನೆ. ಈ ಅವಧಿಯಲ್ಲಿ ನನ್ನ ಸರಕಾರ ಅಧಿಕಾರದಲ್ಲಿ ಇರಲಿಲ್ಲ. ತನಿಖಾ ವರದಿಯನ್ನು 18-12-2008 ರಲ್ಲಿ ಲೋಕಾಯುಕ್ತರು ನಮಗೆ ನೀಡಿದ್ದಾರೆ. 1999 ರಿಂದ 2004 ರವರೆಗೆ ಶ್ರೀ ಎಸ್.ಎಂ. ಕೃಷ್ಣ ರವರು ಮುಖ್ಯಮಂತ್ರಿಗಳಾಗಿದ್ದರು. ಮೇ 2004 ರಿಂದ 2006 ರವರೆಗೆ ಕಾಂಗ್ರೆಸ್- ಜೆಡಿಎಸ್ ಸಮ್ಮಿಶ್ರ ಸರಕಾರವಿತ್ತು. ನಮ್ಮ ಸರ್ಕಾರ ಪಾರದರ್ಶಕವಾಗಿ ಇರಬೇಕು ಎನ್ನುವ ಉದ್ದೇಶದಿಂದ ತಮಗೆಲ್ಲರಿಗೂ ತಿಳಿದಂತೆ ನಮ್ಮ ಸರ್ಕಾರದ ಅವಧಿಯಲ್ಲಿ ಒಳಗೊಂಡಂತೆ ಗಣಿಗಾರಿಕೆ ನಡೆಸುವುದಕ್ಕೆ ಅನುಮತಿ ಕೊಟ್ಟಂಥ ಎಲ್ಲಾ ವಿವರಗಳನ್ನು ಒಳಗೊಂಡಂತೆ 24-12-2008 ರಂದು ಲೋಕಾಯುಕ್ತರವರಿಗೆ ಅಧಿಕಾರ ನೀಡಿ ಆದೇಶ ಹೊರಡಿಸಿದೆ. ಮಾನ್ಯ ಲೋಕಾಯುಕ್ತರವರು ನೀಡಿರುವ ವರದಿಯನ್ನು ಅವಲೋಕಿಸಿದಾಗ ಅನಧಿಕೃತ ಗಣಿಗಾರಿಕೆ ನಡೆಯುತ್ತಿರುವಂಥದ್ದು ನಮ್ಮ ಸರ್ಕಾರದ ಅವಧಿಯಲ್ಲಿ ಅಲ್ಲ. ಮೊದಲು ನಡೆಯುತ್ತಿತ್ತು. ಈ ರೀತಿ ಅವ್ಯಾಹತವಾಗಿ ಅನಧಿಕೃತವಾಗಿ ಗಣಿಗಾರಿಕೆ ನಡೆಯುತ್ತಿತ್ತು. ನಮಗಿಂತ ಹಿಂದೆ ಇದ್ದ ಸರ್ಕಾರ ಇಂಥ ಪ್ರಮಾದ ನಡೆಯುತ್ತಿದೆ ಎಂದು ಗೊತ್ತಿದ್ದರೂ ಸಹ ಯಾರ ಮೇಲೂ ಕ್ರಮ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಆಗಲಿಲ್ಲ. ಈ ಮನೆಯಲ್ಲಿ ಚರ್ಚೆಯಾಗಲಿಲ್ಲ. ಎಲ್ಲಾ ಮಾಹಿತಿಗಳು ಗೌಪ್ಯವಾಗಿತ್ತು. ಹಿಂದೆ ಎಲ್ಲಾ ಸರಿಯಿತ್ತು ಯಡಿಯೂರಪ್ಪನವರೆ, ನೀವು ಬಂದ ಮೇಲೆ ಲೂಟಿ ಮಾಡುತ್ತಿದ್ದೀರಿ ಎಂದು ಹೇಳಿದ್ದರೆ, ನಾನು ತಲೆ ಬಾಗಿ ಕ್ಷಮೆ ಕೇಳುತ್ತಿದ್ದೆ. ಮಾನ್ಯ ಲೋಕಾಯುಕ್ತರವರು ತನ್ನ ವರದಿಯಲ್ಲಿ ಅನೇಕ ಅಕ್ರಮಗಳ ಬಗ್ಗೆ

ಪ್ರಸ್ತಾಪಿಸಿ ಶಿಫಾರಸ್ಸುಗಳನ್ನು ನೀಡಿರುತ್ತಾರೆ. ಲೋಕಾಯುಕ್ತರವರು ಪ್ರಮುಖವಾಗಿ ತಮ್ಮ ವರದಿಯಲ್ಲಿ ಪಟ್ಟಾ ಜಮೀನಿನಲ್ಲಿ ಅನಧಿಕೃತ ಗಣಿಗಾರಿಕೆ ಮತ್ತು ಕಾನೂನಿಗೆ ವಿರುದ್ಧವಾಗಿ ಅದಿರು ಸಾಗಾಣಿಕೆಗೆ ಪರವಾನಿಗೆ ನೀಡಿರುವುದನ್ನು ಪ್ರಸ್ತಾಪಿಸಿದ್ದಾರೆ. ಈ ಅವಧಿಯಲ್ಲಿ ಅಂದಿನ ನಿರ್ದೇಶಕ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಡಾ: ಎಂ.ಎಸ್. ಬಸಪ್ಪ ರೆಡ್ಡಿ, ಶ್ರೀ ಗಂಗಾರಾಂ ಬಡೇರಿಯಾ, ಇವರು ಶಾಮೀಲಾಗಿದ್ದಾರೆ. ಅವರಿಂದ ಸರ್ಕಾರಕ್ಕಾದ ನಷ್ಟವನ್ನು ವಸೂಲು ಮಾಡುವುದಕ್ಕೆ ಶಿಫಾರಸ್ಸು ಮಾಡಿದ್ದಾರೆ. ಈ ಅಧಿಕಾರಿಗಳ ಮೇಲೆ ಇಲಾಖಾ ವಿಚಾರಣೆ ಜಾರಿಯಲ್ಲಿದೆ. ಅಂದಿನ ಮುಖ್ಯಮಂತ್ರಿ ಈ ಅನುಮತಿ ಕೊಟ್ಟ ಪರಿಣಾಮ ರೂ. 23.32 ಕೋಟಿಗಳನ್ನು ಅಂದಿನ ಮುಖ್ಯಮಂತ್ರಿಗಳಿಂದ ವಸೂಲು ಮಾಡಬೇಕೆಂದು ಲೋಕಾಯಕ್ತ ರವರು ತಮ್ಮ ವರದಿಯನ್ನು ತಿಳಿಸಿದರು. ರಾಜ್ಯಪಾಲರು ಈ ಲೋಕಾಯುಕ್ತರವರು ಕೊಟ್ಟ ವರದಿಯನ್ನು, ರೈತರ ಹಿತದೃಷ್ಟಿಯಿಂದ ಮಾಡಿದ್ದಾರೆ, ಅದಕ್ಕೋಸ್ಕರ ಕೈ ಬಿಡಬೇಕೆಂದು ರಾಜ್ಯಪಾಲರು ಹೇಳಿದ್ದರಿಂದ, ಲೋಕಾಯುಕ್ತರು ಎರಡೇ ವಾಕ್ಯ ಹೇಳಿದ್ದಾರೆ. ಕೇಂದ್ರದ ಅನುಮತಿಯಿಲ್ಲ. ಈ ರೀತಿ ಪರ್ಮಿಟ್ ಕೊಡುವುದಕ್ಕೆ ಯಾವುದೇ ಕಾನೂನಿನಲ್ಲಿ ಅವಕಾಶವಿಲ್ಲ. ಇಷ್ಟಾದರೂ ರಾಜ್ಯಪಾಲರು ಹೇಳಿದ್ದರಿಂದ ನಾನು ಸುಮ್ಮನೆ ಸಹಮತ ವ್ಯಕ್ತಪಡಿಸಿದ್ದೇನೆ. ಅವರು ಒಪ್ಪಿಲ್ಲ. ನಾನು ಕೇಳುತ್ತೇನೆ, ಈ ನೆಲದ ಕಾನೂನು ರಾಜ್ಯಪಾಲರಿರಲಿ, ಮುಖ್ಯಮಂತ್ರಿಯಿರಲಿ, ಮತ್ತೊಬ್ಬರಿರಲಿ, ಎಲ್ಲರೂ ಒಂದೇ ತಾನೆ. ಯಾರನ್ನೋ ಉದ್ದಾರ ಮಾಡುತ್ತಾರೆಂದು ಪರ್ಮಿಟ್ ಕೊಟ್ಟು ಆ ಇಬ್ಬರ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಿ ಎಂದರೆ ಅಂದಿನ ಮುಖ್ಯಮಂತ್ರಿ 23.22 ಕೋಟಿ ರೂ. ಲಾಸ್‌ಗೆ ನೀನು ಜವಾಬ್ದಾರಿ, ಹೀಗಾಗಿ ವಸೂಲು ಮಾಡಬೇಕೆಂದು ಲೋಕಾಯುಕ್ತರು ವರದಿ ಕೊಟ್ಟರು. ಆ ಬಗ್ಗೆ ಅಗತ್ಯವಿಲ್ಲ ಎಂದು ಅಂದಿನ ರಾಜ್ಯಪಾಲರು ಹೇಳುತ್ತಾರೆ ಎನ್ನುವುದರ ಬಗ್ಗೆ ಈ ಮನೆಯ ಸದಸ್ಯರು ಹಾಗೂ ಈ

ನಾಡಿನ ಆರು ಕೋಟಿ ಜನರು, ಇದರ ಹಿನ್ನೆಲೆ ಏನು ಎಂದು ಯೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದಕ್ಕಿಂತ ಹೆಚ್ಚಿಗೆ ನಾನು ಬೆಳೆಸುವುದಕ್ಕೆ ಹೋಗುವುದಿಲ್ಲ..

ಶ್ರೀ ಎಂ.ಬಿ. ಪಾಟೀಲ್ : ಆಗ ನೀವು ವಿರೋಧ ಪಕ್ಷದ ನಾಯಕರು ಆಗಿದ್ದರಲ್ಲ, ಆಗ ನೀವು ಕೇಳಬೇಕಾಗಿತ್ತು. ಆಗ ನೀವು ರೈಸ್ ಮಾಡಬೇಕಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಇಲ್ಲ ಎಂದು ಹೇಳಿದನೇನ್ರೀ? ಇದು ಒಳ್ಳೆ ಕತೆಯಾಯಿತಲ್ಲ ನಿಮ್ಮದು. ನೀವು ಆಗ ಇರಲಿಲ್ಲವೇ?

(ಗೊಂದಲ)

ನೀವು ಏನು ಮಾಡಿದರೂ ನನ್ನನ್ನು ಕೆಣಕುವುದಕ್ಕೆ ಆಗುವುದಿಲ್ಲ. ನಾನು ತೀರ್ಮಾನ ಮಾಡಿದ್ದೇನೆ.

(ಗೊಂದಲ)

ಅಧ್ಯಕ್ಷರು: ಅವರ ಉತ್ತರ ಮುಗಿದ ಮೇಲೆ ಕೇಳಿ, ಎಲ್ಲರಿಗೂ ಅವಕಾಶ ಕೊಡುತ್ತೇನೆ. ಮಧ್ಯದಲ್ಲಿ ಏಕೆ ಕೇಳುತ್ತೀರಿ?

(ಗೊಂದಲ)

ಡಾ: ಹೆಚ್.ಸಿ. ಮಹಾದೇವಪ್ಪ : ಮಾನ್ಯ ಮುಖ್ಯಮಂತ್ರಿಗಳು ಈಗ ತಾನೇ ಇಬ್ಬರು ಅಧಿಕಾರಿಗಳ ಹೆಸರುಗಳನ್ನು ಹೇಳಿದರು. ಇನ್ನು ಸುಮಾರು 9–10 ಜನ ಅಧಿಕಾರಿಗಳ ಹೆಸರುಗಳಿವೆ. ಇಬ್ಬರು ಅಧಿಕಾರಿಗಳ ಹೆಸರುಗಳನ್ನು ಮಾತ್ರ ನೀವು ಮೆನ್‌ಷನ್ ಮಾಡಿದಿರಿ, ವರದಿಯಲ್ಲಿ ಇನ್ನು 9–10 ಜನ ಅಧಿಕಾರಿಗಳ ಹೆಸರುಗಳಿವೆ. ಲೋಕಾಯುಕ್ತರವರ ವರದಿಯಲ್ಲಿ ಸುಮಾರು 9–10 ಜನ ಅಧಿಕಾರಿಗಳ ಹೆಸರುಗಳಿವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಲ್ಲವನ್ನೂ ಹೇಳುತ್ತೇನೆ. ಏನೂ ತೊಂದರೆಯಿಲ್ಲ. ಇದು ಲೋಕಾಯುಕ್ತರವರು ಕೊಟ್ಟಿರುವ ರಿಪೋರ್ಟ್ ಇದು ಪಬ್ಲಿಕ್ ಡಾಕ್ಯುಮೆಂಟ್. ಎಲ್ಲರ ಕೈಯಲ್ಲಿದೆ ಇದರಲ್ಲಿ ನಾನೇನು ಮುಚ್ಚಿಡುವುದೇನಿದೆ? ಮಾನ್ಯ ಲೋಕಾಯುಕ್ತರ ಇನ್ನೊಂದು ಅತ್ಯಂತ

ಪ್ರಮುಖವಾದ ಶಿಫಾರಸ್ಸು ಎಂದರೆ, ಸಾರಿಗೆ ಪರವಾನಿಗೆ. ಅಂದರೆ ಅದಿರು ಸಾಗಾಣಿಕೆ ಪರವಾನಿಗೆ ನೀಡುವ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಪರಿಶೀಲಿಸಿ ಪರಿಷ್ಕರಣೆ ಮಾಡಬೇಕು ಎಂದು ಹೇಳಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಕೆಲವು ಮುಖ್ಯ ಶಿಫಾರಸ್ಸುಗಳನ್ವಯ ಸರ್ಕಾರ ತೆಗೆದುಕೊಂಡಂಥ ಕ್ರಮ ಏನು ಎಂಬುದರ ಬಗ್ಗೆ ಸದನದ ಗಮನಕ್ಕೆ ತರಬಯಸುತ್ತೇನೆ. ನೂತನ ಅದಿರು ಸಾಗಾಣಿಕೆ ಪರವಾನಿಗೆ ಜಾರಿಗೊಳಿಸುವ ಬಗ್ಗೆ, ಮಾನ್ಯ ಲೋಕಾಯುಕ್ತರು ತಮ್ಮ ವರದಿಯಲ್ಲಿ ಗಣಿ ಇಲಾಖೆ ಮುವತ್ತು ದಿನಗಳ ಅವಧಿಗೆ Bulk permit ನೀಡುವ ವ್ಯವಸ್ಥೆ ಇದ್ದುದರಿಂದ ವ್ಯಾಪಕವಾಗಿ ದುರುಪಯೋಗವಾಗುತ್ತಿರುವ ಬಗ್ಗೆ ಅರಣ್ಯ ಇಲಾಖೆಯಲ್ಲಿಯೂ ನಮೂನೆ 31 ರಲ್ಲಿ Bulk permit ನೀಡುವ ಪದ್ಧತಿಯಿಂದಲೂ ದುರುಪಯೋಗವಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ. ಅಂದರೆ, form Number 31ರ ಪ್ರಕಾರ ಅವನಿಗೆ Bulk permit ಕೊಟ್ಟು ಬಿಡುವುದು. ಅವನು ತನಗೆ ಖುಷಿ ಬಂದ ಹಾಗೆ ಹೇಗೆ ಬೇಕಾದರೂ ಮೂವತ್ತು ದಿನಗಳ ಅವಧಿಗೆ ಕೊಡುವುದಕ್ಕೆ ಅವನಿಗೆ ಅವಕಾಶವಿತ್ತು. ಲೋಕಾಯುಕ್ತರಿಗೆ ಈ ನಾಡಿನ ಆರು ಕೋಟಿ ಜನರ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಏಕೆಂದರೆ, ಅವರು ಇದನ್ನು ತಡೆಗಟ್ಟುವ ಬಗ್ಗೆ ಹೊಸ ನಿಯಮಾವಳಿಗಳನ್ನು ರಚಿಸಲು ಸಲಹೆ ಕೊಟ್ಟರು. ಅದರ ಪ್ರಕಾರ, ಗಣಿ ಪರವಾನಿಗೆ ನೀಡುವ ವ್ಯವಸ್ಥೆಯನ್ನು ಗಣಕೀಕರಣಗೊಳಿಸಿ bar code ಮತ್ತು hologram ಹೊಂದಿರುವಂಥ ಪರವಾನಿಗೆಯನ್ನು ಒಂದು ವಾಹನಕ್ಕೆ ಒಂದರಂತೆ ಏಳು ದಿನಗಳೊಳಗೆ ಮಾತ್ರ ನೀಡುವಂಥ ಒಂದು ವ್ಯವಸ್ಥೆಯನ್ನು ಇಲಾಖೆ ಜಾರಿಗೆ ತಂದಿತು. ಆದರೆ, ಈ ಬದಲಾವಣೆಯನ್ನು ಮಾನ್ಯ ಉಚ್ಚನ್ಯಾಯಲಯದಲ್ಲಿ ಪ್ರಶ್ನಿಸಿ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿರುವುದರಿಂದ ಈ ಹಳೆಯ ಪದ್ಧತಿಯನ್ನು ಮುಂದುವರಿಸುವುದು ಅನಿವಾರ್ಯವಾಗಿದೆ. ಈ ತಡೆಯಾಜ್ಞೆ

ತೆರವುಗೊಳಿಸುವುದಕ್ಕೆ ಸರ್ಕಾರ ಸತತವಾಗಿ ಪ್ರಯತ್ನಿಸುತ್ತಿದೆ. ಅರಣ್ಯ ಇಲಾಖೆಯಲ್ಲಿ ಲೋಕಾಯುಕ್ತರ ಒಂದು ಶಿಫಾರಸ್ಸಿನಂತೆ ಏನು ಬದಲಾವಣೆಯಾಗಬೇಕಾಗಿದೆ. ಅದನ್ನು ಮಾಡುವುದಕ್ಕೆ ನಾವು 1–12–09 ರಿಂದ ಜಾರಿಗೆ ತಂದಿದ್ದೇವೆ. ಈ ಬದಲಾವಣೆಯಿಂದ ಅರಣ್ಯಾಧಿಕಾರಿಗಳು ಸ್ಥಳ ತನಿಖೆ ನಡೆಸಿ ನಿಯಮಾನುಸಾರ ಅನಧಿಕೃತ ಗಣಿಗಾರಿಕೆಯಾಗಿದೆ ಎಂಬುದನ್ನು ಖಾತರಿ ಪಡಿಸಿಕೊಂಡು ಆ ಪರವಾನಗಿಯನ್ನು ನೀಡುವಂಥ ವ್ಯವಸ್ಥೆಯನ್ನು ಈಗ ನಾವು ಮಾಡುತ್ತಿದ್ದೇವೆ.

ಗಣಿ ಇಲಾಖೆ ಸಹ ಪರವಾನಿಗೆ ನೀಡತಕ್ಕಂಥ ಹಳೆಯ ಪದ್ಧತಿಯನ್ನು ಗಣಕೀಕರಣಗೊಳಿಸಿ bar code ಮತ್ತು hologram ಹೊಂದಿರುವಂಥ ಟ್ರಿಪ್ ಶೀಟ್‌ಗಳನ್ನು ನೀಡುವಂಥ ಪದ್ಧತಿಯನ್ನು ಜಾರಿಗೊಳಿಸಿದೆ. 2009ನೇ ಸಾಲಿನಿಂದ ಈ ಪದ್ಧತಿಯನ್ನು ಜಾರಿಗೊಳಿಸಿದ್ದು, ಪರವಾನಿಗೆ ನೀಡಲ್ಪಟ್ಟ ಅದಿರು ಎಷ್ಟು ಎಂಬುದನ್ನು ಕೂಡಲೇ ತಿಳಿಯುವುದರ ಜೊತೆಗೆ ಅನಧಿಕೃತ ಗಣಿಗಾರಿಕೆ ಮತ್ತು ಸಾಗಾಣಿಕೆ ಪತ್ತೆಹಚ್ಚುವುದಕ್ಕೆ ಅನುಕೂಲವಾಗುತ್ತದೆ. ಮುಂದಿನ ದಿನಗಳಲ್ಲಿ e- Permit ಅನ್ನು ಜಾರಿಗೆ ತರುವುದರಿಂದ ಈ ವ್ಯವಸ್ಥೆಗಳನ್ನು ಇನ್ನು ಸರಳಿಕರಣಗೊಳಿಸಿ ಪಾರದರ್ಶಕತೆ ತರುವುದಕ್ಕೆ ಪ್ರಯತ್ನ ಮಾಡುವುದು ನಮ್ಮ ಸರ್ಕಾರದ ಉದ್ದೇಶವಾಗಿದೆ. ಮಾನ್ಯ ಲೋಕಾಯುಕ್ತರು ತಮ್ಮ ವರದಿಯಲ್ಲಿ ಅನಧಿಕೃತವಾಗಿ ಅದಿರು ಸಾಗಾಣಿಕೆ ಮಾಡುವಂಥ ವಾಹನವನ್ನು ಮುಟ್ಟುಗೋಲು ಹಾಕುವ ಅಧಿಕಾರವನ್ನು ಇಲಾಖೆ ಅಧಿಕಾರಿಗಳಿಗೆ ನೀಡುವ ಬಗ್ಗೆ ಶಿಫಾರಸ್ಸು ಮಾಡಿದ್ದಾರೆ. ಈ ಕ್ರಮವನ್ನು ನಾವು ತಕ್ಷಣ ಜಾರಿಗೆ ತರುವುದಿಲ್ಲ. ಇದಕ್ಕೆ ಕೇಂದ್ರದ MCR ಕಾಯಿದೆಗೆ ತಿದ್ದುಪಡಿ ತರುವ ಮೂಲಕ ಜಾರಿ ಮಾಡಬಹುದಾಗಿದೆ. ಆದ್ದರಿಂದ, ಈ ಕುರಿತು ಕೇಂದ್ರ ಸರ್ಕಾರಕ್ಕೆ ನಾವು ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಆದಷ್ಟು ಬೇಗ ಈ ಲಾರಿಗಳನ್ನು ಮುಟ್ಟುಗೋಲು

ಹಾಕುವುದಕ್ಕೆ ಅನುಮತಿಯನ್ನು ಕೊಡಬೇಕೆಂದು ಪತ್ರವನ್ನು ನಾನು ಬರೆದಿದ್ದೇನೆ. ಮತ್ತೆ ಅನಧಿಕೃತ **stock yard** ಮೇಲೆ ಕಾರ್ಯಾಚರಣೆ ಬಗ್ಗೆ ಹೇಳಿದ್ದಾರೆ. ಅನಧಿಕೃತ **stock yard** ಗಳನ್ನು ಮಾನ್ಯ ಲೋಕಾಯುಕ್ತರ ವರದಿಯ ಶಿಫಾರಸ್ಸಿನಂತೆ ವಿಚಾರಣೆಗೊಳಿಸಿ ರದ್ದುಪಡಿಸಿದ್ದೇವೆ. **stock yard** ಗಳು ಕಾನೂನು ಬದ್ಧವಾಗಿ ಇರುವಂಥ ಕ್ರಮವನ್ನು ನಾವು ವಹಿಸುತ್ತೇವೆ. ಅರಣ್ಯ ಪ್ರದೇಶದಲ್ಲಿನ ಅನಧಿಕೃತ ಗಣಿಗಾರಿಕೆ ಕುರಿತು ಹೇಳಿದ್ದಾರೆ. ಮಾನ್ಯ ಲೋಕಾಯುಕ್ತರ ಇತರ ಪ್ರಮುಖ ಶಿಫಾರಸ್ಸುಗಳ ಬಗ್ಗೆ ಹೇಳುವುದಾದರೆ, ಗುತ್ತಿಗೆದಾರರಿಂದ ಆಗಿದೆ ಎನ್ನಲಾದ ಒತ್ತುವರಿ ಪ್ರಕರಣಗಳನ್ನು ಬೆಳಕಿಗೆ ತಂದಿರುವುದು ಮತ್ತು ಒತ್ತುವರಿ ತೆರವು ಮಾಡಿಸಿರುವ ಕ್ರಮಗಳನ್ನು ಹಾಗೂ ಇದನ್ನು ತಡೆಗಟ್ಟುವುದಕ್ಕೆ ತೆಗೆದುಕೊಳ್ಳಬೇಕಾದಂಥ ಮುಂಜಾಗ್ರತೆ ಕ್ರಮಗಳ ಬಗ್ಗೆ ಅವರು ಹೇಳಿದ್ದಾರೆ. ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳು ಈ ರೀತಿ ಇವೆ. ಮಾನ್ಯ ಲೋಕಾಯುಕ್ತರು ಮೇಲಿನ 65 ಪ್ರಕರಣಗಳಲ್ಲಿ **waste dump stock** ಗಾಗಿ ಒಟ್ಟು 306 ಹೆಕ್ಟೇರ್ ಪ್ರದೇಶವನ್ನು ಒತ್ತುವರಿ ಮತ್ತು ರಸ್ತೆಗಾಗಿ 125 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಒತ್ತುವರಿ ಆಗಿರುವ ಬಗ್ಗೆ ವರದಿ ಮಾಡಿದ್ದಾರೆ. ಕೆಲವು ಪ್ರಕರಣಗಳಿಗೆ ಅರಣ್ಯ ಇಲಾಖೆಯ ಅನುಮತಿ ಇಲ್ಲದೇ ರಸ್ತೆಗಾಗಿ ಉಪಯೋಗಿಸಿ ಮತ್ತು **dumps** ಅನ್ನು ಗುತ್ತಿಗೆ ಪ್ರದೇಶದ ಹೊರಗಡೆ ಹಾಕಿರುವುದನ್ನು ಗಮನಿಸಿ ಗುತ್ತಿಗೆದಾರಿಂದ ದಂಡ ವಸೂಲ್ಮಾಡಿದ್ದೇವೆ. ಅಕ್ರಮಗಣಿಗಾರಿಕೆ ಕಂಡು ಹಿಡಿಯುವುದಕ್ಕೆ ಗಣಿ ಗುತ್ತಿಗೆ ಕರಾರು ಪುಸ್ತಕದ ನಕಾಶೆಯನ್ನು **Total Station survey Method** ನಲ್ಲಿ ಜಂಟಿ ಮೋಜಣಿ ನಡೆಸಲಾಗುತ್ತಿದೆ. 8 ಪ್ರಕರಣಗಳಲ್ಲಿ ವರದಿಗಳು ಬಂದಿವೆ. ಉಳಿದ ಪ್ರಕರಣಗಳಿಗೆ ವರದಿಗಳು ಬಾಕಿ ಇದ್ದು, ಮಾಹಿತಿ ಬಂದ ಕೂಡಲೇ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ. ಮತ್ತೆ ಮಾನ್ಯ

ಲೋಕಾಯುಕ್ತರ ತಮ್ಮ ವರದಿಯಲ್ಲಿ 59 ಪ್ರಕರಣಗಳಲ್ಲಿ ಗಣಿಗುತ್ತಿಗೆ ಪ್ರದೇಶದಲ್ಲಿ ಅರಣ್ಯ ಪ್ರದೇಶ ಒತ್ತುವರಿಯಾಗಿರುವ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಈ ಬಗ್ಗೆ 56 ಗಣಿ ಗುತ್ತಿಗೆದಾರರ ವಿರುದ್ಧ ಅರಣ್ಯ ಇಲಾಖೆ ಮೊಕದ್ದಮೆಯನ್ನು ದಾಖಲು ಮಾಡಿದೆ. ಆರೋಪ ಪಟ್ಟಿ ದಾಖಲಿಸುವ ಪ್ರಕ್ರಿಯೆ ಜಾರಿಯಲ್ಲಿದೆ. ಈ ಪ್ರಕರಣಗಳನ್ನು ನಾವು ಶೀಘ್ರವಾಗಿ ಮುಗಿಸುತ್ತೇವೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ವಿವಿಧ ಅಕ್ರಮಗಳಿಗೆ ಸಂಬಂಧಿಸಿದ 65 ಪ್ರಕರಣಗಳಲ್ಲಿ ಗಣಿ ಗುತ್ತಿಗೆ ರದ್ದು ಮಾಡುವುದಕ್ಕೆ ನೋಟೀಸ್ ಜಾರಿ ಮಾಡಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಒತ್ತುವರಿ ಗಣಿಗಾರಿಕೆಯನ್ನು ಪತ್ತೆ ಮಾಡುವುದಕ್ಕೆ ನೋಟೀಸ್ ಜಾರಿ ಮಾಡಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಒತ್ತುವರಿ ಗಣಿಗಾರಿಕೆಯನ್ನು ಪತ್ತೆ ಮಾಡುವುದಕ್ಕೆ ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿ Satellite digital imagery ಅನ್ನು ಒಳಗೊಂಡ ನಕ್ಷೆಯನ್ನು ತಯಾರಿಸುವುದಕ್ಕೆ ಕ್ರಮ ಕೈಗೊಳ್ಳಲಾಗುತ್ತಿದೆ. ಗಣಿ ಗುತ್ತಿಗೆ ಪ್ರದೇಶದ ಗಡಿಯನ್ನು ನಿಖರವಾಗಿ ಗುರುತು ಮಾಡುವುದಕ್ಕೆ ನಮಗೆ ಅನುಕೂಲವಾಗುತ್ತದೆ. ಈ ಎಲ್ಲಾ ದಿಟ್ಟ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿರುವುದರಿಂದ ರಾಜ್ಯದ ಸಂಪತ್ತನ್ನು ಲೂಟಿಯಾಗದಂತೆ ತಡೆಗಟ್ಟುವುದು ನಮ್ಮ ದಿಟ್ಟ ಇಚ್ಛಾಶಕ್ತಿಯಾಗಿದೆ. ಈಗ ತೆಗೆದುಕೊಂಡಿರುವ ಕ್ರಮಗಳನ್ನು ಯಾವುದೇ ಕಾರಣಕ್ಕೂ ಸಡಿಲಗೊಳಿಸದೆ ನಿರ್ದಾಕ್ಷಿಣ್ಯವಾಗಿ ಜಾರಿಗೆ ತರುವುದಕ್ಕೆ ಯಾವುದೇ ಪ್ರಭಾವಕ್ಕೆ ಒಳಗಾಗದೇ ಇದಕ್ಕೆ ಬದ್ಧರಾಗಿದ್ದೇವೆಂಬ ಭರವಸೆಯನ್ನು ಈ ಮನೆಯಲ್ಲಿ ಕೊಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ಅಂತರರಾಜ್ಯ ಗಡಿ ವಿವಾದ ಕುರಿತು ಮಾನ್ಯ ಲೋಕಾಯುಕ್ತರು ನೀಡಿರುವ ಮತ್ತೊಂದು ಮಹತ್ತರವಾದಂಥ ಶಿಫಾರಸ್ಸು ಏನೆಂದರೆ, ಬಳ್ಳಾರಿ ಗಡಿ ಪ್ರದೇಶಗಳಲ್ಲಿ ಆಗಿರುವಂಥ ಅನಧಿಕೃತ ಗಡಿ ಒತ್ತುವರಿ ಬಗ್ಗೆ ಹೇಳಿದ್ದಾರೆ. ಮಾನ್ಯ ಲೋಕಾಯುಕ್ತರು ತಮ್ಮ ವರದಿಯಲ್ಲಿ ಕರ್ನಾಟಕ ಮತ್ತು ಆಂಧ್ರಪ್ರದೇಶದ ರಾಜ್ಯಗಳ ಗಡಿ ಒತ್ತುವರಿ ವಿಚಾರ

ಕುರಿತು ಭಾರತ ಸರ್ಕಾರ ಜಂಟಿ ಸರ್ವೆ ಮಾಡುವುದಕ್ಕೆ ಕ್ರಮ ಕೈಗೊಳ್ಳುವುದಕ್ಕೆ ಶಿಫಾರಸ್ಸು ಮಾಡಿದ್ದರು. ಈ ಕುರಿತಂತೆ ತ್ವರಿತವಾಗಿ ಜಂಟಿ ಸರ್ವೆ ನಡೆಸುವಂತೆ ಕೋರಿ Director of General Survey of India ಇವರಿಗೆ ಕಂದಾಯ ಇಲಾಖೆಯಿಂದ ನಾವು ಪತ್ರ ಬರೆದಿದ್ದೇವೆ. ಇದರ ಬಗ್ಗೆ ವಿಶೇಷ ಗಮನಹರಿಸುವುದಕ್ಕೆ ದಿನಾಂಕ 9-02-2009 ರಂದು ಪತ್ರದ ಮುಖೇನ ಸನ್ಮಾನ್ಯ ಪ್ರಧಾನ ಮಂತ್ರಿಯವರಿಗೆ ನಾನು ಪತ್ರವನ್ನು ಬರದಿದ್ದೇನೆ. ಮಾನ್ಯ ಲೋಕಾಯುಕ್ತರ ಶಿಫಾರಸ್ಸಿನ ಮೇರೆಗೆ Survey of India ದಿಂದ ಜಂಟಿ ಸರ್ವೆ ಕಾರ್ಯ ಆಗುವವರೆಗೆ ವಿವಾದಿತ ಗಡಿಪ್ರದೇಶದಲ್ಲಿ ಗಣಿಗಾರಿಕೆ ನಡೆಸದೆ ಇರುವುದಕ್ಕೆ ಆಂಧ್ರಪ್ರದೇಶದ ರಾಜ್ಯದ ಗಣಿ ಇಲಾಖೆ ಕಾರ್ಯದರ್ಶಿಯವರಿಗೆ ದಿನಾಂಕ 17-03-2009ರಂದು ನಾನು ಪತ್ರ ಬರೆದಿದ್ದೇನೆ. ಎರಡೂ ರಾಜ್ಯಗಳ ಗಡಿಭಾಗದ ಸರ್ವೆ ಕಾರ್ಯವನ್ನು ಕೈಗೆತ್ತಿಕೊಳ್ಳುವಂತೆ ಭಾರತ ಸರ್ಕಾರದ ಗೃಹ ಮಂತ್ರಾಲಯವು ದಿನಾಂಕ 31-05-2010 ರಂದು Director of General Survey of India ಇವರಿಗೆ ಸೂಚನೆ ನೀಡಿದೆ. ಎರಡೂ ರಾಜ್ಯಗಳ ಗಡಿ ಭಾಗವನ್ನು ಗುರುತಿಸುವ ಬಗ್ಗೆ ಸರ್ವೋಚ್ಚ ನ್ಯಾಯಾಲಯ ನೇಮಿಸುವಂಥ ತಂಡಕ್ಕೆ ಸರ್ಕಾರದ ಗಣಿ ಮತ್ತು ಅರಣ್ಯ ಇಲಾಖೆಯಿಂದ ಎಲ್ಲಾ ರೀತಿಯ ನೆರವನ್ನು ಕೊಟ್ಟಿದ್ದೇವೆ. ಸರ್ವೆ ಕಾರ್ಯ ಅಂತಿಮಗೊಂಡಿರುವುದು ತಿಳಿದು ಬಂದಿದೆ. ಸರ್ವೆ ತಂಡ ತಮ್ಮ ಅಂತಿಮ ವರದಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಬೇಕಾಗುತ್ತದೆ. ಈ ವರದಿ ರಾಜ್ಯ ಸರ್ಕಾರಕ್ಕೆ ಲಭ್ಯವಾದ ತಕ್ಷಣ ಈ ಮನೆಯ ಗಮನಕ್ಕೆ ನಾನು ತರುತ್ತೇನೆ. ಈ ಹಂತದಲ್ಲಿ ಕೆಲವು ಮುಖ್ಯ ಮಾಹಿತಿಗಳನ್ನು ಸದನದ ಗಮನಕ್ಕೆ ತರುವುದಕ್ಕೆ ನಾನು ಇಚ್ಛಿಪಡುತ್ತೇನೆ. ದಿನಾಂಕ: 9-02-2009 ರಂದು ಮಾನ್ಯ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದು ಕರ್ನಾಟಕ ಮತ್ತು

ಆಂಧ್ರಪ್ರದೇಶದ ಗಡಿಯನ್ನು ಗುರುತಿಸುವ ಬಗ್ಗೆ ಸೂಕ್ತ ನಿರ್ದೇಶನವನ್ನು Survey of India ರವರಿಗೆ ನೀಡಬೇಕೆಂದು ನಾನು ಕೋರಿದ್ದೇನೆ. ಇದೇ ವಿಷಯದ ಬಗ್ಗೆ ದಿನಾಂಕ 9-02-2010ರಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಿಗಳಿಗೆ ಪತ್ರ ಬರೆದು ಕೂಡಲೇ ಅಂತರರಾಜ್ಯ ಗಡಿಯನ್ನು ಗುರುತಿಸುವ ಬಗ್ಗೆ ವಿನಂತಿ ಮಾಡಿಕೊಂಡಿದ್ದೇನೆ. ದಿನಾಂಕ 3-02-2010 ರಂದು ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯ ಮಂತ್ರಿಯವರಿಂದ ಪತ್ರ ಬಂದಿದ್ದು, ಈ ಗಡಿ ಗುರುತಿಸಿರುವ ಕಾರ್ಯ ಮುಗಿಯುವವರೆಗೆ ಶ್ರೀ ಎಸ್. ಬಿ. ಮಿನರಲ್ಸ್ ಟ್ರೇಡರ್ಸ್ ಮತ್ತು ಬಿ.ಎಂ. ಪ್ರೈವೇಟ್ ಲಿಮಿಟೆಡ್ ಸಂಸ್ಥೆ ರವರಿಗೆ ನೀಡಿರುವಂಥ ಪರವಾನಿಗೆಯನ್ನು ರದ್ದುಗೊಳಿಸಿರುವುದಾಗಿ ತಿಳಿಸಿದ್ದು, ಈ ಬಗ್ಗೆ ರಾಜ್ಯ ಸರ್ಕಾರದಿಂದ ಅಗತ್ಯ ಕ್ರಮವನ್ನು ತೆಗೆದುಕೊಂಡಿದ್ದೇವೆ. ಲೋಕಾಯುಕ್ತರು ಡಿಸೆಂಬರ್ 2008ರಲ್ಲಿ ವರದಿ ನೀಡಿದ್ದು, ಅದಕ್ಕೆ ಸರ್ಕಾರ 9-7-2009ರಂದು ಅನುಸರಣಾ ವರದಿಯನ್ನು ನೀಡಿದೆ. ಈ ಬಗ್ಗೆ ಲೋಕಾಯುಕ್ತರಿಂದ ಇದುವರೆಗೆ ಪ್ರತಿಕ್ರಿಯೆ ಅಥವಾ ಯಾವುದೇ ಮಾಹಿತಿ ನನಗೆ ಬಂದಿಲ್ಲ. ಈ ಸಂಧರ್ಭದಲ್ಲಿ ಮಾನ್ಯ ಮುನಿಯಪ್ಪನವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈ ರಕ್ಷಿತ ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಅನುವು ಮಾಡಿಕೊಟ್ಟಿರುವ ಬಗ್ಗೆ 6 ರಕ್ಷಿತ ಅರಣ್ಯ ಮೀಸಲೇತರ ಮಾಡುವುದರ ಬಗ್ಗೆ ಮಾನ್ಯ ಲೋಕಾಯುಕ್ತರು ಅಂದಿನ ಇಲಾಖೆಯ ಮಾನ್ಯ ಸಚಿವರನ್ನು ಮತ್ತು ಅಂದಿನ ಮುಖ್ಯ ಮಂತ್ರಿಯರನ್ನು ಹೊಣೆಗಾರರನ್ನಾಗಿ ಪತ್ರ ಬರೆದಿರುವುದು ತಮಗೆ ಗೊತ್ತಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅಂದಿನ ಮುಖ್ಯಮಂತ್ರಿ ಮತ್ತು ಅಂದಿನ ಇಲಾಖೆಯ ಸಚಿವರಿಗೆ ರಕ್ಷಿತ ಅರಣ್ಯದಲ್ಲಿ ಗಣಿಗಾರಿಕೆಗೆ ಅನುವು ಮಾಡಿಕೊಟ್ಟಿರುವ ಬಗ್ಗೆ ಬಹಳ ಒಂದು ದೊಡ್ಡ observation ಮಾಡಿ, ಇದು ಸರಿಯಲ್ಲ ಎಂದು ಹೇಳಿದ್ದಾರೆ. ಗಣಿ ಸಚಿವರು ವೈಯಕ್ತಿಕ ನೆಲೆಯಲ್ಲಿ ಈ ರಕ್ಷಿತ ಅರಣ್ಯಗಳನ್ನು ಮಿಸಲೇತರ ಪಡಿಸುವುದರಲ್ಲಿ

ಪಾತ್ರವಹಿಸಿದ್ದಾರೆಂಬ ನೇರ ಅಪಾದನೆಯನ್ನು ಲೋಕಾಯುಕ್ತರು ಮಾಡಿದ್ದರು. ಅಂದಿನ ಸಚಿವ ಸಂಪುಟಕ್ಕೆ ತಪ್ಪು ಮಾಹಿತಿ ನೀಡಿರುವ ಬಗ್ಗೆ ಮಾನ್ಯ ಲೋಕಾಯುಕ್ತರು ತಮ್ಮ ವರದಿಯಲ್ಲಿ ಉಲ್ಲೇಖ ಮಾಡಿದ್ದಾರೆ. ಈ ಸರ್ಕಾರ ಈ ವಿಷಯವನ್ನು ಸಚಿವ ಸಂಪುಟದಲ್ಲಿ ಕೂಲಂಕಷವಾಗಿ ಚರ್ಚಿಸಿ ರಾಜ್ಯದ ಹಿತದೃಷ್ಟಿಯಿಂದ ಗಣಿಗಾರಿಕೆ ಮಾಡುವುದಾದರೆ, ಉಕ್ಕು ಕಾರ್ಖಾನೆ ಸ್ಥಾಪಿಸಿ ಮೌಲ್ಯ ವರ್ಧನೆಗೆ ಮಾತ್ರ ಅದಿರನ್ನು ಕೊಡಬೇಕೆಂದು ನಾನು ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆ. ಅನಧಿಕೃತ ಗಣಿಗಾರಿಕೆ ತಡೆಗಟ್ಟುವುದಕ್ಕೆ ತನಿಖಾಠಾಣೆಯನ್ನು ಮಾಡಿ ಅಧಿಕ ಭಾರ ಹೊತ್ತು ಸಂಚರಿಸುವಂಥ ಮತ್ತು ಅನಧಿಕೃತವಾಗಿ ಖನಿಜವನ್ನು ಸಾಗಿಸುವ ಲಾರಿಗಳನ್ನು ಮತ್ತು ಟಾರ್ಪಲ್‌ಗಳನ್ನು ಹೊದಿಸದೆ ಸಂಚರಿಸುವ ಲಾರಿಗಳನ್ನು ನಿಯಂತ್ರಿಸುವುದಕ್ಕೆ ನಾವು ಅನೇಕ ಕ್ರಮಗಳನ್ನು ಕೈಗೊಂಡಿದ್ದೇವೆ. ಚಿತ್ರದುರ್ಗಾ ಜಿಲ್ಲೆಯ ವ್ಯಾಪ್ತಿಯಲ್ಲಿ ಮಲ್ಲಪ್ಪನ ಹಟ್ಟಿ ಮತ್ತು ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಕಿಬ್ಬನಹಳ್ಳಿ ಕ್ರಾಸ್, ರಜತಾದ್ರಿಪುರ ಮತ್ತು ಗುಡ್ಡದ ಪಾಳ್ಯ ಮತ್ತು ಬಳ್ಳಾರಿ ಜಿಲ್ಲೆಯ ವ್ಯಾಪ್ತಿಯಲ್ಲಿ ಕಲ್ಲಹಳ್ಳಿ, ಯಶವಂತನಗರ, ಕೂಡ್ಲಿಗಿ ಕ್ರಾಸ್, ಹಗರಿ, ಬೂದಿಹಾಳ್, ಬನ್ನಿಹಟ್ಟಿಯಲ್ಲಿ ಸಂಯುಕ್ತ ಚೆಕ್‌ಪೋಸ್ಟ್‌ಗಳನ್ನು ಈಗಾಗಲೇ ಸ್ಥಾಪಿಸಿದ್ದೇವೆ. ಈಗ ಸಾರಿಗೆ ಒಳಾಡಳಿತ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಇದನ್ನು ರಚನೆ ಮಾಡಿದ್ದೇವೆ. ಪ್ರಾಯೋಗಿಕವಾಗಿ ದಿನಾಂಕ: 1.11.2009ರಿಂದ 30.11.2009ರವರೆಗೆ 24 ಗಂಟೆ ಕಾಲ ನಿಗಾ ಇಡುವುದಕ್ಕೆ ವಿಶೇಷ ಕಾರ್ಯಪಡೆಯನ್ನು ಮಾಡಿದ್ದೇವೆ. 60,956 ವಾಹನಗಳನ್ನು ತಪಾಸಣೆಗೊಳಿಸಿ ತಪ್ಪಿತಸ್ಥ 94 ಲಾರಿಗಳಿಂದ ದಂಡ ವಸೂಲ್ಮಾಡಿದ್ದೇವೆ ಮತ್ತೆ ಕಬ್ಬಿಣದ ಅದಿರನ್ನು ವಶಪಡಿಸಿಕೊಂಡಿದ್ದೇವೆ. ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಅನಧಿಕೃತ ಗಣಿಗಾರಿಕೆಯನ್ನು

ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯದ ವಿವಿಧ ಕಡೆ ಪ್ರಮುಖವಾದ 13 ಸ್ಥಳಗಳಲ್ಲಿ ಸಂಯುಕ್ತ ತನಿಖಾ ಠಾಣೆಯನ್ನು ಪ್ರಾರಂಭ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ: (ಮಾನ್ಯ ವಿರೋಧಪಕ್ಷದ ನಾಯಕರು): ಮಾನ್ಯ ಮುಖ್ಯಮಂತ್ರಿಗಳು ತಾವು ಎದ್ದುನಿಂತುಕೊಂಡಾಗ ನಾನು ಎಷ್ಟು ಸಾರಿ ಕುಳಿತುಕೊಂಡಿದ್ದೇನೆ. ನೀವು Leader of the house ಕುಳಿತುಕೊಳ್ಳುವುದಿಲ್ಲ ಅಂದರೆ ಸ್ವಲ್ಪ ನಿಮಗೂ time rest ಸಿಗುತ್ತದೆ. ನೀವು ಈಗ ಮಧ್ಯದಲ್ಲಿ ಏನೋ ತಿನ್ನುತ್ತಿದ್ದೀರಿ. ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರಶ್ನೆ ಇರುವಂತಹದ್ದು ನಾನು ಅದನ್ನು ತೆಗೆದುಕೊಂಡಿದ್ದೇನೆ. ಈ ಕ್ರಮವನ್ನು ತೆಗೆದುಕೊಂಡಿದ್ದೇವೆ, ಲೋಕಾಯುಕ್ತ ರಿಪೋರ್ಟ್‌ನ್ನು ಜಾರಿ ಮಾಡಿದ್ದೇವೆ ಎಲ್ಲದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ಇವೆಲ್ಲಾ ಕ್ರಮಗಳನ್ನು ಜರುಗಿಸಿದ ಮೇಲೂ ಕೂಡ ಸುಮಾರು 5 ಲಕ್ಷ ಟನ್ ಕಬ್ಬಿಣದ ಅದಿರು, 2009-10 ರಲ್ಲಿ 71 ಲಕ್ಷ ಟನ್ ಕದ್ದು ಹೋಗಿದೆ ಎಂದು ಅವರೇ ಒಪ್ಪಿಕೊಂಡಿದ್ದಾರೆ. ನೀವು ತೆಗೆದುಕೊಂಡ ಕ್ರಮಗಳು ಏನಾಯಿತು? ಇವೆಲ್ಲಾ ಮಾಡಿದ ಮೇಲೆ ಸ್ವಲ್ಪವಾದರೂ ಕಡಿಮೆ ಆಗಬೇಕಾಗಿತ್ತಲ್ಲಾ, ಅದು ನಿಲ್ಲದಿದ್ದರೆ ಹೋಗಲಿ, ಏಕೆಂದರೆ ಕಳ್ಳರು ಅಷ್ಟು ಸುಲಭವಾಗಿ ನಿಲ್ಲಿಸುವುದಿಲ್ಲ. ಇವರು ಏನೇ ಮಾಡಿದರೂ ಕೂಡ "ಚಾಪೆ ಕೆಳಗೆ ಇವರು ನುಗ್ಗಿದರೆ ಅವರು ರಂಗೋಲೆ ಕೆಳಗಡೆ ಬಹಳ ಜನರು ನುಗ್ಗುತ್ತಾರೆ" ಆಯಿತಲ್ಲಾ ಇವರು ನಿಲ್ಲಿಸಿದ ಮೇಲೆ 2008-09 ರಲ್ಲಿ 31 ಲಕ್ಷ ಟನ್ ಇದ್ದದ್ದು 2009-10 ರಲ್ಲಿ 71 ಲಕ್ಷ ಟನ್ ಕಬ್ಬಿಣದ ಅದಿರು ಹೇಗೆ ಕದ್ದು ಹೋಯಿತು? That means to say ಇವರು ತೋರಿಕೆಗೋಸ್ಕರ ಮಾಡಿದ್ದಾರೆಯೇ ಹೊರತು ನಿಲ್ಲಿಸುವ ಬಗ್ಗೆ ಇವರು ಪ್ರಾಮಾಣಿಕತೆಯಿಂದ ಯಾವುದು ಪ್ರಯತ್ನವನ್ನು ಮಾಡಿಲ್ಲವೆಂದು ಇವರು ಕೊಟ್ಟಿರುವಂತಹ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಇಲ್ಲಿ ನನ್ನದೇನೂ ಇಲ್ಲ, ಅವರು ಕೊಟ್ಟಿರುವಂತಹ ಅಂಕಿಅಂಶ 2008-09ಕ್ಕೆ 31 ಲಕ್ಷ ಟನ್, 2009-10ಕ್ಕೆ 71 ಲಕ್ಷ ಟನ್ ಕಬ್ಬಿಣದ ಅದಿರು ಕಳುವಾಗಿದೆ ಎಂದು ಮತ್ತು

ಬೇರೆ ಬೇರೆ ಬಂದರುಗಳಿಂದ ಕದ್ದು ಹೋಗಿದೆ ಎಂದು ಅಂಕಿಅಂಶ ಕೊಟ್ಟಿದ್ದಾರೆ. ಇವರು ಎರಡು ವರ್ಷದಲ್ಲಿಯೇ ಒಟ್ಟು 294 ಲಕ್ಷ ಕದ್ದು ಹೋಗಿದೆ ಎಂದು ಲೆಕ್ಕವನ್ನು ಕೊಟ್ಟಿದ್ದಾರೆ. ಅದರಲ್ಲಿ 1 ಕೋಟಿ 3 ಲಕ್ಷ ಟನ್ ಕಬ್ಬಿಣದ ಅದಿರು ಇವರ ಅವಧಿಯಲ್ಲಿ ಹೋಗಿದೆ. ಇವರು ಎಲ್ಲಾ ಕ್ರಮಗಳನ್ನು ಮಾಡಿದ ಮೇಲೆಯೂ ಕೂಡ ಅದು ಹೇಗೆ ಹೋಯಿತು ಇದಕ್ಕೆ ಅವರು ಉತ್ತರವನ್ನು ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿಗಳು): ಮಾನ್ಯ ಪ್ರತಿಪಕ್ಷದ ನಾಯಕರು ಬಹಳ ಪ್ರಮುಖವಾದಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ನಾನು ಯಾವುದೇ ಸಂದರ್ಭದಲ್ಲಿ ಯಾವುದೇ ವರ್ಷ ಎಷ್ಟು ಕಬ್ಬಿಣದ ಅದಿರು ಕಾನೂನು ಬಾಹಿರವಾಗಿ ಹೋಗಿದೆ ಎನ್ನುವುದರ ಬಗ್ಗೆ ನಾನು ಮುಚ್ಚಿಡುವಂತಹ ಪ್ರಯತ್ನ ಮಾಡಲಿಲ್ಲ, ನಾನು ಮುಚ್ಚಿಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ: ನೀವು ಹೇಳಿರುವಂತಹ ಅಂಕಿಅಂಶಗಳೇ?

ಶ್ರೀ ಬಿ.ಎಸ್. ಯಡಿಯೂರಪ್ಪ: ಹೌದು ನೀವು ಹೇಳುವುದು ಸರಿ ಇದೆ. ಅದನ್ನು ಸರಿ ಮಾಡುವ ಬಗ್ಗೆ ಏನೇನು ಪ್ರಯತ್ನ ಮಾಡುತ್ತೇನೆಂಬುದರ ಬಗ್ಗೆ ಮುಂದೆ ಹೇಳುತ್ತೇನೆ. ಮಾನ್ಯ ಲೋಕಾಯುಕ್ತರು ಶಿಫಾರಸ್ಸು ಮಾಡಿದಂತೆ ಅನಧಿಕೃತ ಗಣಿಗಾರಿಕೆಯನ್ನು ತಡೆಯುವುದಕ್ಕೆ ವಿವಿಧ ಪ್ರಮುಖ ಸ್ಥಳಗಳಲ್ಲಿ Integrated Check Post ಗಳನ್ನು ಸ್ಥಾಪಿಸುತ್ತಿದ್ದೇವೆ. ಮಂಗಳೂರು, ಹೊಸಪೇಟೆ, ಚಿತ್ರದುರ್ಗ, ಉತ್ತರಕನ್ನಡ, ಬಳ್ಳಾರಿ, ಗದಗ ಜಿಲ್ಲೆಗಳಲ್ಲಿ ದಿನಾಂಕ: 1.6.2010ರಿಂದ ಸಂಯುಕ್ತ ತನಿಖಾ ಠಾಣೆಗಳು ಕಾರ್ಯನಿರ್ವಹಿಸುತ್ತವೆ. ಮಾನ್ಯ ಲೋಕಾಯುಕ್ತರು ಸರ್ಕಾರಕ್ಕೆ ತನಿಖಾ ವರದಿಯನ್ನು ನೀಡಿದ ನಂತರ ಬಳ್ಳಾರಿ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಅನಧಿಕೃತವಾಗಿ ಗಣಿಗಾರಿಕೆ ಮಾಡಿ ಶೇಖರಿಸಿಟ್ಟಿದ್ದ 6,50,762 ಮೆಟ್ರಿಕ್‌ಟನ್ ಕಬ್ಬಿಣದ ಅದಿರನ್ನು

ವಶಪಡಿಸಿಕೊಂಡು 39.14 ಕೋಟಿ ರೂಪಾಯಿಗಳಷ್ಟು ಹರಾಜಿನ ಮೂಲಕ ವಿಲೇ ಮಾಡಿದ್ದೇವೆ. 2008–09 ಮತ್ತು 2009–10ನೇ ಸಾಲಿನಲ್ಲಿ ಒಟ್ಟು 16,45,190 ವಾಹನಗಳನ್ನು ತಪಾಸಣೆಯನ್ನು ಮಾಡಿದ್ದೇವೆ. ನಿಯಮಬಾಹಿರವಾಗಿ ಅದಿರನ್ನು ಸಾಗಾಣಿಕೆ ಮಾಡುತ್ತಿದ್ದ 13,440, ವಾಹನಗಳಿಗೆ ದಂಡವನ್ನು ವಿಧಿಸಿ 28,44 ಕೋಟಿ ರೂಪಾಯಿಗಳನ್ನು ಸಂಗ್ರಹಣೆ ಮಾಡಿದ್ದೇವೆ. ಹಿಂದೆ ಯಾರ ಕಾಲದಲ್ಲಿಯೂ ಮಾಡಿರಲಿಲ್ಲ, ಹಿಂದಿನ 7–8 ವರ್ಷದ ಅವಧಿಯಲ್ಲಿ ಲಾರಿಯನ್ನು ಹಿಡಿಯಲಿಲ್ಲ. ದಂಡವನ್ನು ಹಾಕಲಿಲ್ಲ. ಕಬ್ಬಿಣದ ಅದಿರನ್ನು ವಶಪಡಿಸಿಕೊಳ್ಳಲಿಲ್ಲ. ಚೆಕ್‌ಪೋಸ್ಟ್‌ನ್ನು ಹಾಕುವುದರ ಬಗ್ಗೆ ಗಮನವನ್ನು ಕೊಡಲಿಲ್ಲ. ನಮ್ಮ ಕಣ್ಮುಂದೆಯೇ ಎಲ್ಲಾ ದಂಧೆಗಳು ನಡೆಯುತ್ತಿದ್ದರೂ ಸರ್ಕಾರವು ಕಣ್ಮುಚ್ಚಿಕೊಂಡು ಕುಳಿತಿತ್ತು. ಮಾನ್ಯ ಲೋಕಾಯುಕ್ತರು ನಮ್ಮ ಕಣ್ಣನ್ನು ತೆರೆಸಿದ್ದಾರೆ. ನಾನು ಇಲ್ಲವೆಂದು ಹೇಳುವುದಿಲ್ಲ. ಇದನ್ನು ಬಿಗಿ ಮಾಡುವುದಕ್ಕೆ ಏನೆಲ್ಲಾ ಮಾಡಬೇಕೆಂಬುದರ ಬಗ್ಗೆ ಇಲ್ಲಿ ಸವಿಸ್ತಾರವಾದಂತಹ ಚರ್ಚೆ ನಡೆಯುತ್ತಿದೆ. ಮಾನ್ಯ ಶಿವಕುಮಾರ್ ರವರೆ, ಇವು ರಾಜ್ಯ ಸರ್ಕಾರವು ತೆಗೆದುಕೊಳ್ಳುವಂತಹ ಹೆಚ್ಚುವರಿ ಕ್ರಮಗಳು. ರಾಜ್ಯ ಸರ್ಕಾರ ಈಗಾಗಲೇ ಮಂಡಿಸಿರುವ ವರದಿಯ ಬಗ್ಗೆ ಮಾನ್ಯ ಲೋಕಾಯುಕ್ತರು ಲಿಖಿತ ಪ್ರತಿಕ್ರಿಯೆಯನ್ನು ನೀಡದೆ ಇದ್ದರೂ ಸಹ ರಾಜ್ಯ ಸರ್ಕಾರವು ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಆ ದೃಢ ನಿರ್ಧಾರದಿಂದ ಮುಂದುವರಿಸುವುದಕ್ಕೆ ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ Co-ordination cum-empowered Committee ಯನ್ನು ರಚನೆ ಮಾಡಿದ್ದೇವೆ. ಈ ಸಮಿತಿಯೂ ಈಗಾಗಲೇ ಸಭೆ ನಡೆಸಿ ನಿರ್ದಿಷ್ಟ ಕ್ರಮಗಳನ್ನು ತೆಗೆದುಕೊಳ್ಳುವುದರ ಬಗ್ಗೆ ಕಾರ್ಯಪ್ರವೃತ್ತವಾಗಿದೆ. ಸರ್ಕಾರವು ಅಧಿಕಾರವನ್ನು ವಹಿಸಿಕೊಂಡ ಕೂಡಲೆ ಅತ್ಯಧಿಕ ಪ್ರಮಾಣದಲ್ಲಿ ಕಬ್ಬಿಣದ ಅದಿರು...

ಶ್ರೀ ಸಿದ್ದರಾಮಯ್ಯ: ಮಾನ್ಯ ಯಡಿಯೂರಪ್ಪನವರೆ, ... ನನ್ನ ಪ್ರಶ್ನೆ ಏನೆಂದರೆ. . .

ಶ್ರೀ ಬಿ.ಎಸ್. ಯಡಿಯೂರಪ್ಪ: ಸಾರ್, ಇದು too much. ನಾನು ಪೂರ್ತಿ ಓದಿದ ಮೇಲೆ ನಿಮಗೆ ಉತ್ತರ ಸಿಗುತ್ತದೆ. ನೀವು ಕೇಳುವುದಕ್ಕೆ ರೆಡಿ ಇಲ್ಲ ಎಂದರೆ ಹೇಗೆ?

ಶ್ರೀ ಸಿದ್ದರಾಮಯ್ಯ : ನಾನು simple question ಕೇಳುತ್ತಿದ್ದೇನೆ.

ಅಧ್ಯಕ್ಷರು: ಅವರು ಕೊಡುತ್ತೇನೆಂದು ಹೇಳುತ್ತಿದ್ದರಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಕೊನೆಗೆ ಉತ್ತರವನ್ನು ಕೊಡುತ್ತೇನೆ. ನಾನು ಯೀಲ್ಡ್ ಆಗಿಲ್ಲಾ ಸಾರ್.

ಅಧ್ಯಕ್ಷರು: ಅವರು ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ: ಇವರ ಕಾಲದಲ್ಲಿಯೇ ಲೋಕಾಯುಕ್ತ ರಿಪೋರ್ಟ್ ಸಬ್‌ಮಿಟ್ ಆಗಿರುವುದು.

ಅಧ್ಯಕ್ಷರು: ಅವರು ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಇದು ಹೇಗೆ ಸಾರ್? ಒಬ್ಬ ಪ್ರತಿ ಪಕ್ಷದ ನಾಯಕರಿಗೆ ನಾನು ಯೀಲ್ಡ್ ಆಗಿಲ್ಲವೆಂದರೂ ಕೂಡ ನಿಂತುಕೊಂಡು ಮಾತನಾಡಿದರೆ ಹೇಗೆ? ಇದು ಯಾವ ಧರ್ಮ? ಏನು ನಾನು ಓಡಿಹೋಗುತ್ತೇನೆಯೇ? ನಿಮಗೆ ಏನು ಬೇಕು ಅದನ್ನು clarify ಮಾಡಿ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಒಂದು ಲಕ್ಷ ಟನ್ ಕಬ್ಬಿಣದ ಅದಿರು ಬಂದರಿನಿಂದ ಹೋಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೂಂ, ನಾನು ಇಲ್ಲವೆಂದು ಹೇಳುತ್ತಿಲ್ಲ. ನಿಮ್ಮ ಕಾಲದಲ್ಲಿ ಹೋಗಿರುವ ಬಗ್ಗೆ ನೀವು ಉತ್ತರವನ್ನು ಕೊಡಿ. ನಿಮ್ಮ ಕಾಲದಲ್ಲಿ ಹೋಯಿತಲ್ಲಾ, ಆಗ ನೀವು ಏನು ಮಾಡಿದ್ದೀರಿ?

ಶ್ರೀ ಸಿದ್ದರಾಮಯ್ಯ: 5,000 ಕೋಟಿ ರೂಪಾಯಿಗಳ.......

ಶ್ರೀ ಬಿ.ಎಸ್ ಯಡಿಯೂರಪ್ಪ: ನಿಮ್ಮ ಕಾಲದಲ್ಲಿ ಹೋಯಿತಲ್ಲಾ, ಆಗ ನೀವು ಏನು ಮಾಡಿದ್ದೀರಿ?

ಶ್ರೀ ಸಿದ್ದರಾಮಯ್ಯ: ಆಗ ಲೋಕಾಯುಕ್ತದವರು ಈ ರೀತಿಯಾದ ರಿಪೋರ್ಟ್‌ನ್ನು ಕೊಟ್ಟಿರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ಆಗ ನೀವು ಮುಚ್ಚಿಟ್ಟಿದ್ದೀರಿ.

ಶ್ರೀ ಸಿದ್ದರಾಮಯ್ಯ: ಯಾರು ಮುಚ್ಚಿಟ್ಟಿದ್ದರು?

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವು,

ಶ್ರೀ ಸಿದ್ದರಾಮಯ್ಯ: ನೀವೇ ಕೊಟ್ಟಿರುವಂತಹ ರಿಪೋರ್ಟ್ ಇದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಇದು ಒಳ್ಳೆಯ ಕತೆಯಾಯಿತಲ್ಲಾ?

ಅಧ್ಯಕ್ಷರು: Please .....

ಶ್ರೀ ಸಿದ್ದರಾಮಯ್ಯ : ಲೋಕಾಯುಕ್ತರ ರಿಪೋರ್ಟಿನ ಬಗ್ಗೆ ನಾನು ಹೇಳಿರುವುದಿಲ್ಲ, ನೀವೇ ಹೇಳಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : No, No. I am sorry.

ಶ್ರೀ ಸಿದ್ದರಾಮಯ್ಯ: ಲೋಕಾಯುಕ್ತರ ರಿಪೋರ್ಟಿನ ಬಗ್ಗೆ ನೀವೇ ಹೇಳಿದ್ದೀರಿ. 24 ನೇ ಡಿಸೆಂಬರ್ 2008 ಆಗ ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದೀರಿ. 150 ಕೋಟಿ ರೂಪಾಯಿಗಳ ಬಗ್ಗೆ ಎತ್ತಿದಾಗ ಆಗ ಮಾನ್ಯ ಕುಮಾರಸ್ವಾಮಿಯವರು

ಮುಖ್ಯಮಂತ್ರಿಯಾಗಿದ್ದರು. ಇವರು ಹಣಕಾಸಿನ ಮಂತ್ರಿ ಹಾಗೂ Deputy Chief Minister ಆಗಿದ್ದರು. ಅದು ಆದ ಮೇಲೆ ಲೋಕಾಯುಕ್ತರಿಗೆ ಇದು ರೆಫರ್ ಆಗಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ: ತಾವು ಪೂರ್ತಿ ಉತ್ತರವನ್ನು ಕೊಟ್ಟ ಮೇಲೆ ನಿಮಗೆ ಏನು ಮಾಹಿತಿ ಬೇಕೋ ಅದನ್ನು ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಲೋಕಾಯುಕ್ತರು ಈ ಬಗ್ಗೆ ಚರ್ಚೆ ಮಾಡಿದ್ದಾರೆ. ಇವರ ಕಾಲದಲ್ಲಿ ರಿಪೋರ್ಟ್ ಬಂದಿದೆ. ಒಂದೂವರೆ ವರ್ಷದಿಂದ ಇವರ ಹತ್ತಿರ ರಿಪೋರ್ಟ್ ಇದೆ.

ಅಧ್ಯಕ್ಷರು: ಆಯಿತು, ಇವರು ಉತ್ತರವನ್ನು ಕೊಡುತ್ತೇನೆಂದು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: ಇವರ ಇಲಾಖೆಯಲ್ಲಿಯೇ ಕಳ್ಳತನಗಳು ನಡೆಯುತ್ತಿದೆ. ಇದು ಆದರೂ ಕೂಡ ಆ ಕ್ರಮವನ್ನು ತೆಗೆದುಕೊಂಡಿದ್ದೇನೆ. ಈ ಕ್ರಮವನ್ನು ತೆಗದುಕೊಂಡಿದ್ದೇನೆ.

ಅಧ್ಯಕ್ಷರು : ಆಯಿತು, ಅವರು ಹೇಳುವುದನ್ನು ಪೂರ್ತಿ ಕೇಳಿ.

ಶ್ರೀ ಸಿದ್ದರಾಮಯ್ಯ: ಅದು ಯಾವ ಕಾಲದಲ್ಲಿಯಾದರೂ ಆಗಲಿ, ನಮ್ಮ ಕಾಲದಲ್ಲಿಯೂ ಆಗಿದೆ ಎಂದು ಹೇಳಿದ್ದಾರೆ, Yes, ಅದನ್ನು ನಾನು ಸಹ ಒಪ್ಪಿಕೊಳ್ಳುತ್ತೇನೆ. ಆಗಿದೆ, ಕಳ್ಳತನ ಆಗಿದೆ, ಸಿಬಿಐಗೆ ಒಪ್ಪಿಸುತ್ತೇನೆಂದು ಒಪ್ಪಿಕೊಳ್ಳಿ. ಏಕೆ ಇಷ್ಟೆಲ್ಲಾ .....

ಅಧ್ಯಕ್ಷರು: ಆಯಿತು.

ಶ್ರೀ ಎಸ್. ಸುರೇಶ್ ಕುಮಾರ್ : ಇನ್ನು ಉತ್ತರ ಮುಗಿದಿಲ್ಲವಲ್ಲಾ,

(ಗೊಂದಲ)

SRI. SIDDARAMAIAH :- 1/3 rd export of illegal Iron-ore has been done during the tenure of Mr. Yediyurappaji. What more is required . . . .

ಅಧ್ಯಕ್ಷರು : ಅವರು ಉತ್ತರವನ್ನು ಕೊಟ್ಟು ಮುಗಿಸಲಿ.

ಶ್ರೀ ಸಿದ್ದರಾಮಯ್ಯ : ಈಗ ಮರ್ಡರ್ ಮಾಡಿದವರಿಗೆ ಶಿಕ್ಷೆ ಕೊಡಿ ಅಂದರೆ, ಕಳ್ಳತನ ಮಾಡಿರುವವರಿಗೆ ಶಿಕ್ಷೆ ಕೊಡಿ ಅಂದರೆ ಹೇಗೆ?

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಮುಖ್ಯಮಂತ್ರಿಗಳ ಉತ್ತರ ಇನ್ನು ಮುಗಿದಿಲ್ಲ. ಮುಖ್ಯಮಂತ್ರಿಗಳು ಉತ್ತರ ಕೊಡುವುದಿಲ್ಲವೆಂದು ಹೇಳಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಈಗ ಹೇಳುತ್ತೇನೆಂದು ಅವರು ಏನು ಹೇಳುತ್ತಿಲ್ಲವಲ್ಲ.

ಅಧ್ಯಕ್ಷರು : ಅವರು ಹೇಳುತ್ತೇನೆಂದು ಹೇಳಿದ್ದಾರೆ. ಅವರು ಹೇಳದಿದ್ದರೆ ಹೇಳಿಸೋಣ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಈಗಲೇ ಇದೇ ರೀತಿ ಉತ್ತರ ಕೊಡಿ ಎಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ಅವರು ಕೇಳಿದ್ದಾರೆ, ಅವರು ಉತ್ತರ ಹೇಳುವಾಗ ಕೊಡುತ್ತಾರೆ. ಮಾನ್ಯ ಮುಖ್ಯಮಂತ್ರಿಗಳ ಉತ್ತರ ಮುಗಿದಿದೆಯಾ?

ಶ್ರೀ ಸಿದ್ದರಾಮಯ್ಯ: ಈ ಉತ್ತರವನ್ನು ಮುಖ್ಯಮಂತ್ರಿಗಳಿಂದ ಈ ರಾಜ್ಯದ ಜನ ನಿರೀಕ್ಷೆ ಮಾಡಿರಲಿಲ್ಲ. ನಾನಂತೂ ಸಹ ನಿರೀಕ್ಷೆ

ಮಾಡಿರಲಿಲ್ಲ. ನಾವು ಯಾರು ಕೂಡ ಇದನ್ನು ಉತ್ತರವೆಂದು ಒಪ್ಪಿಕೊಳ್ಳುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳ ಉತ್ತರವು ಇನ್ನೂ ಮುಗಿದಿರುವುದಿಲ್ಲ. ಅವರ answer ಪೂರ್ತಿಯಾಗಲಿ.

ಶ್ರೀ ಸಿದ್ದರಾಮಯ್ಯ: ಇದು ಬರೀ Action to be taken report.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಮುಖ್ಯಮಂತ್ರಿಗಳ ಉತ್ತರ ಇನ್ನು ಮುಗಿದಿರುವುದಿಲ್ಲ. ಉತ್ತರ ಹೀಗೆ ಬರಬೇಕೆಂದು .....

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳ Answer ಆಗಲಿ.

ಶ್ರೀ ಎಸ್. ಸುರೇಶ್ ಕುಮಾರ್: ಪರಿಹಾರದ ಪ್ರಶ್ನೆ ಬರುವುದಿಲ್ಲ.

ಅಧ್ಯಕ್ಷರು: Answer ಪೂರ್ತಿ ಮುಗಿಯಲಿ.

ಶ್ರೀ ಎಸ್. ಸುರೇಶ್‌ಕುಮಾರ್: ಇಲ್ಲಿ ನಿಮ್ಮ ಧ್ವನಿಯೇ ಬಹಳ ಮುಖ್ಯ, ಇಲ್ಲಿ ಪರಿಹಾರವಲ್ಲ.

ಅಧ್ಯಕ್ಷರು: ಪೂರ್ತಿ ಮುಗಿಯಲಿ.

ಶ್ರೀ ಸಿದ್ದರಾಮಯ್ಯ : ಅದು ಪರಿಹಾರವೇ?

ಅಧ್ಯಕ್ಷರು: ಅವರು ಹೇಳುವುದು ಪೂರ್ತಿ ಮುಗಿಯಲಿ ನಂತರ ಕೇಳಿ. You have got every right to ask clarification.

(ಗೊಂದಲ)

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು: ಅವತ್ತು ಕಳ್ಳತನ ಆಗಿರುವ ಬಗ್ಗೆ ತಾವು ಏನು ಮಾಡುತ್ತಿದ್ದೀರಿ?

ಅಧ್ಯಕ್ಷರು: ಅವರು ಅದನ್ನು ಒಪ್ಪಿಕೊಂಡಿದ್ದಾರಲ್ಲಾ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು : ನೀವು ಕಳ್ಳತನ ಮಾಡಿರುವವರಿಗೆ Support ಮಾಡುತ್ತಿದ್ರಾ. ಅವತ್ತು ನೀವು ಏನು ಮಾಡುತ್ತಿದ್ದಿರಿ?

ಶ್ರೀ ಸಿದ್ದರಾಮಯ್ಯ: ಅದಿರು, ಅಕ್ರಮಗಣಿಗಾರಿಕೆಯೇ ಇಲ್ಲವೆಂದು ಹೇಳುತ್ತಾರೆ.

ಶ್ರೀ ಕಟ್ಟಾಸುಬ್ರಹ್ಮಣ್ಯನಾಯ್ಡು : ಇವತ್ತು ನೀತಿಕತೆಯನ್ನು ಹೇಳುವುದಕ್ಕೆ ಬಂದಿದ್ದೀರಲ್ಲಾ. ನೀವು ಆವತ್ತು ಏನು ಮಾಡುತ್ತಿದ್ದೀರಿ?

ಶ್ರೀ ಸಿದ್ದರಾಮಯ್ಯ: ಲೋಕಾಯುಕ್ತರು ರಿಪೋರ್ಟನ್ನು ಕೊಟ್ಟಮೇಲೆಯೂ ಕೂಡ ಮಾರ್ಚ್ ತಿಂಗಳಲ್ಲಿ ಬಳ್ಳಾರಿಗೆ ಹೋಗಿ ಇದು ಅಕ್ರಮಗಣಿಗಾರಿಕೆ ನಡೆಯುತ್ತಿಲ್ಲ...

ಅಧ್ಯಕ್ಷರು: ಈಗ ಅವರು ಉತ್ತರ ಆಗಲಿ, ಆಮೇಲೆ ನೀವು ಕೇಳಿ.

ಶ್ರೀ ಸಿದ್ದರಾಮಯ್ಯ: ಈ ರಾಜ್ಯದ ಜನರನ್ನು ದಾರಿತಪ್ಪಿಸುವುದನ್ನು ಮಾಡುತ್ತಿದ್ದಾರೆ. ಸಿಬಿಐ enquiry ಆಗಬೇಕು. ಈ ಸರ್ಕಾರವು ರಾಜೀನಾಮೆಯನ್ನು ಕೊಡಬೇಕು ಎಂದು ನಮ್ಮ ಒತ್ತಾಯ ಇದೆ. ಆದುದರಿಂದ CBI enquiry ಆಗಬೇಕೆಂದು ಹೇಳುತ್ತೇನೆ. ಇದು ದಾರಿತಪ್ಪಿಸುವಂತಹ ಉತ್ತರವಾಗಿದೆ.

ಅಧ್ಯಕ್ಷರು: ಆಯಿತು, ಅವರು ಉತ್ತರವನ್ನು ಮುಗಿಸಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅತ್ಯಂತ ಬಹಳ ಮುಖ್ಯವಾಗಿ ಮಾನ್ಯ ಸಿದ್ದರಾಮಣ್ಣನವರೆ, ಒಂದು ನಿಮಿಷ ನಾನು ಮಾತನಾಡುತ್ತೇನೆ.

ಬಹಳ ಮುಖ್ಯವಾಗಿ ಲೋಕಾಯುಕ್ತರಿಗೆ ಏನು ಅಧಿಕಾರವನ್ನು ಕೊಡಬೇಕಾಗಿದೆ, ಲೋಕಾಯುಕ್ತವನ್ನು ಸರಿ ಮಾಡುವುದಕ್ಕೆ ನಾವು ಏನೇನು ಪ್ರಯತ್ನವನ್ನು ಮಾಡುತ್ತಿದ್ದೇವೆನ್ನುವ ಬಗ್ಗೆ ನಾನು ಹೇಳುತ್ತೇನೆ. ಒಂದು ಸ್ವಲ್ಪ ತಾವು ತಾಳ್ಮೆಯಿಂದ ಇರಬೇಕು.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ...

ಶ್ರೀ ಬಿ.ಎಸ್ ಯಡಿಯೂರಪ್ಪ: ಮಾನ್ಯ ಜಯಚಂದ್ರರವರೆ, this is too much. ನಾನು yield ಆಗಿಲ್ಲ.

ಅಧ್ಯಕ್ಷರು: ಅವರು ಉತ್ತರ ಕೊಡಲಿ, Please.

ಶ್ರೀ ಬಿ.ಎಸ್. ಯಡಿಯೂರಪ್ಪ: This is not the way. ನಾನು yield ಆಗಿಲ್ಲಾ ಸಾರ್.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಮುಖ್ಯಮಂತ್ರಿಗಳು ಪೂರ್ತಿ ಉತ್ತರವನ್ನು ಕೊಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಉತ್ತರ ಕೊಟ್ಟಮೇಲೆ ತಾವು ಏನು ಬೇಕಾದರೂ ಕೇಳಿ ಅದಕ್ಕೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ಜಯಚಂದ್ರರವರೆ, ತಾವು ಆಮೇಲೆ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಾವು ಲೋಕಾಯುಕ್ತರಿಗೆ ಏನು ಅಧಿಕಾರವನ್ನು ಕೊಡುತ್ತಿದ್ದೇವೆನ್ನುವ ಬಗ್ಗೆ ನಾವು ಹೇಳುತ್ತೇವೆ. ನಿಮ್ಮ ಭಾಷಣವನ್ನು ನಾವು ಕೇಳಿಲ್ಲವೇ,

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಸಾರ್ ತಾವು ದಯಮಾಡಿ ಅವರಿಗೆ ಹೇಳಬೇಕು.

ಅಧ್ಯಕ್ಷರು: Please, ಮಾನ್ಯ ಜಯಚಂದ್ರರವರೆ, ತಾವು ಆಮೇಲೆ ಕೇಳಿ. ಆಮೇಲೆ ತಮಗೆ ಅವಕಾಶವನ್ನು ಕೊಡುತ್ತೇನೆ. ಆಮೇಲೆ ತಾವು ಡೀಟೆಲ್ ಆಗಿ ಕೇಳಿ. ಈಗ ಅವರು ಉತ್ತರವನ್ನು ಮುಗಿಸಲಿ. ಆಮೇಲೆ ಎಲ್ಲರಿಗೂ ಕೇಳುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

(ಗೊಂದಲ)

Sri. S. Suresh Kumar :- this is not the way.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಅತ್ಯಂತ ವಿನಯದಿಂದ ನಮ್ಮ ಸಿದ್ದರಾಮಣ್ಣನವರಿಗೆ, ಜಯಚಂದ್ರರವರಿಗೆ, ಆ ಕಡೆ ಕುಳಿತಿರುವವರಿಗೆ ನೀವು ಏನು ಪ್ರಶ್ನೆಯನ್ನು ಕೇಳಿದರೂ ಅದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ. ನಾನು ಆ ಬಗ್ಗೆ clarify ಮಾಡುತ್ತೇನೆ. ನಾನು ಲೋಕಾಯುಕ್ತರಿಗೆ ಯಾವ ರೀತಿಯಾಗಿ ಅಧಿಕಾರವನ್ನು ಕೊಡುತ್ತಿದ್ದೇನೆಂಬ ಬಗ್ಗೆ ನಾನು ಇಲ್ಲಿ ಹೇಳುತ್ತೇನೆ. ಲೋಕಾಯುಕ್ತರ ಕೈಯನ್ನು ಬಲಪಡಿಸಬೇಕಲ್ಲವೇ? ನಮ್ಮ ಕೈಯಲ್ಲಿ ಆಗಲಿ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ . . . .

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಶಿವಕುಮಾರ್, ನಾನು ಹೇಳಿದ ಮೇಲೆ ತಾವು ಕೇಳಿ. ನಾನು ಏನೇನು ಮಾಡಿದ್ದೇನೆಂಬುದರ ಬಗ್ಗೆ ಉತ್ತರವನ್ನು ಕೊಡುತ್ತೇನೆ. ನಾನು ಏನೇನು ಮಾಡಿದ್ದೇನೆಂದು ಹೇಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ನೀವು ಬರೀ Chief Secretary ಕೈಯಲ್ಲಿ, ಅವರ ಕೈಯಲ್ಲಿ ಇವರ ಕೈಯಲ್ಲಿ ಮಾಡಿಸುತ್ತೇನೆಂದು ಹೇಳುತ್ತಿದ್ದೀರಿ. ನೀವು ಇದನ್ನು ಮಾಡುವುದಕ್ಕೆ ಸಾಧ್ಯವೇ? ಎಂದು ನಾವು ಕೇಳುತ್ತಿರುವುದು. ಎಷ್ಟು ಜನರನ್ನು ಹಿಡಿದಿದ್ದೇವೆಂದು ನೀವು ಏನೂ ಹೇಳುತ್ತಿಲ್ಲವಲ್ಲ?

ಅಧ್ಯಕ್ಷರು: ಅದನ್ನೂ ಹೇಳುತ್ತಿದ್ದೇನೆಂದು ಹೇಳಿದ್ದಾರಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವು ಏನು ಮಾಡಿದ್ದೀರಾ ಯಡಿಯೂರಪ್ಪನವರೆ ಎಂದು ಕೇಳಿದ್ದಾರೆ. ನನ್ನ ಸರ್ಕಾರ ಅಧಿಕಾರ ವಹಿಸಿಕೊಂಡ ಕೂಡಲೇ ಅತ್ಯಧಿಕ ಪ್ರಮಾಣದಲ್ಲಿ ಕಬ್ಬಿಣದ ಅದಿರು ರಫ್ತಾಗುತ್ತಿದ್ದರೂ ಸಹ ರಾಜ್ಯ ಸರ್ಕಾರವು ಪಡೆಯುತ್ತಿದ್ದ ರಾಜಧನ ಸುಮಾರು 80 ಕೋಟಿ ರೂಪಾಯಿಗಳು ಮಾತ್ರ. ರಾಜ್ಯಧನವನ್ನು ಮೌಲ್ಯಾಧಾರಿತವಾಗಿ ನಿಗಧಿಗೊಳಿಸುವ ಪ್ರಸ್ತಾವನೆ ಹಲವು ವರ್ಷಗಳಿಂದ ಕೇಂದ್ರ್ರದ ಮುಂದೆ ಇದ್ದರೂ ಅದು ಆಗಲಿಲ್ಲ. ಈಗ ರಾಜಧನದ ಮೂಲದಿಂದ ಕಬ್ಬಿಣದ ಅದಿರಿನಿಂದ ರಾಜ್ಯ ಸರ್ಕಾರವು ಸುಮಾರು 320 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿದ್ದೇವೆ.

(ಈ ಹಂತದಲ್ಲಿ ಮಾನ್ಯ ಸಿದ್ದರಾಮಯ್ಯನವರು ಮಾತನಾಡಲು ಎದ್ದು ನಿಂತರು)

ಶ್ರೀ ಬಿ. ಎಸ್. ಯಡಿಯೂರಪ್ಪ: ಸರ್, ಇದನ್ನು ಬಿಸಾಕಿ ಹೋಗುತ್ತೇನೆ. ನಾನೂ ಅಷ್ಟೇ. ಕುಳಿತುಕೊಳ್ಳಿರಿ ಸ್ವಲ್ಪ. ನೀವೊಬ್ಬರೇನಾ ವಿರೋಧ ಪಕ್ಷದ ನಾಯಕ ಆಗಿರುವುದು. ಕುಳಿತುಕೊಳ್ರಿ ಸ್ವಲ್ಪ. ನನಗೆ ಮಾತನಾಡುವುದಕ್ಕೆ ಬಿಡದೆ ಏನ್ರೀ ಮಧ್ಯದಲ್ಲಿ ತಾವು ಮಾತನಾಡುತ್ತೀರಿ? ಎದ್ದು ಎದ್ದು ನಿಂತುಕೊಳ್ಳುತ್ತೀರಾ. ಹೆದರಿಸುತ್ತೀರಾ ನೀವು. ಕುಳಿತುಕೊಳ್ರಿ ಗೊತ್ತಿದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಏನು ಕುಸ್ತಿ ಮಾಡುವುದಕ್ಕೆ ಬರುತ್ತೀರಾ?

ಶ್ರೀ ಬಿ. ಎಸ್. ಯಡಿಯೂರಪ್ಪ: ನನಗೆ ಮಾತನಾಡುವುದಕ್ಕೆ ಬಿಡುವುದಿಲ್ಲ. ಉತ್ತರ ಕೊಡುವ ಸಮಯದಲ್ಲಿ ಏನು ಕೇಳುತ್ತಿದ್ದೀರಿ?

(ಗೊಂದಲ)

ಶ್ರೀ ಬಿ.ಎಸ್ ಯಡಿಯೂರಪ್ಪ: ನಿಮ್ಮ ಕಾಲದಲ್ಲಿ ಲೂಟಿಯಾಯಿತು. ಹೌದು. ಹೀಗೆ ಹೇಳಿದರೆ ನಿಮಗೇನು ತೊಂದರೆಯಾಗುತ್ತದೆ? ನಾನು ಹೀಗೆಯೇ ಹೇಳುವುದು. ಹೀಗೆ ಹೇಳಿದರೆ ನಿನಗೇನು ತೊಂದರೆಯಾಗುತ್ತದೆ? ನನಗೆ ಇತಿಮಿತಿಗಳ ಬಗ್ಗೆ ಗೊತ್ತಿದೆ. ಈ ರಾಜ್ಯದ ಜನತೆಗೆ ಲೂಟಿ ಮಾಡಿರುವವರು ಯಾರು ಎಂದು ಗೊತ್ತಿದೆ. ಉತ್ತರವನ್ನು ಕೊಡುವುದಕ್ಕೂ ಬಿಡದೆ ಅಡ್ಡಿಯನ್ನು ಮಾಡುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ : ನಿಮ್ಮ ಆಸ್ತಿ ನಮ್ಮ ಆಸ್ತಿ ಎಲ್ಲವನ್ನೂ ಸೇರಿಸಿ ಸಿಬಿಐಗೆ ಕೊಡ್ರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಯಾರಿಗೆ ಕೊಡಬೇಕೆಂಬುದರ ಬಗ್ಗೆ ಆಮೇಲೆ ತೀರ್ಮಾನವನ್ನು ಮಾಡೋಣ. ನಾನು ಉತ್ತರವನ್ನು ಕೊಡುವವರೆಗೂ ತಾವು ಕುಳಿತುಕೊಳ್ಳಿ.

ಶ್ರೀ ಡಿ.ಕೆ. ಶಿವಕುಮಾರ್ : ತಾವು ಹುಡುಗಾಟವನ್ನು ಆಡುತ್ತೀರಾ, ಕುಸ್ತಿಯನ್ನು ಮಾಡುತ್ತೀರಾ? ಮಾನ್ಯ ಅಧ್ಯಕ್ಷರೆ,..

(ಈ ಹಂತದಲ್ಲಿ ವಿರೋಧಪಕ್ಷದ ನಾಯಕರು ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತಪ್ಪಾ, ಕ್ಷಮಿಸಪ್ಪಾ, ನಿಮ್ಮಲ್ಲಿ ಕ್ಷಮೆ ಕೇಳುತ್ತೇನೆ. ತಾವು ನಡೆಯಿರಿ. ಆಯಿತು ದಯಮಾಡಿ ಕ್ಷಮಿಸಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತಪ್ಪಾ, ನನ್ನಿಂದ ತಪ್ಪಾಗಿದೆ ಹೋಗಿ ತಾವು ಕುಳಿತುಕೊಳ್ಳಿ. ಆಯಿತು ಕ್ಷಮಿಸಿರಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ತಪ್ಪಾಯಿತು ಎಂದು ಹೇಳಿದ್ದಾರಲ್ಲಾ,

(ಸದನದ ಬಾವಿಯಿಂದಲೇ ಕಾಂಗ್ರೆಸ್ ಪಕ್ಷದ ಸದಸ್ಯರು ಮಾತನಾಡುತ್ತಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಏನೋ ಆವೇಶದಲ್ಲಿ ಮಾತನಾಡಿದ್ದೇನೆ, ನಾನು ಕ್ಷಮೆಯನ್ನು ಕೇಳುತ್ತೇನೆ, ತಾವೆಲ್ಲರೂ ಹೋಗಿ ಕುಳಿತುಕೊಳ್ಳಿ.

(ಸದನದ ಬಾವಿಯಿಂದಲೇ ಮಾನ್ಯ ಸಿದ್ದರಾಮಯ್ಯನವರು, ಮಾತನಾಡುತ್ತಿದ್ದರು.)

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತಪ್ಪಾ, ನಾನು ಕ್ಷಮೆಯನ್ನು ಕೇಳುತ್ತಿದ್ದೇನೆ. ತಾವು ನಡೆಯಿರಿ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಕ್ಷಮೆಯನ್ನು ಕೇಳಿದ್ದಾರೆ, ತಾವುಗಳು ತಮ್ಮಗಳ ಸ್ಥಾನಗಳಿಗೆ ಹೋಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಕ್ಷಮೆಯನ್ನು ಕೇಳುತ್ತಿದ್ದೇನೆ. ನಡೆಯಿರಿ.

ಅಧ್ಯಕ್ಷರು : ಅವರು ಕ್ಷಮೆಯನ್ನು ಕೇಳಿದ್ದಾರೆ. ತಾವೆಲ್ಲರೂ ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸದನದ ಬಾವಿಯಿಂದ ಹೋಗಿ ತಮ್ಮ ಸ್ಥಾನಗಳಿಗೆ ತೆರಳಿದರು)

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್ : ಅಧ್ಯಕ್ಷರೆ, ಮುಖ್ಯಮಂತ್ರಿಗಳು ಸ್ವಲ್ಪ ತಾಳ್ಮೆಯಿಂದಿರಬೇಕು.

ಶ್ರೀ ಸಿದ್ದರಾಮಯ್ಯ : ನಮಗೂ ಸಹ ತೊಡೆಯನ್ನು ತಟ್ಟುವುದಕ್ಕೂ ಬರುತ್ತದೆ, ಜಗಳವಾಡುವುದಕ್ಕೂ ಬರುತ್ತದೆ. I can also do that.

ಅಧ್ಯಕ್ಷರು : ಆಯಿತು, ಅವರು ಕ್ಷಮೆಯನ್ನು **ಕೇಳಿದ್ದಾರಲ್ಲಾ,** please.

12-30 ಪಿ.ಎಂ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ನಾನು ಆವೇಶದಲ್ಲಿ ಆ ರೀತಿಯಾಗಿ ಮಾತನಾಡುವಂತಹ ಸಂದರ್ಭದಲ್ಲಿ ಸಹಜವಾಗಿ ಪ್ರತಿಪಕ್ಷದ ನಾಯಕರಿಗೆ ಬೇಜಾರಾಗಿದೆ. ಅದಕ್ಕಾಗಿ ನಿಮ್ಮಲ್ಲಿ ನಾನು ಕ್ಷಮೆಯನ್ನು ಕೇಳುತ್ತೇನೆ. ನಾನು ಬಹಳ ಸಂಯಮದಿಂದ ಇರಬೇಕೆನ್ನುವಂತಹ ಪ್ರಯತ್ನದಲ್ಲಿ ಇದ್ದೇನೆ. ನಾನು ನಿಮ್ಮಲ್ಲಿ ಅತ್ಯಂತ ವಿನಯದಿಂದ ವಿನಂತಿಯನ್ನು ಮಾಡುವಂತಹದ್ದು ಒಂದು ವಾರದಿಂದ ಬಹಳ ಪ್ರಮುಖವಾದಂತಹ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಬಹಳ ಪ್ರಮುಖವಾಗಿ ನಡೆಯುತ್ತಿರುವ ಈ ದಂಧೆಯನ್ನು ಕೊನೆ ಮಾಡುವುದಕ್ಕೆ ಲೋಕಾಯುಕ್ತರು ನನಗೆ ಯಾವುದೇ ಅಧಿಕಾರವಿಲ್ಲ-ವೆಂದು ಹೇಳಿ ಬೇಸರ ಮಾಡಿಕೊಂಡು ರಾಜೀನಾಮೆಯನ್ನು ಕೊಡುವುದಕ್ಕೆ ಹೋದರು. ಈಗ ರಾಜ್ಯಪಾಲರ ಹತ್ತಿರ ತಮ್ಮ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಅವರಿಗೆ ಶಕ್ತಿಯನ್ನು ತುಂಬುವುದಕ್ಕೆ ನಾವು ಅವರಿಗೆ ಬೇಕಾದ ಅಧಿಕಾರವನ್ನು ಕೊಡಬೇಕಾಗುತ್ತದೆ. ಅದರ ಬಗ್ಗೆಯೇ ಚರ್ಚೆಯನ್ನು ಮಾಡಿ ಇದರ ಬಗ್ಗೆ ನನ್ನ ಹೇಳಿಕೆಯನ್ನು ಕೊಡುವವನಿದ್ದೇನೆ. ಈ ಸಂದರ್ಭದಲ್ಲಿ ದಯಮಾಡಿ ನನ್ನ ಪೂರ್ಣ ಉತ್ತರವನ್ನು ಕೊಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕು. 6 ದಿವಸಗಳ ಕಾಲ ತಾವು ಪ್ರಸ್ತಾಪ ಮಾಡಿದಂತಹ ಅನೇಕ ಪ್ರಮುಖ

ವಿಷಯಗಳಿಗೆ ನಾನು ಉತ್ತರವನ್ನು ಕೊಡಬೇಕಾದುದು ನನ್ನ ಕರ್ತವ್ಯ. ನಾನು ಉತ್ತರವನ್ನು ಕೊಟ್ಟ ಮೇಲೆ ನಿಮಗೆ ಸಮಜಾಯಿಷಿ ಆಗದೇ ಇದ್ದರೆ ತಮಗೆ ಏನು ಸರಿ ಅನಿಸುತ್ತದೆ, ಆ ತೀರ್ಮಾನವನ್ನು ತಾವು ತೆಗೆದುಕೊಳ್ಳಬಹುದು. ಅದರ ಬಗ್ಗೆ ನನ್ನದೇನೂ ಅಭ್ಯಂತರವಿಲ್ಲ. ಮತ್ತೆ ಪ್ರತಿಪಕ್ಷದವರಿಗೆ ಹೀಗೆ ಆಗಬೇಕೆನ್ನುವಂತಹ ಕೇಳುವ ಅಧಿಕಾರವಿದೆ. ಆಡಳಿತ ಪಕ್ಷದವರು ಹೀಗೆ ಮಾತ್ರ ಮಾಡುವುದು ಹೀಗೆ ಆಗುವುದಿಲ್ಲವೆಂದು ಹೇಳುವಂತಹ ಅಧಿಕಾರ ನಮಗೆ ಇದೆ. ಇದು Democracy ವ್ಯವಸ್ಥೆಯಾಗಿದೆ. So, ಆದ್ದರಿಂದ ದಯಮಾಡಿ ನಾನು ಉತ್ತರ ಕೊಡುವವರೆಗೂ ತಾವು ಶಾಂತರಾಗಿ ಇರಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಹಿಂದೆ ಕಬ್ಬಿಣದ ಅದಿರಿನ ಮೂಲಕ ರಾಜಧನ 80 ಕೋಟಿ ರೂಪಾಯಿಗಳು ಬರುತ್ತಿತ್ತು. ಈಗ 320 ಕೋಟಿ ರೂಪಾಯಿಗಳು ಬರುತ್ತಿದೆ. ಪರಿಸರ ಸಂರಕ್ಷಣಾ ಶುಲ್ಕವನ್ನು ಪ್ರತಿ ಹೆಕ್ಟೇರ್‌ಗೆ ರೂ. 84,000 ದಂತೆ ಅರಣ್ಯೇತರ ಜಮೀನುಗಳಿಗೆ ಫೆಬ್ರವರಿ-2003 ರಿಂದ ಜಾರಿಗೆ ತಂದಿದ್ದು ಇಲ್ಲಿಯವರೆಗೆ 90 ಕೋಟಿ ರೂಪಾಯಿಗಳು ವಸೂಲು ಆಗುತ್ತಿತ್ತು. ಅರಣ್ಯಾಭಿವೃದ್ಧಿ ಶುಲ್ಕವನ್ನು 2009ರಿಂದ ಹೊಸ ವ್ಯವಸ್ಥೆಯು ಆದ ಮೇಲೆ 2009-10ನೇ ಸಾಲಿನಲ್ಲಿ 336 ಕೋಟಿ ರೂಪಾಯಿಗಳು, 2010-11ನೇ ಸಾಲಿನಲ್ಲಿ ಈವರೆಗೆ 185 ಕೋಟಿ ರೂಪಾಯಿಗಳ ಆದಾಯವು ಈಗಾಗಲೇ ನಮಗೆ ಬಂದಿದೆ. ಅಂದರೆ ಈ ಮೂಲದಿಂದ ರಾಜಧನ ಮತ್ತು ಪರಿಸರ ಸಂರಕ್ಷಣಾ ಶುಲ್ಕ ಇದರಿಂದ ಇಲ್ಲಿಯವರೆಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ನಾವು ತೆರಿಗೆಯನ್ನು ಸಂಗ್ರಹ ಮಾಡಿದ್ದೇವೆ. ಕೇಂದ್ರ ಸರ್ಕಾರದ Indian Bureau of Mine ತಂಡದವರಿಗೆ ಅನಧಿಕೃತ ಗಣಿಗಾರಿಕೆಯ ಪ್ರಕರಣಗಳನ್ನು ಪತ್ತೆಹಚ್ಚಿ ಸೂಕ್ತ ಕ್ರಮವನ್ನು ಜರುಗಿಸಲಾಗಿದೆ. ಈ ಗಣಿ ಮಾಲೀಕರಿಗೆ ಅದಿರು ಸಾಗಾಣಿಕೆ ಪರವಾನಗಿ ನೀಡುವುದನ್ನು ಸಂಪೂರ್ಣವಾಗಿ ತಡೆಹಿಡಿದಿದ್ದೇವೆ. ಮಾನ್ಯ ಕರ್ನಾಟಕದ ಉಚ್ಚನ್ಯಾಯಾಲಯದಲ್ಲಿ

ತಡೆಯಾಜ್ಞೆ ಇದ್ದರೂ ಸಹ ಈಗಿನ ವ್ಯವಸ್ಥೆಯಲ್ಲಿಯೇ ಅದಿರು ಪರವಾನಿಗೆಯನ್ನು ಗಣಕೀಕರಣಗೊಳಿಸಿ ಬಾರ್‌ಕೋಡ್ ಮತ್ತು Hologram ಒಳಗೊಂಡ ಪರವಾನಿಗೆಯನ್ನು ಜಾರಿ ಮಾಡುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಈ ಪರವಾನಿಗೆ ವ್ಯವಸ್ಥೆಯನ್ನು ಜಾರಿಗೊಳಿಸುತ್ತೇವೆ. ಇದು ಅನಧಿಕೃತ ಅದಿರು ಸಾಗಾಣಿಕೆಯನ್ನು ಪತ್ತೆ ಹಚ್ಚುವುದರಲ್ಲಿ ಹೆಚ್ಚು ಸಹಕಾರಿಯಾಗುತ್ತದೆ. ಗಣಿಗಾರಿಕೆ ಪ್ರದೇಶದಲ್ಲಿ ಒತ್ತುವರಿ ಪ್ರಕರಣಗಳನ್ನು ಪತ್ತೆಹಚ್ಚಿ ಕ್ರಮಗಳನ್ನು ಜರುಗಿಸುವುದಕ್ಕೆ ಅನುಕೂಲವಾಗುವಂತೆ High Resolution Satellite Data ಪಡೆದುಕೊಂಡು ಆ ಯೋಜನೆಯನ್ನು ಹಾಕಿಕೊಳ್ಳುತ್ತಿದ್ದೇವೆ. ಕೇಂದ್ರ ಸರ್ಕಾರದ ನೀತಿಯನ್ನು ಅದಿರು ರಫ್ತಿಗೆ ಪ್ರಾಮುಖ್ಯತೆ ಮುಂದುವರೆಸುವ ನೀತಿ ಇದ್ದರೂ ಸಹ ರಾಜ್ಯ ಸರ್ಕಾರವು ಮೌಲ್ಯವರ್ಧಿತ ಗಣಿಗುತ್ತಿಗೆಯ ನೀತಿಯನ್ನು ಜಾರಿಗೆ ನಾವು ಕೊಟ್ಟಿದ್ದೇವೆ. ಈಗಾಗಲೇ ಈ ಸರ್ಕಾರವು ತೆಗೆದುಕೊಂಡ ದಿಟ್ಟ ನಿರ್ಧಾರದಂತೆ ಅದಿರು ಸಾಗಾಣಿಕೆ ಮಾಡುವಂತಹ ವಾಹನಗಳ ಮೇಲೆ 500 ರೂಪಾಯಿಯಷ್ಟು ಪ್ರತಿ ಲಾರಿಗೆ ಶುಲ್ಕ ವಿಧಿಸುವಂತಹ ಒಂದು ಆದೇಶವನ್ನು ಸಹ ನಾವು ಈಗಾಗಲೇ ಮಾಡಿದ್ದೇವೆ. ನಮ್ಮ ಸರ್ಕಾರವು ಲೋಕಾಯುಕ್ತರ ವರದಿಯ ಆಧಾರದ ಮೇಲೆ ಸಂಸ್ಥೆಯ ಹಿತದೃಷ್ಟಿಯಿಂದ M/s. JSW Steel Limited ಇವರು ಪಾವತಿಸಬೇಕಾಗಿರುವ premium ದರವನ್ನು ಶೇಕಡ 6 ರಿಂದ ಇದು ಬಹಳ ಮುಖ್ಯವಾಗಿರುವಂತಹದ್ದು. ಹಿಂದೆ ಮಾನ್ಯ ಶಿವಕುಮಾರ್‌ರವರೆ, ಈ JSW Steel Limited ರವರು ಈ premium ದರವನ್ನು ಶೇಕಡ 6ರಷ್ಟು ಮಾತ್ರ ಕೊಡುತ್ತಿದ್ದರು. ನಾನು ಈ ಬಗ್ಗೆ ಬಿಗಿ ನಿಲುವನ್ನು ತೆಗೆದುಕೊಂಡು ಶೇಕಡ 50ರಷ್ಟನ್ನು ಹೆಚ್ಚಿಸುವುದರಿಂದ 2009ನೇ ಸಾಲಿನ ಪ್ರಥಮ ತ್ರೈಮಾಸಿಕ ಏಪ್ರಿಲ್–ಮೇ–ಜೂನ್ ಅವಧಿಯಲ್ಲಿಯೇ ಸಂಗ್ರಹವಾದ ಮೊತ್ತ ಹಿಂದೆ 2.18 ಕೋಟಿ ರೂಪಾಯಿಗಳು ಆಗಿತ್ತು. 2010ರ ಏಪ್ರಿಲ್–ಮೇ–ಜೂನ್‌ರಲ್ಲಿ 60 ಕೋಟಿ

ರೂಪಾಯಿಗಳು ಆಗಿದೆ. ಅಂದರೆ 6% ಇದ್ದಾಗ ಏಪ್ರಿಲ್-ಮೆ-ಜೂನ್‌ರಲ್ಲಿ 2.18 ಕೋಟಿ ರೂಪಾಯಿಗಳು ಸಂಗ್ರಹವಾಗಿದ್ದರೆ ನಾನು ನನ್ನ ನಿಲುವನ್ನು ಬದಲಾವಣೆ ಮಾಡಿ ಶೇಕಡಾ 6ರ ಬದಲು 50ಕ್ಕೆ ಹೆಚ್ಚಿಸಿರುವ premium ದರವನ್ನು ಈ ಮೂರು ತಿಂಗಳಲ್ಲಿ ಏಪ್ರಿಲ್-ಮೇ-ಜೂನ್‌ರಲ್ಲಿ 60 ಕೋಟಿ ರೂಪಾಯಿಗಳು ಬಂದಿದೆ. ಅಂದರೆ ಸುಮಾರು 57.5 ಕೋಟಿ ರೂಪಾಯಿಗಳು ಕೈಗಾರಿಕೆಯ ಗಣಿ ಮಾಲೀಕರು ಯಾರು Industries ನಡೆಸುತ್ತಿದ್ದವರು ಅವರಿಗೆ ಇದರಿಂದ ಲಾಭವಾಗುತ್ತಿತ್ತು. ಅಂದರೆ ಬಹಳ ವರ್ಷಗಳಿಂದ ಅವರಿಗೆ ಇದರಿಂದ ಲಾಭವಾಗುತ್ತಿತ್ತು. ಅದನ್ನು ಕೊನೆ ಮಾಡಿ ಇವತ್ತು ಇಷ್ಟು ದೊಡ್ಡ ಪ್ರಮಾಣದಲ್ಲಿ ಆದಾಯ ಬರುವ ಹಾಗೆ ನಾನು ಮಾಡಿದ್ದೇನೆ. ಇದರಿಂದ ವಾರ್ಷಿಕವಾಗಿ 250 ಕೋಟಿಗೂ ಹೆಚ್ಚುವರಿ ಆದಾಯ ಬರುವಂತಹ ಒಂದು ಅಂದಾಜು ಇದೆ. ಇದು ಅಲ್ಲದೆಯೇ ನಿಗಮದ ಹಿತದೃಷ್ಟಿಯಿಂದ ಪಾರದರ್ಶಕವಾದ ನೂತನ ಕಬ್ಬಿಣದ ಅದಿರು ಮಾರಾಟ ಹಾಗೂ ದರ ನಿಗದಿಯ ನೀತಿ 2010ನ್ನು ನಾವು ಜಾರಿಗೊಳಿಸಿದ್ದೇವೆ. ದೀರ್ಘಾವಧಿ ಅದಿರು ಸರಬರಾಜು ಒಪ್ಪಂದಗಳಲ್ಲಿ ವಾರ್ಷಿಕ ದರ ನಿಗದಿ ಮಾಡುವುದರಲ್ಲಿ ಪಾರದರ್ಶಕತೆಯನ್ನು ಮಾಡುವ ಬಗ್ಗೆ ವೈಜ್ಞಾನಿಕವಾದ ಕ್ರಮವನ್ನು ಅಳವಡಿಸುತ್ತಿದ್ದೇವೆ.

2009-10ನೇ ಸಾಲಿನಲ್ಲಿ ನಿಗಮದ ವಹಿವಾಟು ಅತ್ಯಂತ ಉತ್ತಮ ಪ್ರಗತಿ ಸಾಧಿಸಿ 306 ಕೋಟಿ ರೂಪಾಯಿಗಳ ವಹಿವಾಟು ನಡೆಸಿದ್ದು ತೆರಿಗೆಗೆ ಮುನ್ನ 196 ಕೋಟಿ ರೂಪಾಯಿಗಳಷ್ಟು ಲಾಭಗಳಿಸಿದ್ದೇವೆ. ತೆರಿಗೆ ನಂತರ 335 ಕೋಟಿ ನಿವ್ವಳ ಲಾಭವನ್ನು ಗಳಿಸಿದ್ದೇವೆ. 2009-10ನೇ ಸಾಲಿನಲ್ಲಿ ವಿವಿಧ ಸುಧಾರಣಾ ಕ್ರಮಗಳಿಂದ ನಿಗಮದ ವಾರ್ಷಿಕ ವಹಿವಾಟು 500 ಕೋಟಿ ರೂಪಾಯಿಗಳನ್ನು ಮೀರುವಂಥ ಒಂದು ಸಂದರ್ಭ ಇದೆ. ಇನ್ನು ರಾಜ್ಯದ ಲೋಕಾಯುಕ್ತ ನ್ಯಾಯಮೂರ್ತಿ

ಶ್ರೀ ಸಂತೋಷ್ ಹೆಗ್ಡೆಯವರು ರಾಜೀನಾಮೆ ಕೊಟ್ಟಂಥ ವಿಷಯ ಇಲ್ಲಿ ಬಹಳ ಮುಖ್ಯವಾಗಿ ಚರ್ಚೆಯಾಗುತ್ತಿದೆ. ಅವರ ರಾಜೀನಾಮೆ ಒಂದು ಅನಿರೀಕ್ಷಿತ ಮತ್ತು ದುರಾದೃಷ್ಟಕರ ಬೆಳವಣಿಗೆ ಆಗಿದೆ. ನನ್ನ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಲೋಕಾಯುಕ್ತರೊಂದಿಗೆ ಉತ್ತಮ ಬಾಂಧವ್ಯವನ್ನು ಕಾಯ್ದುಕೊಂಡು ಬಂದಿದ್ದೇವೆ. ಈ ಹಿಂದೆ ನೀಡಿದಂಥ ಯಾವುದೇ ಅಧಿಕಾರವನ್ನು ನಾವು ವಾಪಸ್ಸು ಪಡೆದಿಲ್ಲ ಶಿವಕುಮಾರ್‌ರವರೇ, ನನಗೆ ಆಶ್ಚರ್ಯವೆಂದರೆ ಕಳೆದ 24 ವರ್ಷಗಳಲ್ಲಿ ಈ ಲೋಕಾಯುಕ್ತರಿಗೆ ಹೊಸ ಮಸೂದೆ ಕಾಯ್ದೆ ಜಾರಿಗೆ ಬಂದ ಮೇಲೆ ಹಿಂದಿನ ಯಾವುದೇ ಸರ್ಕಾರ ಆವತ್ತು ಹೆಚ್ಚಿನ ಅಧಿಕಾರ ಕೊಡದೇನೆ 24 ವರ್ಷಗಳು ಕಳೆದ ಮೇಲೆ ಯಡಿಯೂರಪ್ಪನವರ ಸರ್ಕಾರ ಮುಖ್ಯಮಂತ್ರಿಯಾದ ತಕ್ಷಣ ಕೇಳುವುದು, 24 ವರ್ಷ ರಾಮಕೃಷ್ಣ ಹೆಗಡೆಯವರೇ ಅಂಥ ರಾಜಕೀಯ ಮುತ್ಸದ್ಧಿ ಹೆಚ್ಚಿನ ಅಧಿಕಾರದ ಬಗ್ಗೆ ಚಿಂತನೆ ಮಾಡಿ ಕೊಟ್ಟಂಥ ಹೆಚ್ಚಿನ ಅಧಿಕಾರವನ್ನು ವಾಪಸ್ಸು ಪಡೆದ ಮೇಲೂ ಸಹ ಹಿಂದಿನ ಯಾವುದೇ ಸರ್ಕಾರ ಈ ಅಧಿಕಾರವನ್ನು ಕೊಡುವುದರ ಬಗ್ಗೆ ಯಾವುದೇ ಪ್ರಾಮಾಣಿಕ ಪ್ರಯತ್ನ ಮಾಡಲಿಲ್ಲ, ಬದಲಾವಣೆ ಮಾಡಲಿಲ್ಲ. ಆದರೆ ಸಂತೋಷ್ ಹೆಗ್ಡೆಯವರು ಅಸಮಾಧಾನದಿಂದ ರಾಜೀನಾಮೆಯನ್ನು ಕೊಟ್ಟ ಮೇಲೆ ತಾವು ಒಂದೇ ಸಾರಿ ಈ ಎಲ್ಲಾ ಅಧಿಕಾರವನ್ನು ಲೋಕಾಯುಕ್ತರಿಗೆ ಕೊಡಬೇಕೆಂದು ಒತ್ತಾಯವನ್ನು ತಾವು ಮಾಡುತ್ತಿದ್ದೀರಿ. ತಮಗೆ ಗೊತ್ತಿರುವಂತೆ ಸಿದ್ಧರಾಮಯ್ಯನವರೇ, ಲೋಕಾಯುಕ್ತ ಅಧಿನಿಯಮ ದಿನಾಂಕ 15.01.1986 ರಲ್ಲಿ ಜಾರಿಗೆ ಬಂತು. ಹೀಗೆ ಜಾರಿಗೆ ಬಂದಾಗ ಲೋಕಾಯುಕ್ತರಿಗೆ ಸ್ವಪ್ರೇರಣೆಯಿಂದ ತನಿಖೆ ನಡೆಸುವಂಥ ಅಧಿಕಾರವನ್ನು ನೀಡಲಾಗಿತ್ತು ಇದರಂತೆ ಮುಖ್ಯಮಂತ್ರಿಗಳು, ಮಂತ್ರಿಗಳು, ಶಾಸಕರು ಮತ್ತು ಹಿರಿಯ ಶ್ರೇಣಿಯ ಅಧಿಕಾರಿಗಳನ್ನು ಮೇಲ್ಪಟ್ಟ ಎಲ್ಲಾ ಅಧಿಕಾರಿಗಳ ವಿರುದ್ಧ ಸ್ವಪ್ರೇರಣೆಯಿಂದ ತನಿಖೆ ಮಾಡುವಂಥ ಅಧಿಕಾರವನ್ನು ಕೊಟ್ಟಿದ್ದರು. ಲೋಕಾಯುಕ್ತರಿಗೆ ಸ್ವಪ್ರೇರಣೆಯಿಂದ ತನಿಖೆ ನಡೆಸುವಂಥ

ಅಧಿಕಾರವನ್ನು ಕೇವಲ ಆರು ತಿಂಗಳುಗಳಲ್ಲಿ ಸುಗ್ರೀವಾಜ್ಞೆ ತಂದು 16.6.1986 ರಂದು ಅದನ್ನು ಹಿಂದಕ್ಕೆ ಪಡೆದರು. ಈ ಮನೆಯಲ್ಲಿ ಅನೇಕ ಗೌರವಾನ್ವಿತ ಸದಸ್ಯರು ಅವತ್ತಿನ ಸರ್ಕಾರದಲ್ಲಿ ಸಚಿವರಾಗಿದ್ದಿರಿ, ಶಾಸಕರಾಗಿದ್ದಿರಿ, ಈ ಮನೆಯಲ್ಲಿದ್ದಿರಿ ನಾನೂ ಇದ್ದೆ. ಆದರೆ ಅವತ್ತು ರಾಮಕೃಷ್ಣ ಹೆಗಡೆಯವರ ದೂರದೃಷ್ಟಿ ಮುಂದಿನ ಭವಿಷ್ಯದ ಹಿನ್ನೆಲೆಯಲ್ಲಿ ಎಷ್ಟು ಅಧಿಕಾರವನ್ನು ಯಾರಿಗೆ ಕೊಡಬೇಕು ಎನ್ನುವಂಥ ಚಿಂತನೆ ಅವರಲ್ಲಿತ್ತು. ಅವರು ವಾಪಸ್ಸು ತೆಗೆದುಕೊಂಡರು. ನಾವೆಲ್ಲಾ ಒಂದು ರೀತಿ ಸ್ವಾಗತ ಮಾಡಿದೆವು. ಆದರೆ ದಿನಾಂಕ 26.09.1986 ನೇ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 7(1)ಕ್ಕೆ ತಿದ್ದುಪಡಿ ತಂದು ಲೋಕಾಯುಕ್ತರಿಗೆ ಸ್ವಪ್ರೇರಣೆಯಿಂದ ತನಿಖೆ ನಡೆಸಲಿಕ್ಕೆ ಇದ್ದ ಅಧಿಕಾರವನ್ನು ತೆಗೆದು ಹಾಕಲಾಗಿದೆ. 1986 ರಿಂದ ಇದುವರೆಗೆ ಅನೇಕ ಸರ್ಕಾರಗಳು ಅಸ್ತಿತ್ವಕ್ಕೆ ಬಂದಿದ್ದರೂ ಸಹ ಲೋಕಾಯುಕ್ತರಿಗೆ ಸ್ವಪ್ರೇರಣೆಯಿಂದ ತನಿಖೆಯನ್ನು ನಡೆಸಲಿಕ್ಕೆ ಅಧಿಕಾರವನ್ನು ನೀಡಿಲ್ಲ. ಮಧ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ಬಂತು, ರಾಜ್ಯಪಾಲರು ಇದ್ದರು ಆ ಸಮಯದಲ್ಲಿ ಯಾರೂ ಅದನ್ನು ಅಡ್ಡಿ ಮಾಡಲಿಕ್ಕೆ ಆಗುತ್ತಿರಲಿಲ್ಲ. ಆ ಕಾಲದಲ್ಲಿಯೂ ಸಹ ಹೆಚ್ಚಿನ ಒಂದು ಅಧಿಕಾರವನ್ನು ಕೊಡಲಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಒಂದು ನಿಮಿಷ ಯೀಲ್ಡ್ ಆಗುವಿರಾ? ನಾವು ಏಕೆ ತಮಗೆ ಒತ್ತಾಯ ಮಾಡುತ್ತಿದ್ದೇವೆಂದರೆ ತಮ್ಮ ಚುನಾವಣೆ ಸಂದರ್ಭದಲ್ಲಿ ತಾವೇನು ಸಂಕಲ್ಪ ಬಿಡುಗಡೆ ಮಾಡಿದ್ದೀರಿ, ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರವನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಜನರಿಗೆ ವಚನವನ್ನು ಕೊಟ್ಟು ಈ ಅಧಿಕಾರವನ್ನು ತಾವು ಸ್ವೀಕಾರ ಮಾಡಿದ್ದೀರಿ. ಜನರಿಗೆ ವಚನವನ್ನು ಕೊಟ್ಟ ಮೇಲೆ ಆ ವಚನವನ್ನು ಪಾಲಿಸಲಿಲ್ಲ, ತಾವೂ ಕೂಡ ವಚನಭ್ರಷ್ಟರಾಗಿದ್ದೀರಿ. ತಾವು ಅಧಿಕಾರಕ್ಕೆ ಬಂದು ಎರಡು ವರ್ಷಗಳಾದರೂ ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರವನ್ನು

ಕೊಡಲಿಲ್ಲವಲ್ಲ ಎಂದು ತಮ್ಮ ಮೇಲೆ ನಾವು ಆಪಾದನೆ ಮಾಡುತ್ತಿದ್ದೇವೆ. ಎರಡು ವರ್ಷಗಳಿಂದ ಕೊಡಬಹುದಾಗಿತ್ತಲ್ಲವೇ? ಏಕೆ ನಿಲ್ಲಿಸಿದಿರಿ? ಅದನ್ನೇ ಲೋಕಾಯುಕ್ತರು ಸಹ ಎರಡೂ ವರ್ಷಗಳಿಂದ ಕೇಳಿದರೂ ನಮಗೆ ಏನೂ ಅಧಿಕಾರವನ್ನು ಕೊಡಲಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ನಾನು ಈ ಮನೆಯಲ್ಲಿ ಒಂದು ಮಾತನ್ನು ಹೇಳಿದ್ದೆ. ಯಾರ್‍ಯಾರ ಕಾಲದಲ್ಲಿ ಏನೇನು ಮಾಡಲಿಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ ಅದರಲ್ಲಿ ಕೆಲವಾದರೂ ನಾನು ನನ್ನ ಕಾಲದಲ್ಲಿ ಯಾವುದೇ ಮುಲಾಜಿಲ್ಲದೆ ಮಾಡುತ್ತೇನೆಂದು ಹೇಳಿದ್ದೆ. ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರವನ್ನು ಕೊಡುತ್ತೇವೆಂದು ಹೇಳಿದ್ದೆವು ಪರಮಾಧಿಕಾರ ಅಲ್ಲ, suo moto ಅಧಿಕಾರ ಅಲ್ಲ. ಆ ಹಿನ್ನೆಲೆಯಲ್ಲಿ ನಾವೇನು ಅಧಿಕಾರ ಕೊಡುತ್ತಿದ್ದೇವೆ ಎಂಬುದನ್ನು ಉತ್ತರ ಕೊಡಬೇಕಾದರೆ ನಾನು ಇಲ್ಲೇ ಕೊಡುತ್ತೇನೆ. ಅದಕ್ಕೇನೋ ಹಿಂದೆ ಮುಂದೆ ನೋಡುವಂಥ, ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರ ಕೊಡುವುದರ ಬಗ್ಗೆ ಮೀನ–ಮೇಷ ಎಣಿಸುವಂಥ ಯಡಿಯೂರಪ್ಪ ನಾನಲ್ಲ. ನಮ್ಮದು ಪಾರದರ್ಶಕ ಸರ್ಕಾರ, ನಿಮ್ಮೆಲ್ಲರ ಜೊತೆ ಸಮಾಲೋಚನೆ ಮಾಡಿದ್ದೇನೆ, ಆ ಹಿನ್ನೆಲೆಯಲ್ಲಿ ಮುಂದಿನ ಪೀಳಿಗೆಯವರು ನಮ್ಮನ್ನು ಶಪಿಸದ ರೀತಿಯಲ್ಲಿ ಈ ಅಕ್ರಮ ಗಣಿಗಾರಿಕೆ ದಂಧೆಯನ್ನು ನಿಲ್ಲಿಸುವುದಕ್ಕೆ ಏನೇನು ಮಾಡಲಿಕ್ಕೆ ಸಾದ್ಯವಿದೆಯೋ ಆ ಬಗ್ಗೆ ಮಾಹಿತಿಯನ್ನು ನಾನು ಈಗ ನಿಮಗೆ ಕೊಡುತ್ತೇನೆ. ನಾನು Suo motoಅಧಿಕಾರ ಏಕೆ ಕೊಟ್ಟರು? ಏಕೆ ಕೊಡಲಿಲ್ಲ? ಏನೇನು ಕಥೆಗಳು ನಡೆಯಿತು? ಈ ಬಗ್ಗೆ ಸಾಕಷ್ಟು ಚರ್ಚೆಗಳು ಇಲ್ಲಿ ಆಗಿವೆ, ಅದರ ವಿವರಕ್ಕೆ ನಾನು ಹೋಗಿಲ್ಲ. ಒಂದೇ ಮಾತು ಹೇಳಬೇಕೆಂದರೆ ಸಿದ್ಧರಾಮಯ್ಯನವರೇ ನಿಮಗೆ ಸ್ವಲ್ಪ ಬೇಸರವಾಗಿದೆ, ಕ್ಷಮಿಸಿ. ಈ ಮೇಲಿನ ವಿದ್ಯಮಾನಗಳನ್ನು ಗಮನಿಸಿದಾಗ ಲೋಕಾಯುಕ್ತರಿಗೆ ಸ್ವಪ್ರೇರಣೆಯಿಂದ

ತನಿಖೆ ನಡೆಸುವ ಅಧಿಕಾರವನ್ನು ಕಳೆದ 24 ವರ್ಷಗಳಿಂದ ಯಾವುದೇ ಸರ್ಕಾರ ನೀಡಿಲ್ಲ. ಒಂದು ಇಲ್ಲಿ ಚರ್ಚೆ ಆಗಬೇಕಾದುದು ಇಡೀ ದೇಶದ ಚುನಾಯಿತ ಪ್ರತಿನಿಧಿಗಳ ಬಗ್ಗೆ ದೇಶದ ಜನ ಗೌರವದಿಂದ ನೋಡಬೇಕೆಂದು ಇದ್ದರೆ ಕೇಂದ್ರ ಸರ್ಕಾರವೇ ಕೆಲವು ಬಿಗಿ ಕಾನೂನುಗಳನ್ನು ಮಾಡಬೇಕಾಗುತ್ತದೆ. ಆ ಚೌಕಟ್ಟಿನಲ್ಲಿ ಮುಖ್ಯಮಂತ್ರಿ, ಪ್ರಧಾನಮಂತ್ರಿ ಚುನಾಯಿತ ಎಲ್ಲಾ ಪ್ರತಿನಿಧಿಗಳು ಬರುವಂತೆ ಮಾಡಬೇಕಾಗುತ್ತದೆ. ಈಗಾಗಲೇ ನಿಮಗೆ ಗೊತ್ತಿರುವ ಹಾಗೆ ಕೇಂದ್ರ ಸರ್ಕಾರದಲ್ಲಿ ರಾಜ್ಯಸರ್ಕಾರದ ಮಾದರಿಯಲ್ಲಿ ಲೋಕಪಾಲ್ ಮಸೂದೆಯನ್ನು ತರುವ ಉದ್ದೇಶವಿದ್ದರೂ ಇದುವರೆಗೆ ಆ ಬಗ್ಗೆ ಕಾನೂನು ಮಾಡಲಿಕ್ಕೆ ಆಗಿಲ್ಲ. ತಮಗೆ ಗೊತ್ತಿದೆ. ಇದನ್ನು ಯಾರೂ ಅಲ್ಲಗಳೆಯುತ್ತೀರಿ ಎಂದು ನಾನು ಅಂದುಕೊಂಡಿಲ್ಲ. ಆದ್ದರಿಂದ ನಾನು ಪ್ರಧಾನಿಯವರಿಗೆ ವಿನಂತಿ ಮಾಡುವುದು ಇಷ್ಟೆ. ಪ್ರಜಾತಂತ್ರ ವ್ಯವಸ್ಥೆ ಬಗ್ಗೆ ಚುನಾಯಿತ ಪ್ರತಿನಿಧಿಗಳ ಬಗ್ಗೆ ಒಂದು ರೀತಿ ನಾಡಿನ ಜನ, ದೇಶದ ಜನ ವಿಶ್ವಾಸವನ್ನು ಕಳೆದುಕೊಳ್ಳುತ್ತಿರುವ ಕಾಲದಲ್ಲಿ ಒಂದು ಬಿಗಿಯಾದ ಕಾನೂನು ತಂದು ಈ ಶಾಸಕರು, ಸಂಸತ್ ಸದಸ್ಯರು, ಈ ಸಚಿವರು, ಕೇಂದ್ರ, ರಾಜ್ಯದವರು ಯಾರೂ ಇದಕ್ಕೆ ಹೊರತಲ್ಲ. ಕೇವಲ ಅಧಿಕಾರಿಗಳು ಮಾತ್ರವಲ್ಲ, ಇದನ್ನು ಬಿಗಿಗೊಳಿಸುವಂಥ ಒಂದು ದೃಢ ನಿರ್ಧಾರವನ್ನು ಇವತ್ತು ಪ್ರಧಾನಿಯವರು ಮಾಡಬೇಕಾಗುತ್ತದೆ. ಆ ದಿಕ್ಕಿನಲ್ಲಿ ಪಾರ್ಲಿಮೆಂಟರಿಯಲ್ಲಿ ಚರ್ಚೆಯಾಗಿ, ಚಿಂತನೆಯಾಗಿ ಆ ಮಸೂದೆ ಜಾರಿಗೆ ಬಂದರೆ ಬಹುಶಃ ಇಡೀ ದೇಶದ ಎಲ್ಲಾ ರಾಜ್ಯಗಳೂ ಅನುಸರಿಸಬೇಕಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಉಪ ಲೋಕಾಯುಕ್ತರ ಹುದ್ದೆ ಸುಮಾರು ಆರು ತಿಂಗಳುಗಳಿಂದ ಖಾಲಿಯಿರುವ ಬಗ್ಗೆ ಲೋಕಾಯುಕ್ತರು ಅಸಮಾಧಾನ ವ್ಯಕ್ತಪಡಿಸಿರುವುದು ನಿಜ. ಈ ಸಂದರ್ಭದಲ್ಲಿ ಅನೇಕ ಚುನಾವಣೆಗಳು, ನೀತಿ ಸಂಹಿತೆಗಳು ಜಾರಿಗೆ ಬಂದವು. ಹೀಗಾಗಿ ನಾನು

ಮಾಡಲಿಕ್ಕಾಗಲಿಲ್ಲ. ಇನ್ನು ನಾಲ್ಕೈದು ದಿವಸಗಳಲ್ಲಿ, ಈ ವಾರದಲ್ಲಿ ಉಪ ಲೋಕಾಯುಕ್ತರನ್ನು ನೇಮಕ ಮಾಡುತ್ತಿದ್ದೇನೆ. ಅದರಿಂದ ಅದರ ಬಗ್ಗೆ ಏನೂ ಪ್ರಶ್ನೆಯಿಲ್ಲ. ಅದರ ಬಗ್ಗೆ ಅಭಿಪ್ರಾಯವನ್ನು ತಿಳಿಸುವುದಕ್ಕೋಸ್ಕರ ಈಗಾಗಲೇ ಎಲ್ಲರಿಗೂ ಪತ್ರ ಬರೆದಿದ್ದೇನೆ. ಈ ಹಿಂದೆ 22.01.1991 ರಿಂದ 12.2.1992 ರವರೆಗೆ ಸುಮಾರು ಒಂದು ವರ್ಷಕ್ಕೂ ಹೆಚ್ಚು ಅವಧಿ ಉಪ ಲೋಕಾಯುಕ್ತರ ಹುದ್ದೆ ಖಾಲಿ ಇತ್ತು. ಆಗ ಯಾರೂ ಬೊಬ್ಬೆ ಹೊಡೆಯಲಿಲ್ಲ, ಯಾರೂ ಮಾತನಾಡಲಿಲ್ಲ, ಇದಲ್ಲದೆ ದಿನಾಂಕ 1.4.2002 ರಿಂದ 29.12.2004 ರವರೆಗೆ ಸುಮಾರು ಎರಡು ವರ್ಷ ಎಂಟು ತಿಂಗಳುಗಳ ಕಾಲ ಉಪ ಲೋಕಾಯುಕ್ತರ ಹುದ್ದೆ ಖಾಲಿ ಇತ್ತು. ಇತ್ತೀಚೆಗೆ ಸರ್ಕಾರ ಉಪ ಲೋಕಾಯುಕ್ತರ ಹುದ್ದೆಯನ್ನು ಭರ್ತಿ ಮಾಡುವ ಬಗ್ಗೆ ಕ್ರಮ ಕೈಗೊಳ್ಳುತ್ತಿದೆಯೆಂದು ನಾನು ಹೇಳಿದ್ದೇನೆ. ಒಂದು ಪ್ರಮುಖವಾದ ವಿಷಯವನ್ನು ಈ ಮನೆಯಲ್ಲಿ ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಎರಡು ತಿಂಗಳ ಹಿಂದೆ ನನ್ನನ್ನು "ಕೃಷ್ಣಾ"ದಲ್ಲಿ ಮಾನ್ಯ ಲೋಕಾಯುಕ್ತರು ಭೇಟಿ ಮಾಡಿದ್ದರು. ಆಗ Chief Secretary ಇದ್ದರು. ಆ ಸಮಯದಲ್ಲಿ ಲೋಕಾಯುಕ್ತರು ಅವರಿಗೆ ಕೆಲಸ ಮಾಡಲಿಕ್ಕೆ ಅನುಕೂಲವಾಗುವ ರೀತಿಯಲ್ಲಿ ಬಲಪಡಿಸುವ ರೀತಿಯಲ್ಲಿ ಕೆಲವು ಸಲಹೆಗಳನ್ನು ಕೊಟ್ಟರು. ರಾಜ್ಯದಲ್ಲಿ ಆರ್ಥಿಕ ಮಿತವ್ಯಯ ಜಾರಿಯಲ್ಲಿದ್ದರೂ ಕೂಡ ಅವರು ಕೋರಿದ್ದ ಬಹಳಷ್ಟು ಸೌಲಭ್ಯಗಳನ್ನು ನಾವು ಮಂಜೂರು ಮಾಡಿದ್ದೇವೆ. ದಿನಾಂಕ 19-05-2010 ರಂದು 15 ಹುದ್ದೆಗಳನ್ನು ಶಿವಕುಮಾರ್‌ರವರೇ ಕೇಳಿ, ಸಿದ್ಧರಾಮಯ್ಯನವರು ಇರುತ್ತಾರೆ ಆಮೇಲೆ ಅವರೊಂದಿಗೆ ಮಾತನಾಡಿ. ಈಗ ನಾವು ಏನೇನು ಮಾಡಿದ್ದೇವೆಂದು ಕೇಳಿ, ಆಮೇಲೆ walk out ಕೊನೆಗೆ ಅಲ್ಲವೇ ಸಿದ್ಧರಾಮಯ್ಯನವರೇ. ಈಗಲೇ ಏಕೆ ಶಿವಕುಮಾರ್‌ರವರು ಚಿಂತೆ ಮಾಡುತ್ತಿದ್ದಾರೆ. ?

ಶ್ರೀ ಡಿ.ಕೆ. ಶಿವಕುಮಾರ್ : ನಾವು ಏಕೆ walk out ಮಾಡಬೇಕು? ನಮಗೇನು ಸಾಧನೆ ಆಗಬೇಕು, ಅಲ್ಲಿಯವರೆಗೂ ನಾವು ಇಲ್ಲಿ ಕುಳಿತುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತು, ನಾನು ಸಹ ನಿಮ್ಮ ಜೊತೆ ಕುಳಿತುಕೊಳ್ಳುತ್ತೇನೆ. ಇಲ್ಲಿಂದ ನೇರವಾಗಿ ಒಂದು Special Flight ತೆಗೆದುಕೊಂಡು Prime Minister ಅನ್ನು ಭೇಟಿ ಮಾಡಲಿಕ್ಕೆ ಹೋಗೋಣ.

ಶ್ರೀ ಸಿದ್ದರಾಮಯ್ಯ : ನೀವು ಸಿ.ಬಿ.ಐ. ತನಿಖೆಗೆ ನೀವು ಒಪ್ಪುವವರೆಗೆ ನಾವು ಇಲ್ಲಿಂದ ಅಲುಗಾಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆಯಿತು, ಅಷ್ಟು ಗಟ್ಟಿ ಮನಸ್ಸು ನಿಮಗೆ ಬರಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ನೀವು ಆಯಿತು, ಮುಗಿಯಿತು ಎಂದು ತಿಳಿದುಕೊಂಡುಬಿಡುತ್ತೀರಿ, ನಾವು ಇಲ್ಲಿಂದ ಅಷ್ಟು ಸಲೀಸಾಗಿ ಬಿಡುತ್ತೇವೆಂದು ತಿಳಿದುಕೊಂಡಿರುವಿರಾ?

ಶ್ರೀ ಬಿ.ಎಸ್. ಯಡಿಯೂರಪ್ಪ : ನನಗೆ ಗೊತ್ತಿದೆ, ಈ ಸದನ ನಡೆಯದ ಹಾಗೆ ನೋಡಿಕೊಳ್ಳಬೇಕೆಂದು ನೀವು ತೀರ್ಮಾನಿಸಿರುವುದು ನನಗೆ ಗೊತ್ತಿದೆ. ಇಲ್ಲಿ ರಾಜ್ಯದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚೆ ಆಗಬಾರದು, ನಮ್ಮ ಸರ್ಕಾರದಿಂದ ಎರಡು ವರ್ಷಗಳಲ್ಲಿ ಆಗಿರುವ ಸಾಧನೆ ರಾಜ್ಯದ ಜನತೆಗೆ ಗೊತ್ತಾಗಬಾರದು ಎನ್ನುವಂಥ ವ್ಯವಸ್ಥಿತವಾದ ಚಿಂತನೆ ನಿಮ್ಮಲ್ಲಿದೆ ಎಂದು ನನಗೆ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ : ನಿಯಮ 60ರ ಕೆಳಗಡೆ ಚರ್ಚೆ ಮಾಡುವುದಕ್ಕೆ ಬಿಡಲಿಲ್ಲ, Objection ಮಾಡುತ್ತಾ ಕುಳಿತುಕೊಂಡರು. ಈ 6 ದಿನಗಳಲ್ಲಿ ನಡೆದಿರತಕ್ಕಂತಹ ಚರ್ಚೆಯ ವಿಚಾರವನ್ನು ರೂಲ್ 60ರಲ್ಲಿ

ಬೇಡ, Adjournment Motion ಕೆಳಗಡೆ ಚರ್ಚೆ ಮಾಡುವುದು ಬೇಡವೆಂದು Object ಮಾಡಿದವರು, ಈಗ ಅಭಿವೃದ್ಧಿ ಬಗ್ಗೆ, ಅದರ ಬಗ್ಗೆ ಇದರ ಬಗ್ಗೆ, ನಿಲ್ಲಿಸುವುದರ ಬಗ್ಗೆ ಬಹಳ ಹೇಳುವುದು ಇದನ್ನು ಜನ ನಂಬುತ್ತಾರಾ ? ಮಾನ್ಯ ಯಡಿಯೂರಪ್ಪನವರೇ, ರಾಜ್ಯದ ಜನರಿಗೆ ಅರ್ಥ ಮಾಡಿಕೊಳ್ಳುವ ಶಕ್ತಿಯಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇನ್ನು ಮೂರು ವರ್ಷಗಳು ಆದ ಮೇಲೆ ಜನರ ಮುಂದೆ ಹೋಗುತ್ತೀವಲ್ಲಾ ಆಗ ಗೊತ್ತಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಈಗಲೇ ಹೋಗೋಣ ಎಂದು decide ಮಾಡಿರುವವರ ಹಾಗೆ ಇದ್ದೀರಾ?

(ಗೊಂದಲ)

ಶ್ರೀ ಆರ್. ಅಶೋಕ : ಈಗಲೇ ಏಕೆ ಹೋಗಬೇಕು? ನಮ್ಮ ಸರ್ಕಾರ ನಾವು ಹೋಗುವುದಕ್ಕೆ ready ಇದ್ದೇವೆ. ಕೇಂದ್ರ ಸರ್ಕಾರ ನಮ್ಮ ಜೊತೆಯಲ್ಲಿಯೇ ಬಂದುಬಿಟ್ಟರೆ election ಗೆ ಹೋಗುವುದಕ್ಕೆ ನಾವೂ ready ಇದ್ದೇವೆ.

ಶ್ರೀ ಸಿದ್ದರಾಮಯ್ಯ : ಅವರಿಗೆ ವಿರೋಧ ಪಕ್ಷದವರಿಗೆ ಹೇಳುವುದಕ್ಕೆ ಹೇಳಿ, ವಿರೋಧ ಪಕ್ಷದವರನ್ನು ಕೇಳುವುದಕ್ಕೆ ಹೇಳಿ. ನಾವು ಇಲ್ಲಿ ಕೇಳುತ್ತಿರುವುದು. ನೀವು ಅಲ್ಲಿ ಹೋಗಿ ಕೇಳಿ.

ಶ್ರೀ ಆರ್. ಅಶೋಕ : ಪಾಲಿಸಿ ತರುವುದಕ್ಕೆ ಕೇಂದ್ರ ಸರ್ಕಾರದಲ್ಲಿ ಇವರೂ ಹೇಳಿದರೆ ಸಮಸ್ಯೆಯೇ ಬಗೆಹರಿದುಹೋಗುತ್ತದೆ.

ಶ್ರೀ ಸಿದ್ದರಾಮಯ್ಯ : ನಿಮಗೆ ಅಧಿಕಾರವಿಲ್ಲವೇ ?

ಶ್ರೀ ಆರ್. ಅಶೋಕ : ನಮಗೆ ಅಧಿಕಾರವಿರುವುದನ್ನು ಈಗ ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ.

SRI SIDDARAMAIAH : It is very very clear under Mines and Minerals Act, 1957 ರಲ್ಲಿ ನಿಮಗೆ ಬಹಳ ಅಧಿಕಾರವಿದೆ. ನೀವು ಮಾಡದೇ ಕೇಂದ್ರ ಸರ್ಕಾರಕ್ಕೆ ಏಕೆ ತೋರಿಸಿದಿರಿ? ಮೊದಲು ನಿಮ್ಮ ಮನೆಯಲ್ಲಿ ಬಿದ್ದಿರುವ ಹೆಗ್ಗಣವನ್ನು ಎತ್ತು ಹಾಕಿ. ಆಮೇಲೆ ಮುಂದಿನದನ್ನು ನೋಡೋಣ.

(ಗೊಂದಲ)

ಶ್ರೀ ಬಂಡೆಪ್ಪ **ಕಾಶೆಂಪೂರ್** : ಚೆಕ್ ಪೋಸ್ಟ್‌ನಲ್ಲಿ ಚೆಕ್ ಮಾಡುವುದಕ್ಕೆ Central Government ಬೇಕೆ? State Government ನಲ್ಲಿ ಇಲ್ಲವೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಪೊಲೀಸ್ ಇಲಾಖೆ, law and order ನೇರವಾಗಿ ಕೇಂದ್ರ ಸರ್ಕಾರದ್ದು, ಅದು Concurrent list ನಲ್ಲಿ ಇರುವುದು ಅಲ್ಲ. It is under the State list.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತರು ಬಂದು ನನ್ನನ್ನು ಭೇಟಿ ಮಾಡಿದಂತಹ ಕಾಲದಲ್ಲಿ ಅವರು ಕೆಲವು ಪ್ರಮುಖ ವಿಷಯಗಳನ್ನು ಪ್ರಸ್ತಾಪ ಮಾಡಿದ್ದರು. ಏನೇನು ಮಾಡಿದ್ದೇವೆ ಎನ್ನುವ ಮಾಹಿತಿಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ದಿನಾಂಕ 19.05.2010 ರಂದು ಸುಮಾರು 15 ಹುದ್ದೆಗಳನ್ನು ಲೋಕಾಯುಕ್ತರ ಪೊಲೀಸ್ ವಿಭಾಗಕ್ಕೆ ಮಂಜೂರು ಮಾಡಲಾಗಿದೆ. ಹಾಗೆಯೇ ದಿನಾಂಕ 18.06.2010ರಂದು 12 ತಾಂತ್ರಿಕ ಹುದ್ದೆಗಳನ್ನು ಮಂಜೂರು ಮಾಡಿದ್ದಾರೆ. ಇದೂ ಅಲ್ಲದೇ ಹೊಸದಾಗಿ 292 ಹುದ್ದೆಗಳನ್ನು ರಚಿಸುವುದಕ್ಕೆ ಕೋರಿದ್ದರು ಹಾಗು ಲೋಕಾಯುಕ್ತರು ಕೋರಿದ್ದ ಎಲ್ಲಾ ಹುದ್ದೆಗಳನ್ನು ಮಂಜೂರು ಮಾಡಿದ್ದೇನೆ. ದಿನಾಂಕ 14.05.2010ರಂದು ಸರ್ಕಾರಿ

ಆದೇಶವನ್ನು ಹೊರಡಿಸಲಾಗಿದೆ. ಲೋಕಾಯುಕ್ತರು ದಿನಾಂಕ 10.02.2009ರ ತಮ್ಮ ಪತ್ರದಲ್ಲಿ COD ಮತ್ತು ಗುಪ್ತದಳ ವಿಭಾಗಗಳಿಗೆ ನೀಡುವಂತಹ ವಿಶೇಷ ಭತ್ಯೆಯನ್ನು ನೀಡುವಂತೆ ಕೋರಿದ್ದಾರೆ. ಈ ಕೋರಿಕೆಯಂತೆ COD ಇಲಾಖೆಯ ಪೊಲೀಸ್ ಸಿಬ್ಬಂದಿಗೆ ನೀಡುವಂತಹ ಶೇಕಡ 15 ರಷ್ಟು ವಿಶೇಷ ಭತ್ಯೆಯನ್ನು ಲೋಕಾಯುಕ್ತರ ಪೊಲೀಸ್ ಸಿಬ್ಬಂದಿಗೆ ಮಂಜೂರು ಮಾಡಲಾಗಿದೆ. 24.03.2010 ರ ಪತ್ರದಲ್ಲಿ ಲೋಕಾಯುಕ್ತರು ತಮ್ಮ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವಂತಹ ಪೊಲೀಸ್ ಸಿಬ್ಬಂದಿಗೆ ಶೇಕಡ 30ರಷ್ಟು ವಿಶೇಷ ಭತ್ಯೆಯನ್ನು ನೀಡಬೇಕೆಂದು ಸರ್ಕಾರಕ್ಕೆ ಪ್ರಸ್ತಾವನೆಯನ್ನು ನೀಡಿದ್ದರು. 17.05.2010ರಂದು ಲೋಕಾಯುಕ್ತರು ಸರ್ಕಾರಕ್ಕೆ ಇನ್ನೊಂದು ಪತ್ರ ಬರೆದು ವಿಶೇಷ ಭತ್ಯೆಯನ್ನು ಶೇಕಡ 25ರಷ್ಟು ನೀಡಬೇಕೆಂದು ಕೋರಿರುತ್ತಾರೆ. ಈ ಕೋರಿಕೆಯನ್ನು ನಾವು ಪರಿಶೀಲನೆ ಮಾಡಿ ಮಾಡುತ್ತಿದ್ದೇವೆ. ರಾಜ್ಯ ಉಚ್ಚ ನ್ಯಾಯಾಲಯಕ್ಕೆ ನೀಡುವಂತೆ ಲೋಕಾಯುಕ್ತ ಸಂಸ್ಥೆಗೂ ಅತಿಥಿ ಸತ್ಕಾರಕ್ಕೆ ಹಣ ಬೇಕೆಂದು ಕೇಳಿದ್ದರು, ಕೊಟ್ಟಿದ್ದೇವೆ. ಹೊಸದಾಗಿ ರಚನೆಯಾದ ಯಾದಗಿರಿ ಜಿಲ್ಲೆಗೆ ಲೋಕಾಯುಕ್ತ ಕಛೇರಿಯನ್ನು ಸ್ಥಾಪಿಸುವುದಕ್ಕೆ ಅನುಮತಿಯನ್ನೂ ಕೊಟ್ಟಿದ್ದೇವೆ. ಲೋಕಾಯುಕ್ತ ಸಂಸ್ಥೆಯ ಪೊಲೀಸ್ ಸಿಬ್ಬಂದಿಗೆ ಹೆಚ್ಚುವರಿ ಉಚಿತ ಬಸ್ ಪಾಸ್‌ಗಳನ್ನು ನೀಡುವ ಬಗ್ಗೆ ದಿನಾಂಕ 05.04.2010 ರಂದು ಆದೇಶ ಹೊರಡಿಸಲಾಗಿದೆ. ಲೋಕಾಯುಕ್ತರು ದಾಳಿ ನಡೆಸಿದ ಪ್ರಕರಣಗಳಲ್ಲಿ ಘೋಷಿಸಿದ ಆದಾಯಕ್ಕಿಂತ ಹೆಚ್ಚು ಕಂಡುಬಂದಲ್ಲಿ ಅಂತಹ ನೌಕರರನ್ನು ಅಮಾನತ್ತಿನಲ್ಲಿ ಇಡುವುದಕ್ಕೆ ಅವಕಾಶ ಇರಲಿಲ್ಲ. ಈ ಬಗ್ಗೆ ದಿನಾಂಕ 26.08.2008ರಂದು ನಿಯಮಗಳಿಗೆ ತಿದ್ದುಪಡಿ ಮಾಡಿ ದಾಳಿಗೊಳಗಾದ ನೌಕರರನ್ನು ಅಮಾನತ್ತಿನಲ್ಲಿರಿಸಿ ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಲೋಕಾಯುಕ್ತರು ಶಿಫಾರಸ್ಸು ಮಾಡಿದಂತೆ ಸಚಿವರು ಮತ್ತು ಶಾಸಕರು ಸಲ್ಲಿಸಬೇಕಾದ ಆಸ್ತಿ ಮತ್ತು ವಿವರಣಾ ಪಟ್ಟಿಯ

ನಮೂನೆಯನ್ನು ಮಾರ್ಪಡಿಸಿ ದಿನಾಂಕ 25.01.2010ರಲ್ಲಿ ಆದೇಶವನ್ನು ಹೊರಡಿಸಿದ್ದಾರೆ. ಲೋಕಾಯುಕ್ತರನ್ನು ನಾನು ಭೇಟಿ ಮಾಡಿದಾಗ ಪ್ರಸ್ತಾಪಿಸಿದಂತೆ ಇನ್ನು ಮುಂದೆ ಯಾವುದೇ ಅಮಾನತ್ತುಗೊಂಡ ಅಧಿಕಾರಿಯನ್ನು ಪುನಃ ನೇಮಕ ಮಾಡುವಾಗ ಅದೇ ಹುದ್ದೆಗೆ ನೇಮಕ ಮಾಡದಂತೆ ಸುತ್ತೋಲೆಯನ್ನು ಮುಖ್ಯ ಕಾರ್ಯದರ್ಶಿಯವರು ದಿನಾಂಕ 27.04.2010ರಂದು ಹೊರಡಿಸಿದ್ದಾರೆ. 2006–07ರಲ್ಲಿ ನಡೆದ ಲೋಕಾಯುಕ್ತ ದಾಳಿ ಮತ್ತು ಟ್ರ್ಯಾಪ್ ಪ್ರಕರಣಗಳಲ್ಲಿ ಸರ್ಕಾರ ಕ್ರಮ ಕೈಗೊಂಡಿರುವುದು ಈ ಕೆಳಕಂಡಂತಿದೆ. 2006–07ನೇ ಸಾಲಿನಲ್ಲಿ 22 ದಾಳಿ ಪ್ರಕರಣಗಳಲ್ಲಿ, 18 ಪ್ರಕರಣಗಳಲ್ಲಿ ಅಭಿಯಾಚನೆಗೆ ಮಂಜೂರಾತಿ ನೀಡಿದ್ದು, ಎರಡು ಪ್ರಕರಣಗಳನ್ನು ತಿರಸ್ಕರಿಸಿದ್ದೇವೆ. 2 ಪ್ರಕರಣಗಳಲ್ಲಿ ನಿರ್ಣಯ ಆಗಿರುವುದಿಲ್ಲ, ಅಂದರೆ ಶೇಕಡ 80ರಷ್ಟು ಪ್ರಕರಣಗಳಿಗೆ ಅನುಮತಿಯನ್ನು ನಾವು ನೀಡಿದ್ದೇವೆ. ಅದೇ ರೀತಿ 2006–07ನೇ ಸಾಲಿನಲ್ಲಿ ಒಟ್ಟು 278 ಪ್ರಕರಣಗಳಲ್ಲಿ ಅನುಮತಿ ಕೋರಿದ್ದು, 7 ಪ್ರಕರಣಗಳಲ್ಲಿ ಅನುಮತಿ ನೀಡಿರುವುದಿಲ್ಲ. ಅಂದರೆ ಶೇಕಡ 97ರಷ್ಟು ಪ್ರಕರಣಗಳಲ್ಲಿ ಅನುಮತಿಯನ್ನು ನಾವು ನೀಡಿದ್ದೇವೆ. ಯಾವುದೇ ಸರ್ಕಾರ ಲೋಕಾಯುಕ್ತರು ಕೋರಿದ ದಾಳಿ ಮತ್ತು ಟ್ರ್ಯಾಪ್ ಪ್ರಕರಣಗಳಲ್ಲಿ prosecution ಮಾಡುವುದಕ್ಕೆ ಶೇಕಡ 100ರಷ್ಟು ಅನುಮತಿ ನೀಡಿರುವುದಿಲ್ಲ. ನಮ್ಮಲ್ಲಿ 2006ರಲ್ಲಿ prosecutionಗೆ ಮಂಜೂರಾತಿ ಆದೇಶ ಕೊಟ್ಟಿರುವುದು 11, prosecutionಗೆ ಮಂಜೂರಾತಿ ನೀಡಿರುವುದು 9, prosecution ಮಂಜೂರಾತಿಗೆ ಕಾಯ್ದಿರಿಸುವಂತಹದ್ದು ಒಂದು ಹಾಗೂ prosecution ಮಂಜೂರಾತಿ ತಿರಸ್ಕರಿಸುವಂತಹದ್ದು ಒಂದು. 2007ರಲ್ಲಿ prosecutionಗೆ ಮಂಜೂರಾತಿ ಆದೇಶ ಕೇಳಿರುವುದು 11, prosecutionಗೆ ಮಂಜೂರಾತಿ ನೀಡಿರುವುದು ಒಂಭತ್ತು, prosecution ಮಂಜೂರಾತಿಗೆ ಕಾಯ್ದಿರಿಸುವಂತಹದ್ದು

ಒಂದು ಹಾಗೂ ಮಂಜೂರಾತಿ ತಿರಸ್ಕಾರ ಮಾಡಿರುವಂತಹದ್ದು ಕೇವಲ ಒಂದು, 2006ರಲ್ಲಿ 112 ಟ್ರ್ಯಾಪ್ ಪ್ರಕರಣಗಳು ಇತ್ತು. ಅದರಲ್ಲಿ prosecutionಗೆ ಮಂಜೂರಾತಿ ನೀಡಿರುವುದು 107, prosecution ಮಂಜೂರಾತಿಗೆ ಕಾಯ್ದಿರಿಸುವಂತಹದ್ದು ಯಾವುದೂ ಇಲ್ಲ ಹಾಗೂ prosecution ಮಂಜೂರಾತಿ ತಿರಸ್ಕಾರ ಮಾಡಿರುವಂತಹದ್ದು ಐದು. 2007ರಲ್ಲಿ 166 ಪ್ರಕರಣಗಳನ್ನು prosecution ಮಂಜೂರಾತಿಗೆ ಆದೇಶ ಕೋರಿದ್ದರು, 163 ಪ್ರಕರಣಗಳಲ್ಲಿ prosecutionಗೆ ನಾವು ಮಂಜೂರಾತಿಯನ್ನು ನೀಡಿದ್ದೇವೆ, prosecution ಮಂಜೂರಾತಿಗೆ ಕಾಯ್ದಿರಿಸಿರುವಂತಹದ್ದು ಕೇವಲ ಒಂದು ಹಾಗೂ prosecution ಮಂಜೂರಾತಿ ತಿರಸ್ಕಾರ ಮಾಡಿರುವಂತಹದ್ದು ಕೇವಲ ಎರಡು. ಅಂದರೆ ನೂತನ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಟ್ರ್ಯಾಪ್ ಮತ್ತು ದಾಳಿ ಪ್ರಕರಣಗಳಲ್ಲಿ ಲೋಕಾಯುಕ್ತರ ಶಿಫಾರಸ್ಸು ಪಾಲಿಸಿರುವ ಬಗ್ಗೆ ನಿಮಗೆ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ. ಲೋಕಾಯುಕ್ತರ 57 ದಾಳಿ ಪ್ರಕರಣಗಳಲ್ಲಿ prosecutionಗೆ ಮಂಜೂರಾತಿ ಕೋರಿದ್ದು, 51 ಪ್ರಕರಣಗಳಿಗೆ ನಾವು ಮಂಜೂರಾತಿ ನೀಡಿದ್ದೇವೆ. 57ರಲ್ಲಿ 51ಕ್ಕೆ ಮಂಜೂರಾತಿ ನೀಡಿದ್ದೇವೆ. ಇನ್ನು ಆರು ಪ್ರಕರಣಗಳು ಪರಿಶೀಲನೆಯಲ್ಲಿವೆ. ಅಲ್ಲಿಗೆ ಶೇಕಡ 90ರಷ್ಟು ಪ್ರಕರಣಗಳಲ್ಲಿ ಮಂಜೂರಾತಿ ನೀಡಿದ್ದೇವೆ. ಇದೇ ರೀತಿ ಈ ಅವಧಿಯಲ್ಲಿ ಲೋಕಾಯುಕ್ತರು ನಡೆಸಿದಂತಹ 525 ಟ್ರ್ಯಾಪ್ ಪ್ರಕರಣಗಳಲ್ಲಿ 471 ಪ್ರಕರಣಗಳಲ್ಲಿ ಈಗಾಗಲೇ ಅಭಿಯಾಚನೆಗೆ ಮಂಜೂರಾತಿ ನಾವು ನೀಡಿದ್ದೇವೆ. 525ಕ್ಕೆ 471. 49 ಪ್ರಕರಣಗಳು ಪರಿಶೀಲನೆಯಲ್ಲಿವೆ. ಐದು ಪ್ರಕರಣಗಳನ್ನು ಮಾತ್ರ ತಿರಸ್ಕಾರ ಮಾಡಿದ್ದೇವೆ. ಅಂದರೆ ಶೇಕಡ 90 ಪ್ರಕರಣಗಳಲ್ಲಿ ಈಗಾಗಲೇ ಮಂಜೂರಾತಿ ನೀಡಿದ್ದೇವೆ. 25.06.2008 ರಿಂದ 25.06.2010ರವರೆಗೆ ದಾಳಿ ಪ್ರಕರಣಗಳು; ಇದರಲ್ಲಿ prosecution

ಮಂಜೂರಾತಿಗೆ ಆದೇಶ ಕೋರಿರುವಂತಹದ್ದು 57, prosecution ಮಂಜೂರಾತಿ ನೀಡಿರುವಂತಹದ್ದು 51, prosecution ಮಂಜೂರಾತಿಗೆ ಕಾಯ್ದಿರಿಸಿರುವಂತಹದ್ದು ಆರು. ಒಂದನ್ನೂ ನಾವು ತಿರಸ್ಕಾರ ಮಾಡಿಲ್ಲ. 25.06.2008 ರಿಂದ 25.06.2010ರವರೆಗೆ ಟ್ರ್ಯಾಪ್ ಪ್ರಕರಣಗಳು; prosecution ಮಂಜೂರಾತಿ ಕೇಳಿರುವಂತಹದ್ದು 525, prosecutionಗೆ ಮಂಜೂರಾತಿ ನೀಡಿರುವಂತಹದ್ದು 471, prosecution ಮಂಜೂರಾತಿಗೆ ಕಾಯ್ದಿರಿಸಿರುವಂತಹದ್ದು 49, ಮಂಜೂರಾತಿಗೆ ತಿರಸ್ಕಾರ ಮಾಡಿರುವಂತಹದ್ದು ಐದು ಮಾತ್ರ, ಈಗ ಚರ್ಚೆಯಾಗುತ್ತಿರುವ ಬೇಲೇಕೇರಿ ಬಂದರಿನಲ್ಲಿ ವಶಪಡಿಸಿಕೊಂಡಿರುವ ಕಬ್ಬಿಣದ ಅದಿರಿನ ಬಗ್ಗೆ, ಅರಣ್ಯ ಇಲಾಖೆ 8 ಲಕ್ಷ ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಜಪ್ತಿ ಮಾಡಿ, ಬಂದರು ಸಂರಕ್ಷಣಾ ಅಧಿಕಾರಿಗೆ ದಿನಾಂಕ 20.03.2010ರಂದು ವಶಕ್ಕೆ ನೀಡಿದೆ. ಬೇಲೇಕೇರಿ ಬಂದರಿನಲ್ಲಿ ಕಾಣೆಯಾಗಿರುವ ಅದಿರಿನ ಬಗ್ಗೆ ಈಗಾಗಲೇ CID ವಿಭಾಗದವರು ತನಿಖೆ ಪ್ರಾರಂಭಿಸಿದ್ದು, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಾನೂನಿನ ರೀತಿಯ ಕ್ರಮವನ್ನು ಜರುಗಿಸಿದ್ದೇವೆ. ಬೇಲೇಕೇರಿ ಬಂದರು ಅಧಿಕಾರಿಯನ್ನು ಈಗಾಗಲೇ ಅಮಾನತ್ತಿನಲ್ಲಿಡಲಾಗಿದೆ. ಕಸ್ಟಮ್ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದಕ್ಕೆ ನಮಗೆ ಅಧಿಕಾರ ಇಲ್ಲದೇ ಇರುವುದರಿಂದ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದೇವೆ. ಶ್ರೀ ಎನ್.ಜಿ. ಹಿತ್ತಲಮಕ್ಕಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಅಂಕೋಲ ಉಪ ವಿಭಾಗ, ಇವರು ಗೊತ್ತಾದ ಮೂಲಕ್ಕಿಂತ ಹೆಚ್ಚಿನ ಆದಾಯ ಹೊಂದಿರುವುದಾಗಿ ಲೋಕಾಯುಕ್ತರು ಪ್ರಕರಣವನ್ನು ದಾಖಲಿಸಿಕೊಂಡು ಅವರನ್ನು ಸೇವೆಯಿಂದ ಅಮಾನತ್ತುಗೊಳಿಸುವುದಕ್ಕೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರು. ಶ್ರೀ ಎನ್.ಜಿ. ಹಿತ್ತಲಮಕ್ಕಿ, ಅಂಕೋಲ ಉಪ ವಿಭಾಗ, ಇವರನ್ನು ಬೇರೆ ಸ್ಥಳಕ್ಕೆ ವರ್ಗಾವಣೆ ಮಾಡುವುದಕ್ಕೆ 02.06.2010ರಂದು ನಡೆದ ವೃಂದ ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ತೀರ್ಮಾನಿಸಿದ್ದೇವೆ. ಅದರಂತೆ

ವೃಂದ ನಿರ್ವಹಣಾ ಪ್ರಾಧಿಕಾರದ ನಿರ್ಣಯದಂತೆ ಶ್ರೀ ಎನ್.ಜಿ. ಹಿತ್ತಲಮಕ್ಕಿಯವರನ್ನು ಬೀದರ್‌ಗೆ ವರ್ಗಾವಣೆ ಮಾಡಿದ್ದೇವೆ. ಇಲ್ಲಿ ಮಾತನಾಡಬೇಕಾದರೆ ಕೆಲವರು ಅವರ ಮೇಲೆ ನೀವು ಕ್ರಮ ತೆಗೆದುಕೊಂಡಿರಿ, ವರ್ಗಾವಣೆ ಮಾಡಿಬಿಟ್ಟಿರಿ, ಇಲ್ಲಿ ಕೆಲಸ ಮಾಡುವುದು ತಪ್ಪುತ್ತದೆ ಎಂದು ಹೇಳಿ, ಅವರು ಒಳ್ಳೆಯ ಅಧಿಕಾರಿ ಎಂದು ಕೆಲವರು ಪ್ರಸ್ತಾಪ ಮಾಡಿದ್ದೀರಿ, ಅದು ಅಲ್ಲ. ಸ್ವತಃ ಲೋಕಾಯುಕ್ತರು ಅವರನ್ನು suspension decision ನಲ್ಲಿ ಇಡಬೇಕೆಂದು ಇದ್ದರು. ಬೀದರ್‌ಗೆ ವರ್ಗಾವಣೆ ಮಾಡಿದ್ದೇವೆ. ಅಂಕೋಲ ನ್ಯಾಯಾಲಯ ತನ್ನ ಆದೇಶದಲ್ಲಿ ಈ ಪ್ರಕರಣದ ಬಗ್ಗೆ ತನಿಖೆ ನಡೆಸಿ ವಿವರ ನೀಡುವುದಕ್ಕೆ ಆದೇಶ ನೀಡಿದ್ದಾರೆ.

1.00 ಪಿ.ಎಂ.

ಈ ಪ್ರಕರಣವನ್ನು ಡಿಜಿಪಿಯವರು ತಮ್ಮ ಆದೇಶ 23.6.2010ರಂತೆ ಸಿಐಡಿಗೆ ಮುಂದಿನ ತನಿಖೆ ಮಾಡುವುದಕ್ಕೆ ಆದೇಶ ಮಾಡಿದ್ದಾರೆ. 8.6.2010ರಂದು ನಡೆದ ವಿಧಾನಪರಿಷತ್ತಿನ ಭರವಸೆ ಸಮಿತಿಯ ಸೂಚನೆಯಂತೆ ಉನ್ನತ ಮಟ್ಟದ ತನಿಖೆಯನ್ನು ನಡೆಸುವುದಕ್ಕೆ ಪ್ರಕರಣವನ್ನು ಸಿಐಡಿಗೆ ನಾವು ವಹಿಸಿದ್ದೇವೆ. ರಿಟ್ ಪಿಟಿಶನ್ ಸಂಖ್ಯೆ: 1455/2010ರಲ್ಲಿ ಉಚ್ಚ ನ್ಯಾಯಾಲಯದ ಮುಂದೆ ಅರಣ್ಯ ಇಲಾಖಾಧಿಕಾರಿಗಳು ಅಫಿಡವಿಟ್ ಸಲ್ಲಿಸಿ ಕಾನೂನು ಉಲ್ಲಂಘಿಸಿ ಅದಿರು ರಫ್ತು ಮಾಡಿರುವಂಥ ಹತ್ತು ಕಂಪನಿಗಳ ಮೇಲೆ ಇರುವ ಆಪಾದನೆಗಳು ಮುಕ್ತಾಯವಾಗುವವರೆಗೆ ಸದರಿ ಕಂಪನಿಗಳಿಗೆ ಸೇರಿದ ಅದಿರನ್ನು ವಿದೇಶಗಳಿಗೆ ರಫ್ತು ಮಾಡುವುದನ್ನು ನಿಷೇಧ ಮಾಡುವಂತೆ ಒತ್ತಾಯಿಸಿ ಉಚ್ಚ ನ್ಯಾಯಾಲಯದಲ್ಲಿ ಈಗಾಗಲೇ ಸರ್ಕಾರ ಮನವಿಯನ್ನು ಸಲ್ಲಿಸಿದೆ. ಈ ರೀತಿ ರಫ್ತು ವ್ಯವಹಾರದಲ್ಲಿ ಅವ್ಯವಹಾರ ನಡೆಯುತ್ತಿರುವುದನ್ನು ಮನಗಂಡ ಮೇಲೆ ಇದರ ಬಗ್ಗೆ ಸ್ಪಷ್ಟ ಮಾಹಿತಿಗಳು ಸಿಗುವವರೆಗೂ ಈ

ಹತ್ತು ಕಂಪನಿಗಳ ಮೇಲೆ ಇರುವಂಥ ಆಪಾದನೆಗಳು ಮುಕ್ತಯವಾಗುವವರೆಗೂ ಯಾವುದೇ ಕಾರಣಕ್ಕೂ ಅಲ್ಲಿರುವಂಥ ಅದಿರನ್ನು ರಫ್ತು ಮಾಡಬಾರದು, ನಿಷೇಧ ಮಾಡಬೇಕೆಂದು ಈಗಾಗಲೇ ಉಚ್ಚ ನ್ಯಾಯಾಲಯದಲ್ಲಿ ನಾವೇ, ಸರ್ಕಾರವೇ ಅಫಿಡವಿಟ್ ಹಾಕಿದ್ದೇವೆ. ಯಾರನ್ನೋ ರಕ್ಷಣೆ ಮಾಡಬೇಕೆಂದರೆ ಸರ್ಕಾರವೇ ಅಫಿಡವಿಟ್ ಹಾಕುವ ಪ್ರಶ್ನೆ ಬರುತ್ತಿರಲಿಲ್ಲ. 15.3.2010ರಂದು ಬೇಲೇಕೇರಿ ಬಂದರಿನಲ್ಲಿ ಅನಧಿಕೃತವಾಗಿ ಅದಿರು ಶೇಖರಣೆಯಾಗಿರುವ ವಿಷಯ ಅರಣ್ಯ ಇಲಾಖೆಯ ಗಮನಕ್ಕೆ ಬಂದು, 20.3.2010ರಂದು ಕೂಲಂಕಷವಾಗಿ ಪರಿಶೀಲಿಸಿ, 8 ಲಕ್ಷ ಟನ್ ಅದಿರು ಇರುವುದಾಗಿ ಪರಿಶೀಲಿಸಿ, ಅದನ್ನು ಬಂದರು ಅಧಿಕಾರಿಗಳ ವಶಕ್ಕೆ ನೀಡಲಾಗಿದೆ. 2.6.2010ರಂದು ಪರಿಶೀಲಿಸಲಾಗಿ ಅದಿರಿನ ದಾಸ್ತಾನು ಕಡಿಮೆ ಇರುವುದು ಕಂಡು ಬಂದಿತು. ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು 10.6.2010ರಂದು ಪತ್ರ ಬರೆದ, ವೃತ್ತ ಪತ್ರಿಕೆಗಳಲ್ಲಿ ಬಂದಿರುವಂಥ ಬೇಲೇಕೇರಿ ಬಂದರಿನಲ್ಲಿ ಅರಣ್ಯ ಇಲಾಖೆ ವಶಪಡಿಸಿಕೊಂಡಿರುವ ಕಬ್ಬಿಣದ ಅದಿರು ಕಳುವಾಗಿರುವ ಬಗ್ಗೆ ಮಾಹಿತಿ ಪಡೆಯುವುದಕ್ಕೆ ಉಪ ಅರಣ್ಯಸಂರಕ್ಷಣಾಧಿಕಾರಿ ಗೋಕುಲ್ ಅವರನ್ನು ಕರೆದಾಗ, ಸದರಿ ಅಧಿಕಾರಿ ಚರ್ಚೆಗೆ ಬಾರದೇ ಉದಾಸೀನ ವ್ಯಕ್ತಪಡಿಸಿ ಕರ್ತವ್ಯಚ್ಯುತಿ ಎಸಗಿರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಬರೆದಿದ್ದರು. ಆದರೆ ಸರ್ಕಾರ, ಏನೋ ಒಂದು ಸಭೆಗೆ ಬರಲಿಲ್ಲ ಎನ್ನುವ ಕಾರಣವನ್ನು ಇಟ್ಟುಕೊಂಡು ಯಾವುದೇ ಕಾರಣಕ್ಕೂ ಕೆಲಸ ಮಾಡುವಂಥ ಪ್ರಾಮಾಣಿಕ ಅಧಿಕಾರಿಯ ಮೇಲೆ ಆ ರೀತಿ ಯಾವುದೇ ಕ್ರಮ ತೆಗೆದುಕೊಳ್ಳುವ ಪ್ರಶ್ನೆಯೇ ಬರುವುದಿಲ್ಲವೆಂದು ನಾನು ಯಾವುದೇ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಅದರ ಬದಲಿಗೆ ಅವರೇ ಹೈಕೋರ್ಟಿನಲ್ಲಿ ಅಫಿಡವಿಟ್ ಹಾಕಿ ಈ ಹತ್ತೂ ಕಂಪನಿಗಳ ಮೇಲೆ ಕ್ರಮ ತೆಗೆದುಕೊಳ್ಳಲು ನಾವು ಅವಕಾಶ ಮಾಡಿಕೊಟ್ಟಿದ್ದೇವೆ. ಕಾನೂನು ಬಾಹಿರವಾಗಿ

ಸಾಗಾಣಿಕೆಯಾಗಿರುವ ಅದಿರಿನ ಬಗ್ಗೆ ಸರ್ಕಾರ ಸಮಗ್ರವಾಗಿ ತನಿಖೆ ನಡೆಸುತ್ತಿದ್ದು, ತಪ್ಪಿತಸ್ಥ ಅಧಿಕಾರಿಗಳು ಹಾಗೂ ಕಂಪನಿ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ಬದ್ಧರಿದ್ದೇವೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಪ್ರಕರಣದಲ್ಲಿ ಯಾರೇ ಭಾಗಿಯಾಗಿರಲಿ, ಅವರು ಎಷ್ಟೇ ದೊಡ್ಡವರಾಗಿರಲಿ, ಅವರು ಕಾನೂನಿನ ಹಿಡಿತದಿಂದ ತಪ್ಪಿಸಿಕೊಂಡು ಇರುವುದಕ್ಕೆ ನಾನು ಬಿಡುವುದಿಲ್ಲ. ಅವರ ಮೇಲೆ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಕೊಡಲು ಈ ಸಂದರ್ಭದಲ್ಲಿ ನಾನು ಇಚ್ಛೆಪಡುತ್ತೇನೆ. ಬಹಳ ಪ್ರಮುಖವಾದ ವಿಷಯಕ್ಕೆ ನಾನು ಬರುತ್ತಿದ್ದೇನೆ. ಕರ್ನಾಟಕ ಲೋಕಾಯುಕ್ತ ಅಧಿನಿಯಮಕ್ಕೆ ಒಂದು ಸೂಕ್ತ ತಿದ್ದುಪಡಿಯನ್ನು ತಂದು, ಯಾವ ಲೋಕಾಯುಕ್ತರು ನನಗೆ ಕೆಲವು ಅಧಿಕಾರ ಬೇಕು ಎಂದು...

ಶ್ರೀ ಸಿದ್ದರಾಮಯ್ಯ : ಸನ್ಮಾನ್ಯ ಮುಖ್ಯಮಂತ್ರಿಗಳೇ, ಐದು ಲಕ್ಷ ಟನ್ ಅದಿರು ಕದ್ದು ಹೋಗಿದೆ ಎಂದು ದಾಖಲಾತಿಗಳು ಇದೆಯಲ್ಲಾ ಇದರ ಬಗ್ಗೆ ಏನು ಮಾಡಿದ್ದೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಇಷ್ಟೊತ್ತು ಹೇಳಿದೆ, ನೀವು ಇರಲಿಲ್ಲ.

ಶ್ರೀ ಸಿದ್ದರಾಮಯ್ಯ : ಈಗ ನಿಮಗೆ ಲೋಕಾಯುಕ್ತರ ಬಗ್ಗೆ ಗೌರವ ಬಂದಿದೆ ಸರಿ. ಅವರನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಿ, ನಿಮ್ಮ ರಾಷ್ಟ್ರೀಯ ನಾಯಕರು ಎಲ್ಲಾ ಬಂದರು. ಅವೆಲ್ಲಾ ಸರಿ ಹೋಗಿದೆ. ಆದರೆ ಲೋಕಾಯುಕ್ತರು ಏನು ಹೇಳಿದ್ದಾರೆಂದರೆ, "Bigwigs in Belekeri scam". ಇವರು ಯಾರು ಎಂದು ಹೆಸರು ಹೇಳಬೇಕಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ತನಿಖೆ ಮಾಡುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ : ನೀವು ತನಿಖೆ ಎಲ್ಲಿ ಮಾಡುತ್ತಿದ್ದೀರಿ? ನೀವೇ ಆ ಇಲಾಖೆಯ ಮಂತ್ರಿಗಳಲ್ಲವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಪೂರ್ತಿ ಉತ್ತರ ಕೊಡುವಾಗ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಎರಡೂವರೆ ಸಾವಿರ ಕೊಟಿ ರೂಪಾಯಿ ಹೋಗಿದೆ.

ಶ್ರೀ ಡಿ.ಕೆ. ಶಿವಕುಮಾರ್ : ಎರಡುವರೆ ಸಾವಿರ ಕೋಟಿ ಅಲ್ಲ. ಲೋಕಾಯುಕ್ತರು ನಿನ್ನೆ on record ಟಿ.ವಿಯಲ್ಲಿ 1,600 ರೂ. ಕೋಟಿ ಎಂದು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ : ಆದ್ದರಿಂದ ಮಾನ್ಯ ಅಧ್ಯಕ್ಷರೆ, ನೀವು ಹೇಳುವ ಪ್ರಕಾರವೇ ಕದ್ದು ಹೋಗಿರತಕ್ಕಂಥ iron ore 294 ಲಕ್ಷ ಟನ್...

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು reply ಮಾಡುವುದಕ್ಕಾದರೂ ಬಿಡಬೇಕಲ್ಲವೇ? ಆಮೇಲೆ ಬೇಕಾದರೆ clarification ಕೊಡಬಹುದು.

ಶ್ರೀ ಸಿದ್ದರಾಮಯ್ಯ : ಅದಕ್ಕೆ ನೀವು 100 ರೂಪಾಯಿ ಒಂದು ಡಾಲರ್ . . . . .

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ ಇದು ಹೇಗೆ? ನಾನು yield ಆಗದೇ ಪ್ರತಿಪಕ್ಷದ ನಾಯಕರು ಪದೇ ಪದೇ ಎದ್ದು ನಿಂತರೆ ಹೇಗಾಗುತ್ತದೆ? ಒಂದು ನಿಮಿಷ ನಾನು ಉತ್ತರ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ...ನೀವು 15 ಸಾವಿರ ಕೋಟಿ ಆಯಿತು, ಈ 15 ಸಾವಿರ ಕೋಟಿ ಬಗ್ಗೆ ಏನೂ ಮಾತನಾಡದೇ ಇದ್ದರೆ ಹೇಗೆ?

ಅಧ್ಯಕ್ಷರು : ಈಗ ಎಷ್ಟೋ ಕಂಪನಿಗಳ ಮೇಲೆ FIR ಮಾಡಿದ್ದೇವೆ ಎಂದು ಹೇಳಿದರಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಉತ್ತರ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ನಾವು ಮಾತನಾಡುವಾಗ ನೀವು ಮಧ್ಯೆ ಮಧ್ಯೆ ಎದ್ದು ನಿಂತರೆ ಆಗ ನಮಗೆ ಹೇಗೆ ಆಗಬೇಕು?

ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು) : ವಿರೋಧಪಕ್ಷದ ನಾಯಕರಾಗಿ ನೀವು ಈ ರೀತಿ ಪದೇ ಪದೇ ಎದ್ದು ನಿಂತುಕೊಳ್ಳುವುದು ಗೌರವ ಅಲ್ಲ.

ಶ್ರೀ ಸಿದ್ದರಾಮಯ್ಯ : ಗೌರವ ಹಾಗೂ ಅಗೌರವ ಇವೆಲ್ಲಾ ನಮಗೆ ಬಹಳ ವರ್ಷಗಳಿಂದ ಗೊತ್ತಿದೆ, ಕೇಳಿದ್ದೇವೆ. ಗೌರವ, ಅಗೌರವ, ಅವಮಾನ, ಅಪಮಾನ, ಮರ್ಯಾದೆ ಇವೆಲ್ಲಾ ನಾವು ಬಹಳ ವರ್ಷಗಳಿಂದ ನೋಡಿದ್ದೇವೆ.

ಶ್ರೀ ಎಸ್. ಸುರೇಶ್‌ಕುಮಾರ್ : ದಯವಿಟ್ಟು ಅವರು complete ಮಾಡಲಿ ಬಿಡಿ.

ಶ್ರೀ ಸಿದ್ಧರಾಮಯ್ಯ : ಆರು ವರ್ಷ, ನಾನೂ ಹಣಕಾಸಿನ ಮಂತ್ರಿಯಾಗಿ important ಇಲಾಖೆಗಳನ್ನು ನೋಡಿದ್ದೇನೆ. ಆಗ ಯಡಿಯೂರಪ್ಪನವರೇ ವಿರೋಧಪಕ್ಷದ ನಾಯಕರಾಗಿ ಇಲ್ಲಿ ಕುಳಿತಿದ್ದರು. ಆಗ ನಾವೇನು ಮಾಡಿದ್ದೇವೆ, ನೀವೇನು ಮಾಡಿದ್ದೀರಿ ಎಂದು ನೋಡಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಕಳೆದ 24 ವರ್ಷಗಳಿಂದ ಈ ಲೋಕಾಯುಕ್ತ ಮಸೂದೆ ಜಾರಿಗೆ ಬಂದ ಮೇಲೆ, ಹಿಂದಿನ ಯಾವುದೇ ಸರ್ಕಾರ ಲೋಕಾಯುಕ್ತರಿಗೆ ಹೆಚ್ಚಿನ ಅಧಿಕಾರ

ಕೊಡುವುದಕ್ಕೆ ಈ ಮನೆಯಲ್ಲಿಯೂ ಚರ್ಚೆಯಾಗಿಲ್ಲ. ಆದರೆ ನಮ್ಮ ಸರ್ಕಾರ ಇವತ್ತು ಅಕ್ರಮವಾಗಿ ಕಬ್ಬಿಣದ ಅದಿರು ಸಾಗಾಣಿಕೆ ಆಗುತ್ತಿರುವುದನ್ನು ನಮ್ಮ ಅರಣ್ಯ ಇಲಾಖೆಯವರು ಆ ಬಂದರಿನಲ್ಲಿ ಪತ್ತೆ ಹಚ್ಚಿ ಆ ಹತ್ತು ಕಂಪನಿಗಳ ಮೇಲೆ ವಾಸ್ತವಿಕ ಸತ್ಯ ಸಂಗತಿ ಗೊತ್ತಾಗುವವರೆಗೆ ಅಲ್ಲಿರುವಂತಹ ಕಬ್ಬಿಣದ ಅದಿರು ಅಲ್ಲಾಡಕೂಡದು ಎಂದು ಹೇಳಿದ್ದೇವೆ. ತತ್‌ಕ್ಷಣ ಎಲ್ಲಾ ಅಧಿಕಾರಿಗಳಿಗೆ ಕ್ರಮವನ್ನು ತೆಗೆದುಕೊಳ್ಳಲು ಪತ್ರವನ್ನು ಬರೆದಿದ್ದೇವೆ. ಯಾರನ್ನು ಸಸ್ಪೆಂಡ್ ಮಾಡಬೇಕು, ಯಾರ ಮೆಲೆ ಕ್ರಮ ತೆಗೆದುಕೊಳ್ಳಬೇಕು, ಅದೆಲ್ಲವನ್ನೂ ನಾವು ತೆಗೆದುಕೊಂಡಿದ್ದೇವೆ. ಜೊತೆಗೆ ಕಳೆದ ಒಂದು ವಾರದಿಂದ ಇಲ್ಲಿ ಏನು ನೀವು ಚರ್ಚೆ ಮಾಡಿ, ಲೋಕಾಯುಕ್ತರಿಗೆ ಕೆಲವು ಅಧಿಕಾರ ಕೊಡುವ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ, ಆ ಮಾಹಿತಿಯನ್ನು ನಿಮಗೆ ನಾನು ಒದಗಿಸುತ್ತೇನೆ.

ಶ್ರೀ ಬಿ.ಸಿ. ಪಾಟೀಲ್ : ಅಧಿಕಾರಿಗಳನ್ನು ತನಿಖೆ ಮಾಡಿದ್ದು ಆಯಿತು, ಆದರೆ ಕಳ್ಳರು ಯಾರು ಎಂದು ಗೊತ್ತಾಗಬೇಕಲ್ಲಾ?

ಅಧ್ಯಕ್ಷರು : ಈಗ FIR ಆಗಿದೆ ಎಂದು ಹೇಳಿದ್ದಾರಲ್ಲಾ.

ಶ್ರೀ ಬಿ.ಸಿ. ಪಾಟೀಲ್ : ಆದರೆ ಕಳ್ಳರು ಯಾರು ಎಂದು ಇಲ್ಲಿಯವರೆಗೂ ಗೊತ್ತಾಗಲಿಲ್ಲ. ಬರೀ ಮಾತಿನಲ್ಲಿ ಅಷ್ಟೇ ಹೇಳುವುದಾಯಿತು.

ಅಧ್ಯಕ್ಷರು : ಆಯಿತು, ಹತ್ತು ಕಂಪನಿಗಳ ಬಗ್ಗೆ ತನಿಖೆಯಾಗುತ್ತಿದೆ. Preliminary stage ನಲ್ಲಿದೆ. Can it be disclosed at this stage? ನೀವು ಪೋಲೀಸ್ ಆಗಿದ್ದವರು, ಈ stage ನಲ್ಲಿ can it be disclosed?

ಶ್ರೀ ಬಿ.ಸಿ. ಪಾಟೀಲ್ : ಕಳ್ಳರನ್ನು ಹಿಡಿಯದೇ ಮಾಲು ಹೇಗೆ ಪತ್ತೆಯಾಗುತ್ತದೆ?

HON'BLE SPEAKER: How it can be disclosed?

ಶ್ರೀ ಬಿ.ಸಿ. ಪಾಟೀಲ್ : ನಾನು ಪೊಲೀಸ್ ಆಗಿದ್ದಕ್ಕೆ ಹೇಳಿದ್ದು.

MR. SPEAKER: Lots of information can be disclosed. ಕಳ್ಳರು ಎಂದು ಗೊತ್ತಿದ್ದರೂ ಅದು recovery ಆಗುವವರೆಗೆ, it must be kept in secret.

ಶ್ರೀ ಬಿಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಲೋಕಾಯುಕ್ತ ಅಧಿನಿಯಮಕ್ಕೆ ಸೂಕ್ತ ತಿದ್ದುಪಡಿಯನ್ನು ತಂದು, ಲೋಕಾಯುಕ್ತರ ಕೈಯನ್ನು ಬಲಪಡಿಸಿ, ಇನ್ನು ಮುಂದೆ ಅಕ್ರಮವಾಗಿ ಗಣಿಗಾರಿಕೆ ನಡೆಯಬಾರದು, ತಪ್ಪಿತಸ್ಥರ ಮೇಲೆ ಶಿಕ್ಷೆ ಮಾಡುವುದಕ್ಕೆ ಲೋಕಾಯುಕ್ತರ ಕೈ ಬಲಪಡಿಸಬೇಕು ಎನ್ನುವ ದೃಷ್ಟಿಯಿಂದ ಈ ಕೆಳಗಿನ ಅಧಿಕಾರವನ್ನು ಕೊಡಬೇಕೆಂದು ನಾವು ತೀರ್ಮಾನವನ್ನು ಮಾಡಿದ್ದೇವೆ.

ಮೊದಲನೆಯದು, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 2 ರಲ್ಲಿ ನೀಡಲಾದ 'ಕಾರ್ಯದರ್ಶಿ' ಪದದ ಪರಿಭಾಷೆಯಲ್ಲಿ ಮುಖ್ಯ ಕಾರ್ಯದರ್ಶಿ, ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಪ್ರಧಾನ ಕಾರ್ಯದರ್ಶಿ ಹುದ್ದೆಗಳು ಸೇರಿರುವುದಿಲ್ಲ, ಇವರನ್ನು ಸದರಿ ಪದದ ಪರಿಭಾಷೆಯಲ್ಲಿ ಇನ್ನು ಮುಂದೆ ಸೇರಿಸಬೇಕೆಂದು ತೀರ್ಮಾನ ಮಾಡಿದ್ದೇವೆ. ಲೋಕಾಯುಕ್ತರು ಮತ್ತು ಉಪ ಲೋಕಾಯುಕ್ತರು ಸ್ವಪ್ರೇರಣೆಯಿಂದ ತನಿಖೆಯನ್ನು ನಡೆಸುವಂಥ ಮೊದಲು ಅವರು ತನಿಖೆಗೆ ಒಳಪಡಿಸಲು ಉದ್ದೇಶಿತ ಕ್ರಮ ಒಂದು, ಕುಂದು ಕೊರತೆ– grievances ಅಥವಾ ದೂರಿಗೆ allegation ಗೆ ಕಾರಣವಾಗಿರಬಹುದು ಎಂಬ ಬಗ್ಗೆ ತಮ್ಮ ಅಭಿಪ್ರಾಯವನ್ನು ಲಿಖಿತದಲ್ಲಿ ದಾಖಲಿಸಬೇಕೆಂದು ಕಲಂ 7(1) ಮತ್ತು 7(2)ಕ್ಕೆ ತಿದ್ದುಪಡಿ ಮಾಡುತ್ತೇವೆ. ಹಾಲಿ ಇರುವಂಥ

ಅವಕಾಶದೊಂದಿಗೆ ಉಪ ಲೋಕಾಯುಕ್ತರ ಹುದ್ದೆ ರಾಜೀನಾಮೆಯಿಂದ, ನಿವೃತ್ತಿಯಿಂದ, ನಿಧನ ಹೊಂದಿದ ಪ್ರಯುಕ್ತ, ಖಾಲಿಯಾದಾಗ, ಉಪ ಲೋಕಾಯುಕ್ತರ ಕರ್ತವ್ಯಗಳನ್ನು ಲೋಕಾಯುಕ್ತರು ನಿರ್ವಹಿಸುವಂತೆ ಅನುವು ಮಾಡಿಕೊಡುವುದಕ್ಕೆ ಕಲಂ 7(4) ಕ್ಕೆ ಸೂಕ್ತ ತಿದ್ದುಪಡಿಯನ್ನು ಮಾಡುತ್ತೇವೆ. ತೊಂದರೆಗೊಳಗಾದ ವ್ಯಕ್ತಿಗಳು ದೂರು ನೀಡಲು ಸಾಧ್ಯವಾಗದಿದ್ದಲ್ಲಿ ಅಥವಾ ನೀಡಲಾದ ದೂರನ್ನು ಮುಂದುವರೆಸಿಕೊಂಡು ಹೋಗಲು ಸಾಧ್ಯವಾಗದಿದ್ದಲ್ಲಿ ಅವರ ವಾರಸುದಾರರು ಮುಂದುವರೆಸು ವಂತೆ ಅನುವು ಮಾಡಿಕೊಡುವುದಕ್ಕೆ ಸೂಕ್ತ ತಿದ್ದುಪಡಿಯನ್ನು ಕಲಂ 9(1)ಕ್ಕೆ ತರುತ್ತೇವೆ. ಸ್ವಪ್ರೇರಣೆಯಿಂದ ತನಿಖೆ ನಡೆಸುವುದಕ್ಕೆ ಉದ್ದೇಶಿತ ಸಂದರ್ಭದಲ್ಲಿ ಅಂದರೆ ದೂರು ಲಭ್ಯವಿಲ್ಲದಿದ್ದಾಗ ಸ್ವಪ್ರೇರಣೆಯಿಂದ ತನಿಖೆಯನ್ನು ನಡೆಸುವ ಬಗ್ಗೆ ಲೋಕಾಯುಕ್ತರು ಅಥವಾ ಉಪಲೋಕಾಯುಕ್ತರು ದಾಖಲಿಸಿದ ಅಭಿಪ್ರಾಯವನ್ನು ಸಂಬಂಧಿತ ಸಾರ್ವಜನಿಕ ನೌಕರರಿಗೆ ಮತ್ತು ಸಂಬಂಧಿತ ಸಕ್ಷಮ ಪ್ರಾಧಿಕಾರಕ್ಕೆ ನೀಡಬೇಕು ಮತ್ತು ಅದರ ಬಗ್ಗೆ ತಮ್ಮ ಅಹವಾಲನ್ನು ತಿಳಿಸುವುದಕ್ಕೆ ಸಂಬಂಧಿತ ಸಾರ್ವಜನಿಕ ನೌಕರರಿಗೆ ಒಂದು ಅವಕಾಶವನ್ನು ನೀಡುವಂಥ ತಿದ್ದುಪಡಿಯನ್ನು ಮಾಡಿದ್ದೇವೆ. ಕಲಂ 10(13)ರಲ್ಲಿದ್ದಂತೆ ಘೋಷಣೆಯನ್ನು ಒಪ್ಪಿಕೊಳ್ಳುವ ಅಥವಾ ಒಪ್ಪಿಕೊಳ್ಳದಿರುವ ಅಧಿಕಾರ ಅಧಿನಿಯಮದಲ್ಲಿ ನಿಗದಿಪಡಿಸಿದ ಸಕ್ಷಮ ಪ್ರಾಧಿಕಾರಕ್ಕೆ ಇದೆ.

ಆ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇದೆ. ಲೋಕಾಯುಕ್ತ ಅಥವಾ ಉಪ ಲೋಕಾಯುಕ್ತರ ಘೋಷಣೆಯನ್ನು ಒಪ್ಪಿಕೊಳ್ಳುವ ಒಪ್ಪಿಕೊಳ್ಳದಿರುವ ಬಗ್ಗೆ ತಿರ್ಮಾನ ತೆಗೆದುಕೊಳ್ಳುವ ಮುಂಚೆ ಸಂಬಂಧಿತ ಸಾರ್ವಜನಿಕ ನೌಕರರು ಅಹವಾಲು ನೀಡುವುದಕ್ಕೆ ಅವಕಾಶ ನೀಡುವುದಕ್ಕೆ ಸೂಕ್ತ ತಿದ್ದುಪಡಿಯನ್ನು ನಾವು ಮಾಡುತ್ತೇವೆ. ಲೋಕಾಯುಕ್ತ ಅಥವಾ ಉಪ ಲೋಕಾಯುಕ್ತರು ದೂರುಗಳ ತನಿಖೆಯನ್ನು ನಡೆಸುವುದಕ್ಕೆ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಅಧಿಕಾರಿಗಳ ಸೇವೆಯನ್ನು

ಬಳಸಿಕೊಳ್ಳಬಹುದು. ಯಾವುದೇ ಸಂಸ್ಥೆಯ ಸೇವೆಯನ್ನು ಬಳಸಿಕೊಳ್ಳಬಹುದು. ಇದರ ಜೊತೆಗೆ, ಯಾವುದೇ ವ್ಯಕ್ತಿಯ ಸೇವೆಯನ್ನು ಬಳಸಿಕೊಳ್ಳಬಹುದು ಎಂದು ಅಧಿನಿಯಮಕ್ಕೆ ತಿದ್ದುಪಡಿ ಮಾಡುತ್ತೇವೆ. ಕಲಂ 15(3)(ಬಿ) ಇದರೊಂದಿಗೆ ಈಗಾಗಲೇ ಇರುವಂತೆ ಕೇಂದ್ರ ಸರ್ಕಾರದ ಯಾವುದೇ ಅಧಿಕಾರಿಯ ಅಥವಾ ಸಂಸ್ಥೆಯ ಸೇವೆಯನ್ನು ಬಳಸಿಕೊಳ್ಳುವುದಕ್ಕೆ ಅವಕಾಶವಿದ್ದು ಅದಕ್ಕೆ ಸೂಕ್ತ ತಿದ್ದುಪಡಿ ಮಾಡಿ, ಸೇವೆಯನ್ನು ಬಳಸಿಕೊಳ್ಳುವ ಮೊದಲು ರಾಜ್ಯ ಸರ್ಕಾರದ ಮತು ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆದು ಬಳಸಿಕೊಳ್ಳುವಂತೆ ುದ್ದುಪಡಿ ಮಾಡುತ್ತೇವೆ. ಹಾಲಿ ಇರುವ ಅವಕಾಶಗಳೊಂದಿಗೆ ಲೋಕಾಯುಕ್ತರ ಹುದ್ದೆ ರಾಜೀನಾಮೆಯಿಂದ, ನಿವೃತ್ತಿಯಿಂದ, ನಿಧನ ಹೊಂದಿದ ಪ್ರಯುಕ್ತ ಖಾಲಿಯಿದ್ದಾಗ ಲೋಕಾಯುಕ್ತರ ಕರ್ತವ್ಯಗಳನ್ನು ಉಪ ಲೋಕಾಯುಕ್ತರು ಸಹ ನಿರ್ವಹಿಸುವಂತೆ ಅನುವು ಮಾಡಿಕೊಡುವುದಕ್ಕೆ ಕಲಂ 15(4)ಕ್ಕೆ ಸೂಕ್ತವಾದ ತಿದ್ದುಪಡಿ ಮಾಡುತ್ತೇವೆ. ಲೋಕಾಯುಕ್ತರ ವ್ಯಾಪ್ತಿಯಲ್ಲಿ ಮುಖ್ಯಮಂತ್ರಿಗಳು, ಸಚಿವರು, ವಿಧಾನಮಂಡಲದ ಸದಸ್ಯರು ಮತ್ತು ಮಾಸಿಕ 20 ಸಾವಿರ ರೂ. ಸಂಭಾವನೆ ಪಡೆಯುತ್ತಿರುವ ಅಥವಾ ಯಾರ ವೇತನ ಶ್ರೇಣಿ ಕನಿಷ್ಠ 20 ಸಾವಿರ ರೂ. ಅಥವಾ ಅದಕ್ಕಿಂತ ಹೆಚ್ಚು ಇರುತ್ತದೋ ಅಂಥ ಸಾರ್ವಜನಿಕ ನೌಕರರು ಅದರಲ್ಲಿ ಬರುತ್ತಾರೆ. ಇವರುಗಳಲ್ಲಿ ಮುಖ್ಯಮಂತ್ರಿ, ಸಚಿವರು, ವಿಧಾನಮಂಡಲದ ಸದಸ್ಯರು ಅಥವಾ ಸರ್ಕಾರದಿಂದ ನಾಮನಿರ್ದೇಶನಗೊಂಡಂಥ ಸಾರ್ವಜನಿಕ ನೌಕರರನ್ನು ಬಿಟ್ಟು ಉಳಿದ ಸಾರ್ವಜನಿಕ ನೌಕರರನ್ನು ಮಾತ್ರ ಕುರಿತಂತೆ ಲೋಕಾಯುಕ್ತರಿಗೆ ಸ್ವಯಂಪ್ರೇರಣೆಯಿಂದ ತನಿಖೆ ನಡೆಸುವಂಥ ಅಧಿಕಾರವನ್ನು ನೀಡುವಂಥ ತೀರ್ಮಾನ ಕೈಗೊಂಡಿದ್ದೇವೆ. ಹೀಗೆ ಸನ್ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಯಾವ ತಿದ್ದುಪಡಿಗಳನ್ನು ತಂದು ಲೋಕಾಯುಕ್ತರಿಗೆ ಹೆಚ್ಚು ಶಕ್ತಿಯನ್ನು ಕೊಡಬೇಕು ಎಂದು ರಾಜ್ಯಪಾಲರಿಗೆ ಕಳುಹಿಸಿದ್ದರೋ ಅದರಲ್ಲಿ ಬಹುತೇಕ

ಮತ್ತು ಈ ಮನೆಯಲ್ಲಿ, ಪ್ರತಿಪಕ್ಷದ ನಾಯಕರ ಜೊತೆ ಚರ್ಚೆ ಮಾಡುವಂಥ ಕಾಲದಲ್ಲಿ ಏನು ಸಲಹೆಗಳು ಬಂದವೋ ಮತ್ತು ಲೋಕಾಯುಕ್ತರು ಸ್ವತಂತ್ರವಾಗಿ ಕೆಲಸ ಮಾಡಬೇಕು, ಭ್ರಷ್ಟಾಚಾರವನ್ನು ಕಿತ್ತುಹಾಕಬೇಕು ಮತ್ತು ಈ ದಂಧೆ ನಿಲ್ಲಬೇಕು, ಈ ಹಿನ್ನೆಲೆಯಲ್ಲಿ ಈ ಕೆಲಸ ಮಾಡಿದ್ದೇನೆ. ಭ್ರಷ್ಟಾಚಾರ ಎನ್ನುವಂಥ ಪೆಡಂಭೂತ ಬಹಳ ವರ್ಷಗಳಿಂದ ನಮ್ಮನ್ನು ಕಾಡುತ್ತಿದೆ. ಇದೊಂದು ಜ್ವಲಂತ ಸಮಸ್ಯೆ. ಇದನ್ನು ಎದುರಿಸುವುದಕ್ಕೆ ನಾವೆಲ್ಲರೂ ಒಗ್ಗಟ್ಟಾಗಿ ಒಟ್ಟಾಗಿ ಹೋರಾಡಬೇಕಾಗಿದೆ. ಬಹುಶಃ ಯಾರೊಬ್ಬರ ಕಡೆಗಾದರೂ ಬೆಟ್ಟು ತೋರಿಸಿ ಆ ಕಾಲದಲ್ಲಿ, ಈ ಕಾಲದಲ್ಲಿ ಹೀಗಾಯಿತು ಎನ್ನುವುದಕ್ಕಿಂತ ನಾವೆಲ್ಲರೂ ಒಟ್ಟಿಗೆ ಸೇರಿ ಪ್ರಧಾನಿಯವರನ್ನೂ ವಿನಂತಿ ಮಾಡೋಣ. ಈ ಪ್ರಜಾತಂತ್ರ ವ್ಯವಸ್ಥೆಗೆ ಇನ್ನೂ ಹೆಚ್ಚು ಶಕ್ತಿ ತುಂಬುವ ಕೆಲಸವನ್ನು ಸ್ವಾತಂತ್ರ್ಯ ಬಂದ 62 ವರ್ಷಗಳ ನಂತರವಾದರೂ ಮಾಡಬೇಕಾಗಿದೆ. ಬಹುಶಃ ಯಡಿಯೂರಪ್ಪ ಯಾವ ನಿಲುವು ತೆಗೆದುಕೊಂಡಿದ್ದಾರೆ, ಯಾವ ಅಧಿಕಾರವನ್ನು ಲೋಕಾಯುಕ್ತರಿಗೆ ಕೊಟ್ಟಿದ್ದಾರೆ, ಹಿಂದಿನವರು ಏಕೆ ಕೊಡಲಿಲ್ಲ ಎನ್ನುವ ಬಗ್ಗೆ ಚರ್ಚೆ ಮಾಡುವುದಕ್ಕೆ ನಾವು ಹೋಗುವುದಿಲ್ಲ. ಆದರೆ, ಇವತ್ತು ಈ ಭ್ರಷ್ಟಾಚಾರವನ್ನು ಹತ್ತಿಕ್ಕುವುದಕ್ಕೆ ಸಾರ್ವಜನಿಕ ಮಟ್ಟದಲ್ಲಿ ಸಹ ಮುಕ್ತವಾದ ಚಿಂತನೆ ಆಗಬೇಕಾಗಿದೆ. ನಾನು ಇನ್ನೂ ಹೆಚ್ಚು ವಿವರವನ್ನು ಕೊಡುತ್ತಿದ್ದೇನೆ. ಅದೇನೆಂದರೆ, ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದ ಕಾಲದಲ್ಲಿ ಬಹುತೇಕ ಕಾಂಗ್ರೆಸ್ಸಿನ ಮುಖಂಡರು ಈ ಗಣಿಗಾರಿಕೆ ಕೊಡುವ ಪ್ರಯತ್ನ ಮಾಡಲಾಗಿತ್ತು. ಜೆಡಿಎಸ್ ನವರು ಅಧಿಕಾರದಲ್ಲಿದ್ದ ಕಾಲದಲ್ಲಿ ಅವರಿಗೆ ಬೇಕಾದಂಥವರಿಗೆ ಅನುಮತಿಯನ್ನು ಕೊಡಲು ಪ್ರಯತ್ನ ಮಾಡಿದರು. ಅಂದರೆ ಆ ಪಾರ್ಟಿ ಈ ಪಾರ್ಟಿ ಎಂದಲ್ಲ. ಯಾರ್‍ಯಾರು ಗಣಿಗಾರಿಕೆ licence ಪಡೆದಿದ್ದಾರೆ, ಇವರೆಲ್ಲರೂ ಒಟ್ಟಿಗೆ ಸೇರಿ ಯಾರೋ ಒಬ್ಬರು exception ಇದ್ದಾರೆಂದು ನನಗನ್ನಿಸುವುದಿಲ್ಲ. ಎಲ್ಲರೂ ಸಹ ಈ ದಂಧೆಯಲ್ಲಿ ಸೇರಿಲ್ಲದೆ ಇದ್ದರೆ ಇಷ್ಟು ಲಕ್ಷಾಂತರ ಟನ್

ಗಣಿ ಕಬ್ಬಿಣದ ಅದಿರು ರಫ್ತು ಆಗುತ್ತಿರಲಿಲ್ಲ. ಯಾರ್‍ಯಾರು ಯಾರ್‍ಯಾರ ಕಾಲದಲ್ಲಿ licence ಕೊಟ್ಟರು, ಯಾರ್‍ಯಾರು ಪಕ್ಷದ ಅಧ್ಯಕ್ಷರಿರಬಹುದು, ಪ್ರಮುಖರಿರಬಹುದು, ಮಂತ್ರಿಗಳಾಗಿದ್ದವರು ಇರಬಹುದು, ಅವರ ಸಂಬಂಧಿಕರು ಇರಬಹುದು, ಯಾರ್‍ಯಾರಿಗೆ ಕೊಟ್ಟರು ಆ ಪಟ್ಟಿ, ಎಲ್ಲಾ ವಿವರವನ್ನು ನಾನೀಗ ನಿಮಗೆ ಒದಗಿಸುತ್ತಿದ್ದೇನೆ. ಅದಕ್ಕಿಂತ ಮುಂಚೆ ಜನಾರ್ಧನರೆಡ್ಡಿಯವರು ಕೆಲವು ವಿಷಯಗಳನ್ನು ಮಾತನಾಡುತ್ತಾರೆ. ಅದರಲ್ಲಿ ಅನೇಕ ವಿಷಯಗಳು ಪ್ರಸ್ತಾಪವಾಗುತ್ತವೆ. ಅವರು ಉತ್ತರ ಕೊಟ್ಟಮೇಲೆ ಅವರು clarification ಕೇಳಲಿ.

(ಗೊಂದಲ)

Sri D. K. Shiva Kumar: Mines and Geology ಖಾತೆಯನ್ನು ನಿಮಗೆ ಕೊಟ್ಟಿದ್ದಾರೆಯೇ?

(ಗೊಂದಲ)

ಅಧ್ಯಕ್ಷರು: ಅವರ ಮೇಲೆ ಕೆಲವು ಅಪಾದನೆಗಳನ್ನು ಮಾಡಲಾಗಿದೆ.

(ಗೊಂದಲ)

Sri D. K. Shiva Kumar: He cannot answer, ನಮಗೆ ಅವರ ಉತ್ತರ ಬೇಡ. CM ರವರು ಉತ್ತರ ಕೊಡಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾನು clarification ಕೇಳಿದ ಮೇಲೆ ಅವರು ಹೇಳಲಿ, ನಾನು clarification ಅನ್ನು ಮುಖ್ಯಮಂತ್ರಿಯವರಲ್ಲಿ ಕೇಳಬೇಕು. ನಿಮಗಲ್ಲ.

(ಗೊಂದಲ)

ಅಧ್ಯಕ್ಷರು: ಇರಬಹುದು. ನೇರವಾಗಿ ಅಪಾದನೆ ಮಾಡಲಿಕ್ಕೆ ನಿಮಗೆ ಆಗುವುದಿಲ್ಲ. How can you say? No.

(ಗೊಂದಲ)

MR. SPEAKER: No. It is direct allegation, 'He is involved' ಎನ್ನುವುದು what is this language? No you cannot use such a language.

(ಗೊಂದಲ)

MR. SPEAKER: No. You must know your responsibility. How can you make such an allegation against a Member without permission?

(ಗೊಂದಲ)

ಅಧ್ಯಕ್ಷರು: ನೇರವಾದ ಅಪಾದನೆಗಳನ್ನು ಮಾಡುವಂಥದ್ದು ಒಳ್ಳೆಯದಲ್ಲ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ಕಳೆದ 7 ದಿವಸಗಳಿಂದ ಚರ್ಚೆಯಾಗಿದೆ.

(ಗೊಂದಲ)

ಅಧ್ಯಕ್ಷರು: ನಾನು ಹೇಳಿದ್ದು ಇಷ್ಟೆ. ಅವರ ಕಂಪನಿ ಮೇಲೆ ಕೆಲವು ಆಪಾದನೆಗಳನ್ನು ಮಾಡಿದ್ದಾರೆ.

(ಗೊಂದಲ)

ಶ್ರಿ ಸಿದ್ದರಾಮಯ್ಯ: ನಾನು clarification ಕೇಳಿದ ಮೇಲೆ whatever he wants to say, let him say. I have no objection. ನನಗೆ clarification ಕೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಆರ್. ಅಶೋಕ್: ಸರ್ಕಾರ ಏನು ಹೇಳಬೇಕೋ ಅದನ್ನು ಹೇಳಿದೆ.

ಶ್ರಿ ಸಿದ್ದರಾಮಯ್ಯ: ಆಮೇಲೆ please allow him to speak. I have no objection. Because, he has got every right to speak. ಮುಖ್ಯಮಂತ್ರಿಯವರು ಉತ್ತರ ಕೊಟ್ಟ ತಕ್ಷಣವೇ ನಾವು clarification ಕೇಳದಿದ್ದರೆ ಅವರು ಹೇಳುವುದು, ಇವರು ಹೇಳುವುದು ಗೊಂದಲವಾಗುತ್ತದೆ. ಇವರು ದೀರ್ಘವಾದ ಉತ್ತರ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಡಿ. ಕೆ. ಶಿವಕುಮಾರ್: ಅವರು Tourism ಮಂತ್ರಿ

(ಗೊಂದಲ)

ಅಧ್ಯಕ್ಷರು: ನಾನು ಹೇಳಿದ್ದು, ಅವರ ಮೇಲೆ ಕೆಲವು ಅಪಾದನೆಗಳು ಬಂದಿವೆ.

ಶ್ರೀ ಡಿ. ಕೆ. ಶಿವಕುಮಾರ್: ಬೇಕಾದರೆ ಆ department ವಹಿಸಿಕೊಳ್ಳಿ.

(ಗೊಂದಲ)

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರು clarification ಕೇಳಿದ ಮೇಲೆ ನೀವು ಮಾತನಾಡಿ.

ಶ್ರೀ ಆರ್. ಅಶೋಕ್: 5 days ಅವರಿಗೆ ಅವಕಾಶ ಕೊಟ್ಟಿದ್ದೀರಿ. 2 hour ನಮಗೆ ಕೊಡುವುದಿಲ್ಲವೆಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು: ಈಗ ಇವರೊಬ್ಬರು ಮಾತನಾಡಲಿ

(ಗೊಂದಲ)

ಅಧ್ಯಕ್ಷರು: ಈಗ ಅವರು clarification ಕೇಳಲಿ. ಆಮೇಲೆ, ನೀವು ಮಾತನಾಡಿ.

(ಗೊಂದಲ)

ಅಧ್ಯಕ್ಷರು: ತಾವು ಆಮೇಲೆ ಮಾತನಾಡಿ, ನಾನು ಒಬ್ಬರಿಗೆ ಮಾತ್ರ ಅವಕಾಶ ಕೊಡುತ್ತೇನೆ. ಅವರು ಕೇಳಲಿ, ಆಮೇಲೆ ನಾನು ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇದರ importance ಹೋಗುತ್ತದೆ.

(ಗೊಂದಲ)

ಅಧ್ಯಕ್ಷರು: ಮಾತನಾಡಿ, ಎಷ್ಟು ಬೇಕಾದರೂ ಮಾತನಾಡಿ. ಯಾರೂ ಹೇಳುವುದನ್ನು ಕೇಳುವುದಕ್ಕೆ ತಯಾರಿಲ್ಲವೆಂದರೆ? ನಾನು ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಟ್ಟಿದ್ದೇನೆ. 5 ನಿಮಿಷಗಳಾದ ಮೇಲೆ ಕೇಳಿ.

(ಗೊಂದಲ)

ಅಧ್ಯಕ್ಷರು: ನಿಮಗೆ ಕೊಡಬೇಕೆಂದು Rules ಇಲ್ಲ

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ: ನಾನಿನ್ನೂ ಉತ್ತರ ಪೂರ್ತಿ ಮಾಡಿಲ್ಲ. ಮಾನ್ಯ ಸಚಿವರು ಮಾತನಾಡುತ್ತಾರೆ. ನಂತರ ಅವರು clarification ಕೇಳುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಅವರ ಜೊತೆ ನಿಮಗೆ ತಾಳ ಮೇಳವೆ?

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ: ಇವರ ಬಂಧು ಬಳಗ ಯಾರ್‍ಯಾರಿದ್ದಾರೆ? ಎಲ್ಲ ಕೊಡುತ್ತೇನೆ. ಇಲ್ಲಿ ಇಟ್ಟುಕೊಂಡಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಜನಾರ್ಧನರೆಡ್ಡಿಯವರು ಮಾತನಾಡುವುದಿದ್ದರೆ ಮುಖ್ಯಮಂತ್ರಿಯವರು ಮಾತನಾಡುವುದಕ್ಕೆ ಮುಂಚೆ ಬೇರೆಯವರು ಮಾತನಾಡಬೇಕಾಗಿತ್ತು. ಈಗ ಮುಖ್ಯಮಂತ್ರಿಯವರು ಉತ್ತರ ಕೊಟ್ಟ ಮೇಲೆ ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಕೂಡದು. I have got every right to ask clarification.

(ಗೊಂದಲ)

Sri T. B. Jayachandra: I am on a point of order.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನೀವು ಹೇಳಿದ ಮೇಲೂ ಮಂತ್ರಿಗಳು ಎದ್ದು ನಿಂತರೆ ಹೇಗೆ? ಅವರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನೀವು ನನ್ನ ಹೆಸರನ್ನು ಕರೆದ ನಂತರವೂ ಕೂಡ ಮಂತ್ರಿಗಳೆಲ್ಲಾ ಎದ್ದು ನಿಂತುಕೊಳ್ಳುತ್ತಾರಲ್ಲಾ? ಏನಿದು? ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಆದರೂ ಮಂತ್ರಿಗಳು ಎದ್ದು ನಿಂತಿದ್ದಾರೆ ಎಂದರೆ ಯಾವ ತರಹ ಇದು? ಮಾನ್ಯ ಅಧ್ಯಕ್ಷರು ಅವರನ್ನು ಕರೆದಿಲ್ಲ. ನನ್ನನ್ನು ಕರೆದಿದ್ದಾರೆ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, I am on a point of order.

(ಗೊಂದಲ)

ಶ್ರೀ ಜಿ. ಜನಾರ್ಧನ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಅವರನ್ನು ಕುಳಿತುಕೊಳ್ಳಲಿಕ್ಕೆ ಹೇಳಿ. ನಾನು ಮಾತನಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಐದು ನಿಮಿಷ ಕುಳಿತುಕೊಳ್ಳಿ

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, I am on a point of order. Please allow me to submit.

ಅಧ್ಯಕ್ಷರು: ಆಯಿತು, submit ಮಾಡಿ

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಾನು ಯಾವ ವಿಚಾರದಲ್ಲಿ point of order ತರುತ್ತಿದ್ದೇನೆ ಎಂದರೆ, ಬಹುಶಃ ಕಳೆದ ಒಂದು ವಾರದಿಂದ ನಡೆದ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅವರು ಉತ್ತರ ಕೊಡಬೇಕಾಗಿತ್ತು. ಉತ್ತರ ಕೊಟ್ಟಿದ್ದಾರೆ.

ಅದೇನು ಉತ್ತರ ಕೊಟ್ಟಿದ್ದಾರೆ ಎನ್ನುವುದು ಬೇರೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಯಾವ ಖಾತೆಗೂ ಹೊಂದಿಲ್ಲದೇ ಇರತಕ್ಕವರು. ನಾವು ಏನು ಪ್ರಸ್ತಾಪ ಮಾಡಿದ್ದೇವೆ, ಯಾವ ಖಾತೆಗೂ ಸಂಬಂದಿಸಿಲ್ಲದ ಮಂತ್ರಿಗಳನ್ನು ಉತ್ತರ ಕೊಡಲಿಕ್ಕೆ ಕರೆಯಬಹುದೆ ಎನ್ನುವ ವಿಚಾರ ಇಲ್ಲಿದೆ.

(ಗೊಂದಲ)

ಶ್ರೀ ಜಿ. ಜನಾರ್ಧನ ರೆಡ್ಡಿ: ನಾನು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದೇನೆ. ನನ್ನ ಹೆಸರನ್ನು ನೀವುಗಳು ಪದೇ ಪದೇ ತೆಗೆದುಕೊಂಡಿದ್ದೀರಿ, magazines ತೋರಿಸಿದ್ದೀರಿ, ನಮ್ಮ ಹೆಸರೆಲ್ಲಾ ತೋರಿಸಿದ್ದೀರಿ, ನಮ್ಮ ಮನೆಗಳನ್ನು ತೋರಿಸಿದ್ದೀರಿ. ನನಗೆ clarification ಮಾಡತಕ್ಕ ಹಕ್ಕು ನನಗಿದೆ. ತಾವು ದಯಮಾಡಿ ಅವಕಾಶ ಕೊಡಿ.

(ಗೊಂದಲ)

ಶ್ರೀ ಬಿ. ರಮಾನಾಥ ರೈ: ಸಭಾನಾಯಕರು ಉತ್ತರ ಕೊಡುವುದಕ್ಕೆ ಮುಂಚೆ ನೀವು ಮಾತನಾಡಬೇಕಾಗಿತ್ತು.

(ಗೊಂದಲ)

ಶ್ರೀ ಹೆಚ್. ಎಸ್. ಮಹಾದೇವಪ್ರಸಾದ್: Point of order submit ಮಾಡುವುದಕ್ಕೂ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದೀರಿ.

ಅಧ್ಯಕ್ಷರು: ಹೌದು, ಹೇಳಿ

(ಗೊಂದಲ)

ಶ್ರೀ ಜಿ. ಜನಾರ್ಧನ ರೆಡ್ಡಿ: ನಾವು ಅವರು ಮಾತನಾಡುತ್ತಿದ್ದಾಗ disturb ಮಾಡಿದರೆ clarification time ನಲ್ಲಿ ಅದನ್ನೆಲ್ಲಾ ಹೇಳಿ ಎಂದು ಮಾನ್ಯ ಸಿದ್ದರಾಮಯ್ಯನವರೇ ಹೇಳಿದ್ದರು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವುದಕ್ಕಿಂತ ಮುಂಚಿತವಾಗಿ ಮಾನ್ಯ ಅಧ್ಯಕ್ಷರ permission ತೆಗೆದುಕೊಂಡು ನೀವು ಮಾತನಾಡಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಿದ ಮೇಲೆ, ಅವರ ಇಲಾಖೆಗೆ ಸಂಬಂಧವಿಲ್ಲದ ಇನ್ನೊಬ್ಬ ಮಂತ್ರಿಗಳು ಮಾತನಾಡುವುದು ಸರಿಯಲ್ಲ. ನಾನು clarification ಕೇಳಿದ ಮೇಲೆ ಬೇಕಾದರೆ ಅವರು ಮಾತನಾಡಲಿ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, I am on a point of order.

(ಗೊಂದಲ)

ಅಧ್ಯಕ್ಷರು: Point of order ಹೇಳುತ್ತಿದ್ದಾರೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ, ತಾವು ಹೇಳಿ.

(ಗೊಂದಲ)

Sri T. B. Jayachandra: Whether the House in order or not ಎನ್ನುವುದನ್ನು ದಯವಿಟ್ಟು ಹೇಳಿಬಿಡಿ.

(ಗೊಂದಲ)

ಅಧ್ಯಕ್ಷರು: ತಮ್ಮ point of order ಹೇಳಿ

ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, Members having a personal pecuniary or direct interest in the matters before the House or Committee...

ಅಧ್ಯಕ್ಷರು: ನೀವು ರೂಲ್ ಯಾವುದು ಎಂದು ಹೇಳಿ. ಅದನ್ನು ಬಿಟ್ಟು ಸುಮ್ಮನೆ point of order raise ಮಾಡಿದರೆ ಹೇಗೆ?

ಶ್ರೀ ಟಿ. ಬಿ. ಜಯಚಂದ್ರ: Point of order ಅನ್ನೇ ಹೇಳುತ್ತಿದ್ದೇನೆ.

Mr. Speaker: Under which rule?

Sri T. B. Jayachandra: I am quoting the Kaul and Shakdar.

Mr. Speaker: You must first tell me the rules. ಅದನ್ನು ಆಮೇಲೆ quote ಮಾಡಿ.

ಶ್ರೀ ಟಿ. ಬಿ. ಜಯಚಂದ್ರ: ನಾನು . . .

Mr. Speaker: No. No. Directly you cant't quote it. Under which rule you are raising the point of order, you please tell me first? ಅದಕ್ಕೆ ಪೂರಕವಾಗಿ ಅದನ್ನು Quote ಮಾಡಿ. Then I will agree. Otherwise no.

ಶ್ರೀ ಟಿ. ಬಿ. ಜಯಚಂದ್ರ: ನಾನು ಒಂದು ಮಾತನ್ನು ಹೇಳುತ್ತೇನೆ.

Mr. Speaker: No. No. You must first quote me the rule.

Sri T. B. Jayachandra: No. No Procedure also. I am telling.

Mr. Speaker: No. you Must follow the procedure. You tell me under what rule you are raising the point of order.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇದು ನನ್ನ ಮಾತಲ್ಲ. ಇದು ಕೌಲ್ ಅಂಡ್ ಶಕ್ದರ್ ಪುಸ್ತಕದಲ್ಲಿ ಹೇಳಿರುವುದು.

Mr. Speaker: Kaul and Shakdar I also know

(ಗೊಂದಲ)

Sri T. B. Jayachandra: Please allow me to submit.

(ಗೊಂದಲ)

ಅಧ್ಯಕ್ಷರು: ನೀವು ಏನನ್ನೋ submit ಮಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ: ಇದನ್ನು ಸ್ವಲ್ಪ ಓದುವುದಕ್ಕೂ ನೀವು ಬಿಡುತ್ತಿಲ್ಲವಲ್ಲಾ?

(ಗೊಂದಲ)

Mr. Speaker: No. Under what rule you are raising the point of order, tell me. You are a senior member.

Sri T. B. Jayachandra: I am drawing the attention of the . . .

ಅಧ್ಯಕ್ಷರು: ತಾವು senior member ಆಗಿದ್ದೀರಿ, ವಕೀಲರಾಗಿದ್ದೀರಿ. ಇಲ್ಲಿ ಈ ಸದನ ನಡೆಸುವುದು ನಾವೇ ಒಪ್ಪಿಕೊಂಡಂತಹ ಈ ರೂಲ್ಸ್ ಮೇಲೆ You tell me under what . . .

ಶ್ರೀ ಟಿ. ಬಿ. ಜಯಚಂದ್ರ: ನಾವು ಹೇಳುವವರೆಗೂ ನೀವು ಕೇಳುತ್ತಿಲ್ಲವಲ್ಲಾ?

ಅಧ್ಯಕ್ಷರು: ಯಾವ ರೂಲ್ ಮೇಲೆ ಎಂಬುದನ್ನು ನೀವು ಹೇಳಿ. ರೂಲ್ ಇಲ್ಲದೆಯೇ ನೀವು point of order ಅನ್ನು ಎತ್ತಬಹುದೇ ರೂಲ್ಸ್ ಹೇಳಿ.

(ಗೊಂದಲ)

ಅಧ್ಯಕ್ಷರು: ರೂಲ್ಸ್ ಹೇಳಬೇಕು. ರೂಲ್ಸ್ ಹೇಳದೆ ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು: ಅವರು ಹೇಳಲಿ, ಅವರಿಗೆ ನಾನು ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಇಡೀ ದೇಶದಲ್ಲಿ, ಪಾರ್ಲಿಮೆಂಟ್‌ನಲ್ಲಿ.....

ಅಧ್ಯಕ್ಷರು: ಇದು ಎಲ್ಲರಿಗೂ ಗೊತ್ತಿರುವ ವಿಚಾರ

ಶ್ರೀ ಟಿ. ಬಿ. ಜಯಚಂದ್ರ: ಹಾಗಾದರೆ ಅದನ್ನು ಓದುವುದಕ್ಕೂ ಸಹ ನೀವು ಬಿಡುತ್ತಿಲ್ಲವಲ್ಲಾ?

ಅಧ್ಯಕ್ಷರು: ನೀವು point of order ಯಾವ ರೂಲ್ಸ್ ಮೇಲೆ ಎತ್ತಿದ್ದೀರಿ ಎಂಬುದನ್ನು ಮೊದಲು ಹೇಳಿ, ನಂತರ ಅದನ್ನು quote ಮಾಡಿ. ಸುಮ್ಮನೆ raise ಮಾಡಬೇಡಿ.

ಶ್ರೀ ಟಿ. ಬಿ. ಜಯಚಂದ್ರ: ನೀವು ಮಾತನಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು: ನೀವು ಮಾತನಾಡಲಿಕ್ಕಾಗಿಯೇ ನಾನು ಅವಕಾಶ ಕೊಟ್ಟಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ: ನಮ್ಮ ರೂಲ್ಸ್‌ಗಿಂತಲೂ ಅತ್ಯಂತ . . .

ಅಧ್ಯಕ್ಷರು: point of order raise ಮಾಡಬೇಕಾದರೆ ನೀವು ರೂಲ್ quote ಮಾಡಬೇಕೋ, ಬೇಡವೋ? ನೀವು ರೂಲ್ ಹೇಳಿ.

(ಗೊಂದಲ)

ಅಧ್ಯಕ್ಷರು: ಆಯಿತು, ಹೇಳಿ

ಶ್ರೀ ಟಿ. ಬಿ. ಜಯಚಂದ್ರ: I am trying to correct the Chair.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ನನಗೆ ಓದಲಿಕ್ಕೆ ಅವಕಾಶ ಕೊಡದಿದ್ದರೆ, ತಾವೇ ಇದನ್ನು ತರಿಸಿ ಓದಿ. ಕೌಲ್ ಅಂಡ್ ಶಕ್ದರ್ ಪುಸ್ತಕದ Page No. 333 ದಯಮಾಡಿ ಓದಿ. ನೀವು ಏನು ಬೇಕಾದರೂ ರೂಲಿಂಗ್ ಕೊಡಿ.

ಅಧ್ಯಕ್ಷರು: ಆಯಿತು, ಹೇಳಿ

Sri T. B. Jayachandra: Page No 333: The matters before the House or a Committee: A member having a personal pecuniary or direct interest in the matter before the House is required while taking part in the proceedings on that matter to declare the nature of that interest. It is expected of him as a matter of propriety to decide for himself whether by casting his vote in a division in the House on that matter, judgment is likely to be reflected from the spirit of the line of the public policy. By that the vote . . . ತಾವು ದಯಮಾಡಿ ಇದನ್ನು ಓದಿ.

MR. SPEAKER: I am ready. I have got the capacity to read. I will read it.

ಶ್ರೀ ಟಿ. ಬಿ. ಜಯಚಂದ್ರ: ಯಾವ ಸದಸ್ಯರು pecuniary interest ನಲ್ಲಿ interest ಇರುತ್ತದೋ, ಅಂತಹವರು ಸಮಿತಿಯಲ್ಲೂ ಕೂಡ ಇರುವುದಕ್ಕೆ ಸಾಧ್ಯವಿಲ್ಲ, ಅಂತಹವರು ಹೇಳಿಕೆಯನ್ನೂ ಕೂಡ ಕೊಡಲಿಕ್ಕೆ ಸಾಧ್ಯವಿಲ್ಲ. ಇದರ ಒಟ್ಟಾರೆ ತಾತ್ಪರ್ಯ ಇದು. ದಯಮಾಡಿ ಅಧ್ಯಕ್ಷರೆ....

ಅಧ್ಯಕ್ಷರು: ತಾವು ಮುಗಿಸಿ

ಶ್ರೀ ಟಿ. ಬಿ. ಜಯಚಂದ್ರ: ಏನು ಅಧ್ಯಕ್ಷರೆ, ನಾನು ಹೇಳುವುದಕ್ಕೂ ಬಿಡುವುದಿಲ್ಲ.

ಅಧ್ಯಕ್ಷರು: ನಾನು ಕೇಳುತ್ತಿದ್ದೇನೆ, ಹೇಳಿ

Sri T. B. Jayachandra: I am raising a relevant issue. ದಯಮಾಡಿ ತಾವು ಇದರ ಬಗ್ಗೆ ಯಾವ ರೀತಿಯಲ್ಲಿ ಬೇಕಾದರೂ ತೀರ್ಮಾನ ಕೊಡಿ. ಇವತ್ತು ಏಕೆ ಮಾನ್ಯ ಮುಖ್ಯಮಂತ್ರಿಗಳು ಜನಾರ್ಧನರೆಡ್ಡಿಯವರನ್ನು ಇವತ್ತು ಉತ್ತರ ಕೊಡುವುದಕ್ಕೆ ಕರೆಯುತ್ತಿದ್ದಾರೋ, ಅವರೇ. . .

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಜಿಲ್ಲಾ ಮಂತ್ರಿಗಳ ಅಧಿಕಾರ ಇರತಕ್ಕದ್ದು ನಮಗೂ ಗೊತ್ತಿದೆ.

(ಗೊಂದಲ)

Mr. Speaker: I will clear the matter. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕೆ. ಜಿ. ಕುಮಾರಸ್ವಾಮಿ: ಮಾನ್ಯ ಜನಾರ್ಧನರೆಡ್ಡಿಯವರ ಹೆಸರನ್ನು ಅವರು ನೇರವಾಗಿ ಪ್ರಸ್ತಾಪಿಸಿರುವುದರಿಂದ ಅವರು ಉತ್ತರವನ್ನು ಕೊಡುತ್ತಾರೆ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಜಿಲ್ಲಾ ಮಂತ್ರಿಗಳು ಎನ್ನುವ ಪದವನ್ನು ನಾವು ಹಾಕಿಕೊಂಡಿದ್ದೇವೆ. ಅದಕ್ಕೆ ಯಾವುದೇ ಮಾನ್ಯತೆಯೂ ಇಲ್ಲ. ಜಿಲ್ಲಾ ಮಂತ್ರಿಗಳಾದಾಕ್ಷಣ ಉತ್ತರ ಕೊಡಬೇಕೆಂದೇನೂ ಇಲ್ಲ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಅವರು ಸಂಬಂಧಪಟ್ಟ ಸಚಿವರೂ ಅಲ್ಲ. He has got direct interest. ಇವತ್ತು ಲೋಕಾಯುಕ್ತರು ಕೊಟ್ಟಿರತಕ್ಕಂಥ ವರದಿಏನಿದೆ. ವರದಿಯ ಒಟ್ಟಾರೆ ಸಾರಾಂಶ ಏನಿದೆ ಎಂದರೆ, ಇವತ್ತು ಅಕ್ರಮವಾಗಿ ಇರತಕ್ಕಂಥ ಗಣಿ ಹಗರಣ, ಅದಕ್ಕೆ ಮೂಲ ಕಾರಣರು ಎಂದರೆ, ಇವತ್ತು ಜನಾರ್ಧನರೆಡ್ಡಿಯವರಂತಹ ಒಡೆತನದ ಕಂಪೆನಿ. ಅವರು ಅದರಲ್ಲಿ ನೇರ ಪಾಲುದಾರರಾಗಿರುವುದರಿಂದ, ಅವರು ಯಾವುದೇ ಹೇಳಿಕೆಯನ್ನೂ ಕೊಡಲಿಕ್ಕೆ ಬರುವುದಿಲ್ಲ.

(ಗೊಂದಲ)

Sri S. Suresh Kumar: How can you name a Minister without giving notice.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ....ಅದನ್ನು ನಾವು ಫಾಲೋ ಮಾಡುತ್ತಿದ್ದೇನೆ. ದಯಮಾಡಿ ಇದರ ಪ್ರಕಾರ ಅವರು ಹೇಳಿಕೆ ಕೊಡತಕ್ಕಂಥ ಅವಶ್ಯಕತೆ ಇಲ್ಲ. ಇನ್ನೋಂದು ಮುಖ್ಯವಾದು ಏನೆಂದರೆ, ಮಾನ್ಯ ಜನಾರ್ಧನರೆಡ್ಡಿ ಮತ್ತು ಮಾನ್ಯ ಕರುಣಾಕರರೆಡ್ಡಿಯವರ ಮೇಲೆ ಇವತ್ತು ಈಗಾಗಲೇ ಮಾನ್ಯ ರಾಜ್ಯಪಾಲರು ಇವತ್ತು ಶಿಫಾರಸ್ಸು ಮಾಡಿ....

(ಗೊಂದಲ)

ಅಧ್ಯಕ್ಷರು: ದಾಖಲೆಗೆ ಹೋಗಬಾರದು

(ಗೊಂದಲ)

ಅಧ್ಯಕ್ಷರು: ತಾವು ಇದನ್ನು ಹೇಳಲಿಕ್ಕೆ ಅವಕಾಶವಿಲ್ಲ

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಅವರಿಗೆ ಇದರಲ್ಲಿ direct interest ಇರುವುದರಿಂದ ಅವರಿಗೆ ಹೇಳಿಕೆ ಕೊಡಲು ತಾವು ಅವಕಾಶ ನೀಡಬಾರದು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಕೌಲ್ ಅಂಡ್ ಶಕ್ದರ್ is an authority. ಆದರೆ ಅದನ್ನು ನೀವು quote ಮಾಡುವುದು ಬೇಡ ಎನ್ನುತ್ತೀರಿ.

ಅಧ್ಯಕ್ಷರು: ನಾನು ಬೇಡ ಎಂದು ಹೇಳಲಿಲ್ಲ.

(ಗೊಂದಲ)

ಅಧ್ಯಕ್ಷರು: [ಗೊಂದಲ] ಈಗ confusion ಬೇಡ, ನಾನು ಇದ್ದ ವಿಚಾರದ ಬಗ್ಗೆ ಹೇಳುತ್ತೇನೆ, ಈಗ ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, I will give decision. ಈಗ ಅವರೇನು ಹೇಳಿದ್ದಾರೆ ನಾನು ಕೇಳಿದ್ದೇನೆ, ಈಗ ಕಾನೂನು ಮಂತ್ರಿಗಳು ಹೇಳಿದ್ದನ್ನು ಕೇಳುತ್ತೇನೆ . . . [ಗೊಂದಲ]

Sri Siddaramaiah: Please, I may be allowed to ask.

ಅಧ್ಯಕ್ಷರು: ನೋ, ಅವರು ಪಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, on the question of point of order, I will give decision. ಈಗಲೇ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಪಾಯಿಂಟ್ ಆಫ್ ಆರ್ಡರ್ ಮೇಲೆ ಡಿಸಿಷನ್ ಕೊಡುವುದಕ್ಕೆ I have no objection. I may be allowed to ask clarification afterwards you take any decision.

ಅಧ್ಯಕ್ಷರು: ನೀವು ಕ್ಲಾರಿಫಿಕೇಷನ್ ಕೇಳುವುದಕ್ಕಿಂತ ಮುಂಚೆ, ಮಾನ್ಯ ಜಯಚಂದ್ರರವರು ಪಾಇಂಟ್ ಆಫ್ ಆರ್ಡರ್ ಎತ್ತಿದ್ದಾರೆ, ನಾನಾಗಿ ಎತ್ತಿಲ್ಲ, after calling he raised point of order ಏತಕ್ಕೆ ಎತ್ತ ಬೇಕಿತ್ತು? When point of order is raised it is my duty to give decision. I will give.

ಶ್ರೀ ಸಿದ್ದರಾಮಯ್ಯ: ರೂಲಿಂಗ್ ಯಾವಾಗ ಕೊಡುತ್ತೀರಿ?

ಅಧ್ಯಕ್ಷರು: ಅವರನ್ನು ಕೇಳಿ ಈಗಲೇ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಅವರನ್ನು ಏತಕ್ಕೆ ಕೇಳುವುದಕ್ಕೆ ಹೋಗುತ್ತೀರಿ?

MR. SPEAKER: When he has raised point of order. . . [ಗೊಂದಲ]

ಶ್ರೀ ಸಿದ್ದರಾಮಯ್ಯ: ನಾನು ಈ ರೀತಿ ಅಸೆಂಬ್ಲಿ ನಡೆಯುವುದನ್ನು ನೋಡಿಲ್ಲ . . . [ಗೊಂದಲ]

ಶ್ರೀ ಎಸ್. ಸುರೇಶ್ ಕುಮಾರ್: ಹಿರಿಯ ಸದಸ್ಯರಾದ ಜಯಚಂದ್ರರವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, he has raised a point of order. ಆ ಪಾಯಿಂಟ್ ಆಫ್ ಆರ್ಡರ್ ಏನೆಂದರೆ, [ಗೊಂದಲ]

ಶ್ರೀ ಟಿ. ಬಿ. ಜಯಚಂದ್ರ: ನಾನು ಕೌಲ್ ಅಂಡ್ ಶಕ್ದರ್ ಅನ್ನು ಕೋಟ್ ಮಾಡಿದ್ದೇನೆ, ದಯಮಾಡಿ, ನಮಗೆ ಮಾರ್ಗದರ್ಶನ ಮಾಡಿ.

ಅಧ್ಯಕ್ಷರು: ಕೌಲ್ ಅಂಡ್ ಶಕ್ದರ್ ಬಗ್ಗೆ ಬಹಳ ಹೇಳಿದ್ದೀರಿ, ಅದನ್ನು ಅನುಸರಿಸಿಯೇ ನಾನು ತೀರ್ಮಾನವನ್ನು ಕೊಡುತ್ತೇನೆ, ಸರ್ಕಾರವನ್ನೂ ನಾನು ಕೇಳಬೇಕು, ಕೊಡಬೇಕಲ್ಲ, ನಿಮ್ಮ ಪರ್ಮಿಷನ್

ಕೇಳಿ ಕೊಡಬೇಕೆಂದು ಏನಾದರೂ ಇದೆಯೇ? You cannot force me like that You cannot. No on what point you are raising? No. [ಗೊಂದಲ]

ಶ್ರೀ ಎಂ. ಬಿ. ಪಾಟೀಲ್: ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ, ಇಲ್ಲೇ ಆಗಿರುವ ಒಂದು ಪ್ರಿಸಿಡೆಂಟ್ ಅನ್ನು ಹೇಳುತ್ತಿದ್ದೇನೆ . . . [ಗೊಂದಲ]

ಅಧ್ಯಕ್ಷರು: ಅವಕಾಶ ಕೊಡುವುದಿಲ್ಲ, ಹೇಳಿದರೂ ಕೇಳುವುದಿಲ್ಲ, ದಾಖಲೆಗೆ ಹೋಗಬಾರದಷ್ಟೆ . . . [ಗೊಂದಲ]

ಶ್ರೀ ಎಸ್. ಸುರೇಶ್ ಕುಮಾರ್: ಜಯಚಂದ್ರರವರು, ಅವರು ಜಿಲ್ಲಾ ಮಂತ್ರಿಗಳಿರಬಹುದು, ಇದರಲ್ಲಿ ಅವರದೇನೂ ಪಾತ್ರವಿಲ್ಲ, ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ಒಂದು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಕಳೆದ ಒಂದು ವಾರದಿಂದ ಇಲ್ಲಿ ಚರ್ಚೆಗಳಾಗಿರುವ ಹಿನ್ನೆಲೆಯಲ್ಲಿ, ಇಂಗ್ಲೀಷ್‌ನಲ್ಲಿ, "needle of suspicion" ಎಂದು ಒಂದು ಪದವಿದೆ. Needle of suspicion ತಿರುಗುತ್ತಿರುವುದು ಈ ಸದಸ್ಯರ ಕಡೆ [ಜನಾರ್ಧನ ರೆಡ್ಡಿ] ಈಗ ನೇರವಾಗಿ ಅವರ ಹೆಸರನ್ನು ಹೇಳಿಯು ಬಿಟ್ಟರು, ಕರುಣಾಕರ ರೆಡ್ಡಿಯವರ ಹೆಸರನ್ನು ಹೇಳಿಬಿಟ್ಟರು. ಒಂದು ನ್ಯಾಚ್ಯುಲರ್ ಜಸ್ಟೀಸ್ ಇದೆ, ಈ ರೀತಿ ಬರೀ ಹೇಳಿಸಿಕೊಳ್ಳುವುದಲ್ಲ, ನನ್ನದೇನು ರೋಲ್, ಅಲ್ಲಿ ಅಕ್ಚುವಲಿ ಏನಾಗುತ್ತಿದೆಂದು ತಿಳಿಸುವುದಕ್ಕೆ ಅವರಿಗೆ ಒಂದು ಹಕ್ಕಿದೆ It is natural justice. ಎರಡನೆಯದು, ಇವತ್ತು ರೂಲ್ 69ರಡಿಯಲ್ಲಿ ಈ ಪ್ರಸ್ತಾವನೆ ಬಂದಿರುವುದು. 69ರಲ್ಲಿ ಚರ್ಚೆ ನಡೆಸಲು ಸೂಚನೆ ಕೊಡುವುದಿದೆ, ಆಮೇಲೆ 71ರಲ್ಲಿ, ಸದನದ ಮುಂದೆ ಯಾವುದೇ ವಿಧ್ಯುಕ್ತ ಪ್ರಸ್ತಾಪವನ್ನು ಮಾಡಿಸಬಾರದು ಅಥವಾ ಅದನ್ನು ಮತಕ್ಕೆ ಹಾಕಬಾರದು.

ಸೂಚನೆಯನ್ನು ಕೊಟ್ಟಿರುವ ಸದಸ್ಯರು, ಒಂದು ಹೇಳಿಕೆಯನ್ನು ನೀಡಬಹುದು ಮತ್ತು ಮಂತ್ರಿಗಳು ಉತ್ತರ ನೀಡಬೇಕೆಂದಿದೆ. ಮಂತ್ರಿಗಳೆಂದು ಇರುವುದರಿಂದ Please allow Mr. Janardana Reddy to reply ಏಕೆಂದರೆ, ಒಂದು ವಾರದಿಂದ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಎಷ್ಟು ಗುದ್ದಿಸಬೇಕೋ ಅಷ್ಟು ಗುದ್ದಿಸಿದ್ದೀರಿ, let him give . . .

ಶ್ರೀ ಸಿದ್ದರಾಮಯ್ಯ: ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ, ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಟ್ಟ ಮೇಲೆ ಇನ್ನೊಬ್ಬ ಮಂತ್ರಿಗಳು ಎದ್ದು ಉತ್ತರ ಕೊಡಬಹುದೆಂದು ಇದೆಯಾ ಅಲ್ಲಿ? . . . [ಗೊಂದಲ]

Sri S. Suresh Kumar: Natural justice requires his version.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, Rule 71 is very clear. There shall be no formal motion before the house nor voting. The member who has given notice may make a short statement and the Minister shall reply shortly.

ಶ್ರೀ ಎಸ್. ಸುರೇಶ್ ಕುಮಾರ್: ನಾನು ಕನ್ನಡ ಓದುತ್ತಿದ್ದೇನೆ. ಸ್ವಾಮಿ, ಮಂತ್ರಿಗಳು.

ಶ್ರೀ ಸಿದ್ದರಾಮಯ್ಯ: ಮಿನಿಷ್ಟರ್, ಇದೇನಿದು, ಇದನ್ನು ನಾವೇ ಮಾಡಿಕೊಂಡಿರುವುದು.

ಶ್ರೀ ಎಸ್. ಸುರೇಶ್ ಕುಮಾರ್: ಕನ್ನಡದಲ್ಲಿ ಏನಿದು, ಕನ್ನಡ ಆಡಳಿತ ಭಾಷೆ ಎಂದು ನಾವೇ ಮಾಡಿಕೊಂಡಿರುವುದು . . .

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಯಾವುದಾದರೇನು, ಇಂಗ್ಲೀಷ್ ಓದಬೇಡಿ, ಕನ್ನಡ ಓದಿ ಎಂದು ಹೇಳುವುದು This is not the way in parliamentary procedure. ಇದ್ಯಾವುದು ಸರ್

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಒಂದು ನ್ಯಾಚ್ಯುರಲ್ ಜಸ್ಟೀಸ್ ಇದೆ, ಜಯಚಂದ್ರರವರು ಸ್ಪೆಸಿಫಿಕ್ ಆಗಿ ಜನಾರ್ಧನ ರೆಡ್ಡಿಯವರ, ಕರುಣಾಕರ ರೆಡ್ಡಿಯವರ ಹೆಸರನ್ನು ಹೇಳಿದ್ದಾರೆ, ರಾಜ್ಯಪಾಲರಿಂದ ನೋಟೀಸ್ ಬಂದಿರುವುದನ್ನು ಹೇಳಿದ್ದಾರೆ, he has a right to clarify, he has a right to state his view.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ರೂಲ್‌ನಲ್ಲಿ ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ ಇಲ್ಲಿರುವ ಬೇರೆ ಮಂತ್ರಿಗಳೆಲ್ಲಾ ಉತ್ತರ ಕೊಡಬೇಕೆಂದಿಲ್ಲ. ನಾನು ಕ್ಲಾರಿಫಿಕೇಷನ್ ಕೇಳುತ್ತೇನೆ, ಕನ್ನಡದಲ್ಲಿ ಗೌರವವಾಗಿ ಕರೆಯುವುದು ಮಂತ್ರಿಗಳೆಂದು, ಕನ್ನಡದಲ್ಲಿ ಮಂತ್ರಿ ಎಂದು ನಾವು ಬರೆಯುವುದಿಲ್ಲ . . . [ಗೊಂದಲ]

ಶ್ರೀ ಬಸವರಾಜ ಬೊಮ್ಮಾಯಿ (ಭಾರಿ ನೀರಾವರಿ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ಮೇಲೆ ರೂಲಿಂಗ್ ಕೊಡಿ.

ಅಧ್ಯಕ್ಷರು: ಈಗ ಪಾಯಿಂಟ್ ಆಫ್ ಆರ್ಡರ್ ಮೇಲೆ ಡಿಸಿಷನ್ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾನು ಕ್ಲಾರಿಫಿಕೇಷನ್ ಕೇಳುತ್ತೇನೆ ಆಮೇಲೆ ರೂಲಿಂಗ್ ಕೊಡಿ.

ಅಧ್ಯಕ್ಷರು: ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದು ಅವರ point of orderಗೆ ನಾನು ಡಿಸಿಷನ್ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಈಗಲೇ ಕೊಡುತ್ತೀರಾ?

ಅಧ್ಯಕ್ಷರು: ಈಗಲೇ ಕೊಡುತ್ತೇನೆ

ಶ್ರೀ ಸಿದ್ದರಾಮಯ್ಯ: ಕೊಡಿ No. Problem

ಅಧ್ಯಕ್ಷರು: ಜಯಚಂದ್ರರವರೆ, ನಿಮ್ಮ ಪಾಯಿಂಟ್ ಆಫ್ ಆರ್ಡರ್‌ಗೆ ಆರ್ಗ್ಯುಮೆಂಟ್ ಆಯಿತಾ? Have you still got argument?

ಶ್ರೀ ಟಿ. ಬಿ. ಜಯಚಂದ್ರ: ನಾನು ಮೋಷನ್ ಮೂವ್ ಮಾಡುತ್ತಿಲ್ಲಾ...

ಅಧ್ಯಕ್ಷರು: ನನ್ನ ಪ್ರಶ್ನೆಯನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ have you finished your argument on point of order?

Sri T. B. Jayachandra: He has got direct pecuniary interest. It has been proved [ಗೊಂದಲ]

MR. SPEAKER: That is different. ನೀವು ವಿಷಯಾಂತರ ಮಾಡಬೇಡಿ, yo have raised a point of order under page 333 of Kaul and Shakdar's . . . [ಗೊಂದಲ] why has he raised? Unnecesarily raising, making the issue complicated No. ನಾನು ಬಿಡುವುದಿಲ್ಲ. Nothing should go on record. No.

(ಗೊಂದಲ)

Sri T. B. Jayachandra: It is a bad precedent. ದಯಮಾಡಿ ಆ ತಪ್ಪು ಆಗುವುದು ಬೇಡ.

ಅಧ್ಯಕ್ಷರು: ತಪ್ಪಿಗೆ ಕಾರಣಕರ್ತರು ಯಾರೆಂದು ನಾನೇ ಹೇಳಬೇಕಾಗುತ್ತದೆ, ಈ ಎಲ್ಲಾ ತಪ್ಪಿಗೆ ಕಾರಣಕರ್ತರು ನೀವೇ, you are responsible. Unnecessarily raising without knowing the rules. You are responsible, I have to say. Yes. You do not know how to raise a point of order. No, then why this book? You cannot say without quoting the rule, you read out simply. You cannot unnecessarily make the issue complicated. What is the procedure? Procedure is laid down in this book. [ಗೊಂದಲ]

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ದಯವಿಟ್ಟು, ಕೌಲ್ ಅಂಡ್ ಶಕ್ದರ್ ಓದಿ ರೂಲಿಂಗ್ ಕೊಡಿ, ನಾವೇನು ಹೇಳಿದ್ದಕ್ಕೆ ಕುರ್ಚಿಯಿಂದ ಕ್ಲಾರಿಫಿಕೇಷನ್ ಕೇಳುವುದಿಲ್ಲವೆಂದು ತಾವು ಹೇಳಿದರೆ ಹೇಗೆ?

ಅಧ್ಯಕ್ಷರು: ನಾನು ಇದುವರೆವಿಗೂ ಕೇಳಿದ್ದೇನಲ್ಲಾ, ಇನ್ನೂ ಎಷ್ಟು ಹೊತ್ತು ಕೇಳಬೇಕು, ಆಯಿತು ನೀವು ಹೇಳಿ, ಅದಕ್ಕೆ, ತಮ್ಮ ವಾದ ಮುಗಿಯಿತಾ ಎಂದು ನಾನು ಕೇಳುತ್ತಿದ್ದೇನೆ, ಆಯಿತು ಇನ್ನು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ: ದಯಮಾಡಿ, ಕೌಲ್ ಅಂಡ್ ಶಕ್ದರ್ ಮೇಲೆ ರೂಲಿಂಗ್ ಕೊಡಿ...

(ಗೊಂದಲ)

ಅಧ್ಯಕ್ಷರು: ವಾದ ಮುಗಿಯಿತಾ, ರೂಲಿಂಗ್ ಕೊಡಬಹುದಾ...

(ಗೊಂದಲ)

ಶ್ರೀ ಎಂ.ಬಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಮಾತನಾಡಲು ಅವಕಾಶ ಕೊಡಿ, ಒಂದು ಪ್ರಿಸಿಡೆಂಡ್ ಈ ಸದನದಲ್ಲಾಗಿರುವುದನ್ನು ಹೇಳುತ್ತೇನೆ.

ಅಧ್ಯಕ್ಷರು: ದಯವಿಟ್ಟು, ನೀವು ಮಾತನಾಡುವಂತಿಲ್ಲ.

ಶ್ರೀ ಸಿದ್ದರಾಮಯ್ಯ: ಅವರು ಮಾತನಾಡುವುದಕ್ಕೆ ಒಂದು ನಿಮಿಷ ಕಾಲಾವಕಾಶ ಕೊಡಿ.

ಅಧ್ಯಕ್ಷರು: ಅವರೇನು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿಲ್ಲ, No. I said no. ಜಯಚಂದ್ರರವರೆ, ಈಗ ತಮ್ಮ ವಾದ ಮುಗಿಯಿತಾ?

(ಗೊಂದಲ)

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ಉಪ ನಾಯಕರಾದ ಜಯಚಂದ್ರರವರು... ನನಗೂ ಮಾತನಾಡುವುಕ್ಕೆ ಅವಕಾಶ ಕೊಡಿ.

ಶ್ರೀ ಸಿದ್ದರಾಮಯ್ಯ: You have every right. ನಮ್ಮ ಕಾನೂನು ಸಚಿವರಾದ ಮಾನ್ಯ ಸುರೇಶ್‌ಕುಮಾರ್‌ರವರು ರೂಲ್ 71 ಅನ್ನು ಕೋಟ್ ಮಾಡಿದ್ದಾರೆ. ಯಾವುದೇ ವಿದ್ಯುಕ್ತ ಪ್ರಸ್ತಾವವನ್ನು ಮಂಡಿಸಬಾರದು ಎಂದು ರೂಲ್ 71 ನ್ನು ಕೋಟ್ ಮಾಡಿದ್ದಾರೆ. ಸದನದ ಮುಂದೆ ಯಾವುದೇ ವಿದ್ಯುಕ್ತ ಪ್ರಸ್ತಾವವನ್ನು ಮಂಡಿಸಬಾರದು ಅಥವಾ ಮತಕ್ಕೆ ಹಾಕಬಾರದು ಎಂದು ಹೇಳಿ, ಸೂಚನೆಯನ್ನು ಕೊಟ್ಟಿರುವ ಸದಸ್ಯರು ಗಮನಿಸಬೇಕು ಇದು ನಿಯಮ 69ಕ್ಕೆ ಸೀಮಿತವಾದುದು. ರೂಲ್ 69ಗೆ ಇದು ರೆಫರ್ ಆಗತಕ್ಕಂಥದ್ದು. ಸೂಚನೆಯನ್ನು ಕೊಟ್ಟಿರುವ ಸದಸ್ಯರು ಒಂದು ಸಂಕ್ಷಿಪ್ತ ಹೇಳಿಕೆಯನ್ನು ನೀಡಬಹುದು, ಮಂತ್ರಿಗಳು ಸಂಕ್ಷಿಪ್ತವಾಗಿ ಉತ್ತರವನ್ನು ನೀಡಬಹುದು ಮಂತ್ರಿಗಳು ಎಂದರೆ, ಸಂಬಂಧಪಟ್ಟ ಇಲಾಖೆಯ ಮಂತ್ರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನೀವು ಏನಾದರೂ ಹೇಳಿಕೊಳ್ಳಿ. ನೀವು ಹೇಳಿದಿರಲ್ಲಾ ಕುಳಿತುಕೊಳ್ಳಿ It is my interpretation. That is what I understood. ಹಾಗಾದರೆ ಎಲ್ಲಾ 33 ಜನ ಮಂತ್ರಿಗಳು ಎದ್ದು ಉತ್ತರ ಕೊಟ್ಟು ಬಿಡುತ್ತೀರಾ? ಮಂತ್ರಿಗಳು ಎಂದರೆ, ಯಾವ ಇಲಾಖೆ ಮೇಲೆ ಪ್ರಸ್ತಾವ ತಂದಿರುತ್ತೇವೆ, ಆ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಬೇಕು, that is the meaning.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಆಪಾದನೆ ಹೊತ್ತಿರುವ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ: ಅವರು ಆಪಾದನೆ ಹೊತ್ತಿದ್ದಾರಾ?

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು: ಹೌದು, ಅವರು ಆಪಾದನೆ ಮಾಡಿದ್ದಾರೆ. ರೀ ಜನಾರ್ಧನ ರೆಡ್ಡಿಯವರೇ, ಆಪಾದನೆ ಮಾಡಲಿಲ್ಲವಾ ನಿಮ್ಮ ಮೇಲೆ. ಆಪಾದನೆ ಮಾಡಿದ್ದೀರಿ. ಆಪಾದನೆ ಮಾಡಿರುವುದಕ್ಕೋಸ್ಕರ ಅವರು ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ: Accused ಎಂದು ಅವರು ಹೇಳುತ್ತಾರೆ ನಾನಲ್ಲ.

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು: ಆಫಾದನೆ ಮಾಡಿರುವುದಕ್ಕೋಸ್ಕರ ಅವರು clarification ಕೊಡುತ್ತಿದ್ದಾರೆ.

ಅಧ್ಯಕ್ಷರು: ಮಾನ್ಯ ಜಯಚಂದ್ರರವರು ರೈಸ್ ಮಾಡಿದ್ದಕ್ಕೆ ನಾನು ರೂಲಿಂಗ್ ಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ: ಅಧ್ಯಕ್ಷರೆ, ನಿಮ್ಮ ಕಾಲದಲ್ಲಿ ಹೊಸ ಹೊಸ ಸಂಪ್ರದಾಯಗಳು ಬರುವುದು ಬೇಡ.

ಅಧ್ಯಕ್ಷರು: ಹೊಸ ಸಂಪ್ರದಾಯಕ್ಕೆ ನಾನು ಕಾರಣಕರ್ತ ಅಲ್ಲ.

ಶ್ರೀ ಸಿದ್ದರಾಮಯ್ಯ: Rule 71 is very clear.

ಅಧ್ಯಕ್ಷರು: ಅವರು ರೈಸ್ ಮಾಡಿದ್ದು ಬೇರೆ, ತಾವು ರೈಸ್ ಮಾಡಿದ್ದು ಬೇರೆ. ಒಬ್ಬರು ರೈಸ್ ಮಾಡಿದ್ದಕ್ಕೆ ರೂಲಿಂಗ್ ಕೊಡದೆ....

Sri. Siddaramaiah: Parliamentary Affairs Minister quote ಮಾಡಿದ್ದು ನಾನಲ್ಲ. ರೂಲ್ 71 ಕೋಟ್ ಮಾಡಿದ್ದು.

ಅಧ್ಯಕ್ಷರು: ಅವರ ಪಾಯಿಂಟ್ ಆಫ್ ಆರ್ಡರ್‌ಗೆ clarification.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: Under 349...

(ಗೊಂದಲ)

MR. SPEAKER: Under 349 your point of order, you tell me the rule. ಒಂದು ಸಾರಿ 349 ಹೇಳುತ್ತೀರಿ... ಒಂದು ಸಾರಿ 350 ಎಂದು ಹೇಳುತ್ತೀರಿ ಮಾನ್ಯ ಜಯಚಂದ್ರರವರೇ, ತಾವು ಸ್ಪಷ್ಟವಾಗಿ ಹೇಳಿ ಒಂದು ಸಾರಿ ಕೌಲ್ ಅಂಡ್ ಶಕ್ದರ್ ಹೇಳುತ್ತೀರಿ, ಒಂದು ಸಾರಿ 349 ಎಂದು ಹೇಳುತ್ತೀರಿ, ಒಂದು ಸಾರಿ 350 ಹೇಳುತ್ತೀರಿ, how can I, you specific on a particular point. ನೀವು ವಕೀಲರಾಗಿದ್ದವರು, ಈ ರೀತಿ ಹೇಳಿದರೆ how to give ruling ಇದು ಸರಿಯಲ್ಲ. you are the senior most Member of this House. How can you say, under what rule?

Sri T.B. Jayachandar: My point of order is udnder Rule 350.

ಅಧ್ಯಕ್ಷರು: ಈಗ 350 ಎಂದು ಹೇಳುತ್ತೀರಿ, your point of order is under rule 350, you leave koul and Shekdar then.

ಶ್ರೀ ಟಿ.ಬಿ. ಜಯಚಂದ್ರ: ಏನ್ ಸ್ವಾಮಿ ಹೀಗೆ ಹೇಳಿದರೆ, in supporting rule 350

ಅಧ್ಯಕ್ಷರು: Your substantiate, ಪಾಯಿಂಟ್ ಆಫ್ ಆರ್ಡರ್ ಒಬ್ಬರಿಗೆ, ಪಾಯಿಂಟ್ ಆಫ್ ಆರ್ಡರ್ ಎಲ್ಲರಿಗೂ ಹೇಳುವುದಕ್ಕೆ ಅವಕಾಶವಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ರೂಲ್ 350 ರಲ್ಲಿ ಯಾವ ಸಂದರ್ಭದಲ್ಲಿ ನಾನು ಪಾಯಿಂಟ್ ಆಫ್ ಆರ್ಡರ್ ಮಾಡುವುದಕಾಗುವುದಿಲ್ಲ ಎಂದು ಹೇಳಿದೆ. Point of order is not a point of privilege. ನಾನು ಪ್ರಿವಿಲೇಜ್ ಕೇಳುತ್ತಿಲ್ಲ ಅಲ್ಲಿ.

MR. SPEAKER: ನನ್ನ ಪ್ರಶ್ನೆ your point of order is under Rule 350.

Sri. T.B. Jayachandra: I am quoting this as supporting evidence.

ಅಧ್ಯಕ್ಷರು: ಅದನ್ನು ಮೊದಲೇ ಹೇಳಿದ್ದರೆ ಇಷ್ಟೆಲ್ಲಾ argument ಆಗುತ್ತಿರಲಿಲ್ಲ. ಇದನ್ನು ಮೊದಲೇ ಹೇಳಬಹುದಿತ್ತು.

ಶ್ರೀ ಟಿ.ಬಿ. ಜಯಚಂದ್ರ: ನಾನು ಹೇಳಿದರೆ ನೀವು ಕೇಳುವುದೇ ಇಲ್ಲ.

ಶ್ರೀ ಆರ್. ಅಶೋಕ್: ಇದನ್ನು ಮೊದಲೇ ಹೇಳಿದರೆ ಇಷ್ಟೊಂದು ಸಮಯ ಉಳಿಯುತ್ತಿತ್ತು.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, Point of Order ನ ನಾನು ಅನಗತ್ಯವಾಗಿ ಅಥವಾ ಯಾವುದೇ ಇದರಲ್ಲಿ ಕೇಳುತ್ತಿಲ್ಲ. ರೂಲ್ 354 ರಲ್ಲಿ no debates shall be allowed on a point of under but the Speaker if he thinks can hear Member, before giving his decision. A point of order is not a point on privilege, a Member shall not raise a point of order to ask the information to explain the position. ಇದು ಎಲ್ಲವನ್ನು ಸೇರಿಸಿದಂತೆ ನಾನು ಎತ್ತಿರತಕ್ಕಂಥದ್ದು the man who is having a direct pecurriary interest in the subject to the matter of discussion. The matter before the House is under discussion, the Chief Minister has called, he has got a direct interest. Because it is proved beyond doubt that matter has gone and pending before the Election Commission. What for proof you want? Sir, Chief Minister is competent enough to replay, he has given a reply, allows to give after supplementary. Let us illicit information from the Chief Minister. ಮಾನ್ಯ ಮುಖ್ಯ ಮಂತ್ರಿಗಳಿಗೆ ಏನಾಗಿದೆ ಎಂದರೆ, ಎಲ್ಲಾ portfolio ಗಳು Forest ಇರಬಹುದು, Mines and Geology ಇರಬಹುದು, ಎಲ್ಲಾ ಇಲಾಖೆಗಳು ಅವರಿಗೇ ಬರುತ್ತವೆ. He is a Leader of this House; very prominent issue

has been raised. ಮಾನ್ಯ ಲೋಕಾಯುಕ್ತರವರ ವಿಚಾರವೂ ಇರುವುದರಿಂದ ಅವರು ಸಮರ್ಪಕವಾದ ಉತ್ತರವನ್ನು ಕೊಟ್ಟಿದ್ದಾರೆ. ಆ ಕಾರಣಕ್ಕೆ ನಾವು ಕೆಲವು clarification ಕೇಳುವುದಕ್ಕೆ ದಯಮಾಡಿ ಅವಕಾಶ ಕೊಡಿ. ಮಾನ್ಯ ಮುಖ್ಯ ಮಂತ್ರಿಗಳ ಹೊರತು ಬೇರೆ ಯಾರೂ ಉತ್ತರ ಕೊಡುವುದಕ್ಕೆ ಅವಕಾಶವಿಲ್ಲ. ಅವರ ಯಾವುದೇ ಹೇಳಿಕೆಗಳನ್ನು ಕೇಳುವುದಕ್ಕೆ ನಾವು ತಯಾರಿಲ್ಲ ಎನ್ನುವುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: Point of orderಗೆ ಬೇರೆಯವರಿಗೆ ಅವಕಾಶ ಕೊಡುವುದಿಲ್ಲ. ಅದೆಲ್ಲಾ ದಾಖಲೆಗೆ ಹೋಗಬಾರದು.

(ಗೊಂದಲ)

ಅಧ್ಯಕ್ಷರು: ನಾನು ರೂಲಿಂಗ್ ಕೊಡುತ್ತೇನೆ. ಕೊಟ್ಟ ಮೇಲೆ point of order ಏಕೆ ರೈಸ್ ಮಾಡಬೇಕು?

ಶ್ರೀ ಎಸ್. ಸುರೇಶ್ ಕುಮಾರ್: ಅವರ Point of order ಬಗ್ಗೆ ರೂಲಿಂಗ್ ಕೊಟ್ಟು ನೀವು ಮುಂದಕ್ಕೆ ಹೋಗಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಕ್ಲಾರಿಫಿಕೇಶನ್ ಕೇಳುವ ಅಧಿಕಾರ ನಮಗಿದೆ. ದಯಮಾಡಿ ನಮಗೆ ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಕೊಡಿ.

MR. SPEAKER: ಈಗ Point of Order, it is not a small thing. ಆದಕಾರಣ Point of Order riase ಮಾಡುವಾಗ ಯೋಚನೆ ಮಾಡಿ. ನಾನು I have already asked you to ask for... ಹೇಳಿದ್ದೆ. In the Meanwhile, your Deputy leader raise the Point of Order. ನಾನು ಮತ್ತೆ ಮತ್ತೆ ಕೇಳಿದೆ under

what rule raise the point of order ಎಂದು ಅವರನ್ನು ನಾನು ಕೇಳಿದೆ. ಆದರೆ he is unable to tell. unncessarily ಏಕೆ intereference?

ಶ್ರೀ ಸಿದ್ದರಾಮಯ್ಯ: ನಾನು ಕ್ಲಾರಿಫಿಕೇಶನ್ ಕೇಳುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್: ಸನ್ಮಾನ್ಯ ಜಯಚಂದ್ರರವರು ಏನು point of order raise ಮಾಡಿದ್ದಾರೆ, ಅದಕ್ಕೆ ಮಾನ್ಯ ಅಧ್ಯಕ್ಷರು ರೂಲಿಂಗ್ ಕೊಟ್ಟ ಮೇಲೆ ಕ್ಲಾರಿಫಿಕೇಶನ್ ಕೇಳಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಈ ರೀತಿಯಾದರೆ ಹೇಗೆ?

(ಗೊಂದಲ)

ಅಧ್ಯಕ್ಷರು: ನನ್ನಿಂದಾಗಿ ಈ ರೀತಿಯಾಗುತ್ತಿಲ್ಲ. ತಮ್ಮ ಉಪನಾಯಕರಿಂದಲೇ ಈ ರೀತಿಯಾಗುತ್ತಿರುವುದು. Your right is curtailed.

Sri Siddaramaiah: you pronounce your ruling after clarification.

MR. SPEAKER: That cannot be.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ,

MR. SPEAKER: I will give ruling ನಾನು ಮೊದಲು ರೂಲಿಂಗ್ ಕೊಡುತ್ತೇನೆ. ಆಮೇಲೆ ನೀವು ಏನು ಮಾತನಾಡಬೇಕೆಂದಿದ್ದೀರೋ ಮಾತನಾಡಿ

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಉತ್ತರ ಸರಿಯಿಲ್ಲ. ನಾನು ಕೊಡುತ್ತೇನೆ ಎಂದು ಹೇಳಲಿ.

MR. SPEAKER: I will abide by you. ತಾವು ಹೇಳಿದ್ದನ್ನು ನಾನು ಕೇಳಿದ್ದೇನೆ.

ಶ್ರೀ ಎಸ್. ಸುರೇಶ್‌ಕುಮಾರ್: ಮುಖ್ಯಮಂತ್ರಿಗಳು ಕೊಟ್ಟಿರುವ ಉತ್ತರ ಸರಿ ಇಲ್ಲವೆಂದು ಯಾರು ಹೇಳಿಯೇ ಇಲ್ಲ.

(ಗೊಂದಲ)

ಅಧ್ಯಕ್ಷರು: ನೋಡಿ ನಾನು ವಿರೋಧ ಪಕ್ಷದ ನಾಯಕರಾದ ತಮಗೆ ಮಾತನಾಡುವುದಕ್ಕೆ ಹೇಳಿದ್ದೆ. ಅದರ ಮಧ್ಯೆ ಈ ರೀತಿ point of order ಏಕೆ ಬೇಕಿತ್ತು? ಈಗ ನಾನು ಉಪನಾಯಕರು ಎತ್ತಿದ point of oder ಗೆ ರೂಲಿಂಗ್ ಕೊಟ್ಟ ಮೇಲೆ ತಾವು ಮಾತನಾಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಮತ್ತೆ ಏಕೆ ನೀವು point of order raise ಮಾಡಿದಿರಿ?

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, point of order raise ಮಾಡಿ ಹಾಗೆಯೇ ಓಡಿಹೋಗುವುದೆ? ಅಲ್ಲಿಯೂ hit and run case.

(ಗೊಂದಲ)

ಅಧ್ಯಕ್ಷರೆ: ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಹೇಳಿದ ಹಾಗೆ ನಿಮ್ಮ ಡಿಮ್ಯಾಂಡ್ ಪ್ರಕಾರ ನಾನು ಅವರನ್ನು ಕೂರಿಸಿ ನಂತರ ನಿಮಗೆ ಮಾತನಾಡಿ ಎಂದು ಹೇಳಿದ್ದೆ.

ಶ್ರೀ ಸಿದ್ದರಾಮಯ್ಯ: ಯಾರನ್ನು ಕೂರಿಸಿದಿರಿ?

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರೆ, ಜನಾರ್ಧನರೆಡ್ಡಿಯವರು ಮಾತನಾಡಬಾರದು. ತಾವು ಕ್ಲಾರಿಫಿಕೇಶನ್ ಕೇಳಿ ಎಂದು ನಿಮಗೆ ನಾನು ಹೇಳಿದ್ದೆ. In the meanwhile why he has raised the point of Order? ನನಗಿಂತ ಅವರು ಮತ್ತು ನೀವು ಹೆಚ್ಚು ಅನುಭವಸ್ಥರು. ತಾವು ವಕೀಲರು ಕೂಡ ಆಗಿದ್ದೀರಿ. ಇವೆಲ್ಲವನ್ನೂ ಜಯಚಂದ್ರರವರು ತಿಳಿದುಕೊಂಡಿದ್ದರೂ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ನಾನು ಅನುಮತಿ ಕೊಟ್ಟಿರುವಾಗ ಮತ್ತು ತಾವು ಮಾತನಾಡುತ್ತಿರುವಾಗ ಮಧ್ಯದಲ್ಲಿಯೇ point of order raise ಮಾಡುವುದು ಯಾವ ನ್ಯಾಯ? ಈ ರೀತಿ ಮಾಡಿದರೆ ಸಭೆಯನ್ನು ಹೇಗೆ ನಡೆಸುವುದು? ಮೊನ್ನೆ ಕೂಡ ಅದೇ ರೀತಿ ಅವರು ಮಾಡಿದರು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬಹಳ ದೀರ್ಘವಾಗಿ ಉತ್ತರವನ್ನು ಕೊಟ್ಟಿದ್ದಾರೆ. ನಾನು ಕ್ಲಾರಿಫಿಕೇಶನ್ ಕೇಳುತ್ತೇನೆ. ನಾನು ಕ್ಲಾರಿಫಿಕೇಶನ್ ಕೇಳಿದ ಮೇಳೆ if necessary, I think, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟ ಮೇಲೆ ಇನ್ನೊಬ್ಬ

ಸಚಿವರು ಉತ್ತರ ಕೊಡುವುದಕ್ಕೆ ಬರುವುದಿಲ್ಲ. ನನಗೆ ಇರತಕ್ಕಂಥ ಅನುಭವದ ಮೇಲೆ, ಇರತಕ್ಕಂಥ conventions ಮೇಲೆ, practice ಮೇಲೆ, ನನಗೆ ಗೊತ್ತಿರುವಂತೆ, ನಾನು ಕೂಡ ಕಳೆದ 28 ವರ್ಷಗಳಿಂದ ಇಲ್ಲಿ ಇದ್ದೇನೆ, ಮುಖ್ಯಮಂತ್ರಿಗಳು ಉತ್ತರ ಕೊಟ್ಟಮೇಲೆ ಬೇರೆ ಯಾವ ಸಚಿವರೂ ಕೂಡ ಎದ್ದು ನಿಂತು ಇಲ್ಲಿ ಉತ್ತರ ಕೊಡುವ ಸಂಪ್ರದಾಯವನ್ನು ನಾನು ಎಂದಿಗೂ ನೋಡಿಲ್ಲ. ಇದು ಒಂದು ವಿಚಾರ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಈ ರೀತಿ ಇವರು ನನಗೆ ಮಾತನಾಡಲು ಅಡ್ಡಿಪಡಿಸಿದರೆ ಹೇಗೆ ಹೇಳಿ?

ಅಧ್ಯಕ್ಷರು: ಪ್ಲೀಸ್, ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಕೃಷ್ಣ ಭೈರೇಗೌಡ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಈ ರೀತಿ ಎಲ್ಲರೂ ಒಟ್ಟಿಗೆ ಆ ಕಡೆಯವರು ಮಾತನಾಡಿ ಅಡ್ಡಿಪಡಿಸಿದರೆ ಹೇಗೆ ಹೇಳಿ. ಅವರಿಗಾದರೆ ಪ್ಲೀಸ್ ಎಂದು ಹೇಳುತ್ತೀರಿ. ನಮಗಾದರೆ ಬಹಳ ಖಾರವಾಗಿಯೇ ಹೇಳುತ್ತೀರಿ. ಇದು ನ್ಯಾಯವೇ? ತಮ್ಮಿಂದ ಈ ರೀತಿ ಆಗಬಾರದು.

ಶ್ರೀ ಸಿದ್ದರಾಮಯ್ಯ: ಮಾನ್ಯ, ಅಧ್ಯಕ್ಷರೆ, ನನಗೆ ಕ್ಲಾರಿಫಿಕೇಶನ್ ಕೇಳಲು ಅವಕಾಶ ಮಾಡಿಕೊಡಿ. ಆಮೇಲೆ ಜನಾರ್ಧನರೆಡ್ಡಿಯವರು ಉತ್ತರ ಕೊಡಬೇಕೆಂದರೆ ಕೊಡಲಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರ ಮಾತಿಗೂ ಮತ್ತು ಉಪ ನಾಯಕರ ಮಾತಿಗೂ ಹೊಂದಾಣಿಕೆಯೇ ಇಲ್ಲ. ಅವರೊಂದು ಹೇಳುತ್ತಾರೆ. ಇವರೊಂದು

ಹೇಳುತ್ತಾರೆ. ಅವರು ಕ್ಲಾರಿಫಿಕೇಶನ್ ಕೇಳಬೇಕೆಂದು ಹೇಳುತ್ತಾರೆ. ಇವರು Point of Order ಎನ್ನುತ್ತಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಈಗ ಮತ್ತೆ ನಾನು ನಿಮ್ಮಲ್ಲಿ ಮನವಿ ಮಾಡುತ್ತೇನೆ. ಕ್ಲಾರಿಫಿಕೇಶನ್ ಕೇಳುವುದಕ್ಕೆ ನನಗೆ ಕರೆದಿದ್ದೀರಿ. ನಾನು ಎದ್ದು ನಿಂತುಕೊಂಡಿದ್ದೆ. ಆ ಮಧ್ಯದಲ್ಲಿ Point of Order raise ಮಾಡಿದ್ದಾರೆ. ನೀವು ಅದಕ್ಕೆ ರೂಲಿಂಗ್ ಕೊಡುತ್ತೇನೆಂದು ಹೇಳುತ್ತಿದ್ದೀರಿ. ನೀವು ರೂಲಿಂಗ್ ಕೊಡಿ. ನನ್ನದೇನೂ ತಕರಾರಿಲ್ಲ. ಆದರೆ ನಾನು ಕ್ಲಾರಿಫಿಕೇಷನ್ ಕೇಳಿದ ಮೇಲೆ ತಾವು ರೂಲಿಂಗ್ ಕೊಡಿ. If you feel necessary.. ಜನಾರ್ಧನ ರೆಡ್ಡಿಯವರಿಗೂ ಮಾತನಾಡುವುದಕ್ಕೆ ಅವಕಾಶ ಕೊಡಿ. ಆಮೇಲೆ ಮುಖ್ಯಮಂತ್ರಿಗಳೂ ಕೂಡ ಉತ್ತರವನ್ನು ಕೊಟ್ಟೇ ಕೊಡುತ್ತಾರೆ. ಅಂತಿಮವಾಗಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಒಂದು ನಿಮಿಷ ಸಿದ್ದರಾಮಯ್ಯನವರೆ, ಮಾನ್ಯ ಅಧ್ಯಕ್ಷರೆ, ನಾನು ಕೂಡ ಅನೇಕ ವರ್ಷಗಳ ಕಾಲ ಪ್ರತಿಪಕ್ಷದ ಸ್ಥಾನದಲ್ಲಿ ನಿಂತು ಕೆಲಸವನ್ನು ಮಾಡಿದ್ದೇನೆ. ಉಪ ಮುಖ್ಯಮಂತ್ರಿಯಾಗಿ ಕೆಲಸವನ್ನು ಮಾಡಿದ್ದೇನೆ. ಈಗ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತು ಕೆಲಸವನ್ನು ಮಾಡುತ್ತಿದ್ದೇನೆ. ಅಷ್ಟೇ ಅನುಭವ ಹೊಂದಿರತಕ್ಕಂಥ ಹಿರಿಯರುಗಳಾದ ತಾವುಗಳು ಆ ಕಡೆ ಕುಳಿತಿದ್ದೀರಿ. ಈಗಾಗಲೇ ಆರು ದಿವಸಗಳ ಕಾಲ ಚರ್ಚೆಯಾಗಿದೆ. ಸುಧೀರ್ಘವಾದ ಚರ್ಚೆಗೆ ಸನ್ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದರಿಂದ ಅನೇಕ ವಿಷಯಗಳ ಬಗ್ಗೆ ಸದನದಲ್ಲಿ ತಾವು ಬೆಳಕನ್ನು ಚೆಲ್ಲಿದ್ದೀರಿ. ನನ್ನ ಹತ್ತಿರ ಇರುವಂಥ ಮಾಹಿತಿಗಳನ್ನು ಕೊಟ್ಟು ಈ ವ್ಯವಹಾರಗಳಿಗೆ ಮೂಲ ಕಾರಣ ಹಿಂದೆ ಅಧಿಕಾರದಲ್ಲಿದ್ದವರು

ಅವರಿಗೆ ಬೇಕಾದವರಿಗೆ ರಾಜಕೀಯದಲ್ಲಿ ಪ್ರಭಾವಿ ವ್ಯಕ್ತಿಗಳಿಗೆ ಈ ಗಣಿಗಾರಿಕೆ ಲೈಸೆನ್ಸ್ ಕೊಟ್ಟಿದ್ದರಿಂದ ಈ ದಂಧೆಗಳು ಇವತ್ತು ಮುಂದುವರೆದುಕೊಂಡು ಹೋಗುತ್ತಿದೆ. ಇದರಲ್ಲಿ ಆ ಪಾರ್ಟಿ ಈ ಪಾರ್ಟಿ ಎಂದೇನೂ ಇಲ್ಲ. ಯಾರು ಯಾರಿಗೆ ಲೈಸೆನ್ಸ್ ಕೊಟ್ಟಿದ್ದಾರೋ ಅದೆಲ್ಲ ವಿವರವನ್ನು ನಾನು ಕೊಡುತ್ತೇನೆಂದು ಮೊದಲನೆಯದಾಗಿ ನಾನು ಹೇಳಿದೆ. ಇನ್ನು ಎರಡನೆಯದಾಗಿ ಸನ್ಮಾನ್ಯ ಪ್ರತಿ ಪಕ್ಷದ ನಾಯಕರೆ, ಏನು ಚರ್ಚೆಯಾಗುತ್ತಿದೆ? ಅವರೊಬ್ಬರು ಗೌರವಾನ್ವಿತ ಸಚಿವರು, ತಾವೆಲ್ಲರೂ ನೂರು ಬಾರಿ ಬಳ್ಳಾರಿ ಹೆಸರನ್ನು ಹೇಳಿದ್ದೀರಿ. ಈಗತಾನೆ ಜಯಚಂದ್ರರವರು ರಾಜ್ಯಪಾಲರ ಹೆಸರನ್ನು ಹೇಳಿ ಅನಗತ್ಯವಾಗಿ ಅವರ ಹೆಸರನ್ನು ಇಲ್ಲಿ ತಂದರು. ಇಂತ ಒಂದು ಸಂದರ್ಭದಲ್ಲಿ ನೀವು ಏನೇ ಕ್ಲಾರಿಫಿಕೇಶನ್ ಕೇಳಿದರೂ ನಾನು ಉತ್ತರ ಕೊಡುವುದಕ್ಕೆ ನಾನು ಸಿದ್ಧನಿದ್ದೇನೆಂದು ಪ್ರಾರಂಭದಲ್ಲಿಯೇ ನಿಮಗೆ ಹೇಳಿದ್ದೇನೆ. ಹಿಂದೆ ಅನೇಕ ಬಾರಿ ಚರ್ಚೆಗಳಾಗಿವೆ. ಇವತ್ತು ನಾನು ಭಾಷಣ ಪೂರ್ಣ ಮಾಡುವುದಕ್ಕೆ ಮುಂಚೆ, ಮಾನ್ಯ ಸಚಿವರು ಪ್ರಾರಂಭದಲ್ಲಿಯೇ ಮಾತನಾಡಬೇಕೆಂದಿದ್ದರು ಸಿದ್ದರಾಮಣ್ಣನವರು. ಆದರೆ ಸನ್ಮಾನ್ಯ ಅಧ್ಯಕ್ಷರೆ, ನನಗೇನೋ ಇವರ ನಡೆವಳಿಕೆಯ ರೀತಿಯನ್ನು ನೋಡಿದಾಗ, ನಾನು ಇವತ್ತೇನು ಶಾಂತವಾಗಿ ಬಂದು ಕುಳಿತೆನೆಂದರೆ, ಹೇಗಾದರೂ ಮಾಡಿ ಯಡಿಯೂರಪ್ಪ ಉತ್ತರ ಕೊಡಬಾರದು...

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇಷ್ಟು ಹೊತ್ತು ನಿಮ್ಮ ಮಾತುಗಳನ್ನು ಕೇಳುತ್ತಿಲ್ಲವೆ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಕರೆದಿದ್ದೀರಿ. ನನ್ನ ಮಾತುಗಳನ್ನು ಪೂರ್ಣ

ಮಾಡುವುದಕ್ಕೂ ಇವರು ಬಿಡದಿದ್ದರೆ ಹೇಗೆ ಸಾರ್? ಮಾನ್ಯ ಅಧ್ಯಕ್ಷರೆ, ಎರಡು ವಿಷಯಗಳಿವೆ. ಅವರು point of Order raise ಮಾಡಿದ್ದಾರೆ. ಅದಕ್ಕೇ ತಾವು ಏನು ರೂಲಿಂಗ್ ಕೊಡುತ್ತೀರೋ ಕೊಡಿ. ಇವತ್ತು ಜಯಚಂದ್ರರವರು ಮಾತನಾಡುವಾಗ ಜನಾರ್ಧನರೆಡ್ಡಿ, ಕರುಣಾರೆಡ್ಡಿಯವರ ಹೆಸರುಗಳನ್ನು ಅನಗತ್ಯವಾಗಿ ಹೇಳಿದ್ದಾರೆ. ಬಳ್ಳಾರಿ ಬಳ್ಳಾರಿ ಎಂದು ನೂರು ಬಾರಿ ಹೇಳಿ ಮಾತಾಡಿದ ಮೇಲೆ ಜಿಲ್ಲಾ ಉಸ್ತುವಾರಿ ಸಚಿವರಾಗಿ, ಬಳ್ಳಾರಿಯವರಾಗಿ, ಸಚಿವ ಸಂಪುಟದ ಒಬ್ಬ ಸಹೋದ್ಯೋಗಿಯಾಗಿ ನೀವೇನು ಕೆಲವು ಮಾಹಿತಿಗಳನ್ನು ಕೇಳಿದ್ದೀರಿ, ಕ್ಲಾರಿಫಿಕೇಷನ್ ರೂಪದಲ್ಲಿ ಅದಕ್ಕೆ ಅವರು ಮಾಹಿತಿಗಳನ್ನು ಕೊಡಲಿ ಬಿಡಿ.

(ಗೊಂದಲ)

ಶ್ರೀ ಯಡಿಯೂರಪ್ಪ: ಅಲ್ಟಿಮೇಟ್ ಆಗಿ ಸನ್ಮಾನ್ಯ ಅಧ್ಯಕ್ಷರೆ, ನೀವು ಆ ಸ್ಥಾನದಲ್ಲಿ ಕುಳಿತಿದ್ದೀರಿ. ನಮ್ಮ ಅವಗಾಹನೆಗಳನ್ನು ಕೇಳಿದ್ದೀರಿ. ನಿಮಗೆ Point of Order ಅನ್ನು ತಳ್ಳಿಹಾಕಿ ಜನಾರ್ಧನರೆಡ್ಡಿಯವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಅನ್ನಿಸಿದರೆ ಅವರಿಗೆ ಮಾತನಾಡಲು ಅವಕಾಶ ಕೊಡಿ. ಇಲ್ಲವೆಂದರೆ ನನ್ನ ಭಾಷಣ ಪೂರ್ಣ ಮಾಡುವುದಕ್ಕೆ ಅವಕಾಶ ಕೊಟ್ಟು ನಂತರವಾದರೂ ಅವರಿಗೆ ಮಾತನಾಡಲು ಅವಕಾಶ ಕೊಡಿ. ಕ್ಲಾರಿಫಿಕೇಷನ್ ಕೊಡುವುದು ಯಾವಾಗೆಂದರೆ ಜನಾರ್ಧನರೆಡ್ಡಿಯವರು ಪೂರ್ಣ ಅವರು ಮಾತನಾಡಲಿ. ಅವರಿಗೆ ವಿರೋಧ ಪಕ್ಷದ ಕಡೆಯವರು ಏನೇನು ಚುಚ್ಚಿ ಚುಚ್ಚಿ ಮಾತನಾಡಿದ್ದಾರೆ. ಅನಗತ್ಯವಾಗಿ ಅವರ ಹೆಸರುಗಳನ್ನು ತಂದ್ದಾರೆ. ಆದುದರಿಂದ ಅದಕ್ಕೆ ಕ್ಲಾರಿಫಿಕೇಷನ್ ಕೊಡುವುದಕ್ಕೆ ಮುಂಚೆ, ಅವರು ಮಾತನಾಡುವುದಕ್ಕೆ ಮುಂಚೆ ಕ್ಲಾರಿಫಿಕೇಷನ್ ಪ್ರಶ್ನೆ ಬರುವುದಿಲ್ಲ. ಕ್ಲಾರಿಫಿಕೇಷನ್ ಯಾವಾಗ? ಭಾಷಣ ಮುಗಿದ ಮೇಲೆ ಸನ್ಮಾನ್ಯ ಅಧ್ಯಕ್ಷರೆ.

2.00 pm

ಮಾನ್ಯ ಅಧ್ಯಕ್ಷರೆ, ನನ್ನ ಭಾಷಣ ಮುಗಿದಿಲ್ಲ. ಈ ಮಧ್ಯದಲ್ಲಿ ಅವರ ಹೆಸರುಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಜನಾರ್ಧನರೆಡ್ಡಿಯವರು ಮಾತನಾಡಿದರೆ ನೀವು ಕಳೆದುಕೊಳ್ಳುವುದು ಏನಿದೆ? ಒಬ್ಬ ಗೌರವಾನ್ವಿತ ಸಚಿವರಾಗಿ ಅವರು ಮಾತನಾಡಿದರೆ ತಪ್ಪೇನಿದೆ? ದಯಮಾಡಿ ನೀವು ರೂಲಿಂಗ್ ಕೊಡಿ.

Sri. Siddaramaiah: If he has not completed his speech, let the Chief Minister to complete his speech, we will listen. Afterwards please allow me to ask clarifications.

ಅಧ್ಯಕ್ಷರು: ಈಗ ಮಾನ್ಯ ಮುಖ್ಯಮಂತ್ರಿಯವರು ನಿಯಮ 69ರ ಅಡಿ ಚರ್ಚೆಯಾದನಂತರ ಉತ್ತರವನ್ನು ಪೂರ್ತಿ ಮಾಡಿಲ್ಲ ಎನ್ನುವ ಭಾವನೆಯೊಂದಿಗೆ ಮತ್ತು ಜನಾರ್ಧನ ರೆಡ್ಡಿಯವರು ಮಾತನಾಡುವುದು ಆದಮೇಲೆ, ನಾನು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಅವರು ಮಧ್ಯದಲ್ಲಿ ಮಾತನಾಡುವುದನ್ನು ನಿಲ್ಲಿಸಿಬಿಟ್ಟು, ಇನ್ನೊಬ್ಬ ಮಂತ್ರಿಗಳಿಗೆ ಉತ್ತರ ಕೊಡಿ ಎಂದು ಹೇಳುತ್ತಾರಾ? ಇದು ಯಾವ ಪ್ರೊಸೀಜರ್‌ನಲ್ಲಿ ಇದೆಯೆಂದು ಹೇಳಿ ನೋಡೋಣ.

ಅಧ್ಯಕ್ಷರು: ನಾನು ಹೇಳುತ್ತೇನೆ. This is the preamble. Preamble ಹೇಳಿಯೂ ಹೇಳಬಾರದು ಎಂದರೆ ಹೇಗೆ?

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಪೂರ್ತಿಯಾಗಿ ಕೊಡಲಿ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಉತ್ತರವಾದ ಮೇಲೆ clarification ಕೇಳಿ. ಆ clarificationಗೆ ಮಾನ್ಯ ಜನಾರ್ಧನ ರೆಡ್ಡಿಯವರಿಗೂ ಅವಕಾಶ ಕೊಡಿ.

ಶ್ರೀ ಸಿದ್ದರಾಮಯ್ಯ: ನಾನು ಬೇಕಾದರೆ ಇನ್ನು ಎರಡು ಗಂಟೆ ಕುಳಿತುಕೊಳ್ಳುತ್ತೇನೆ. Let him complete his speech ಇವತ್ತೆಲ್ಲ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು: ಈ ಎಲ್ಲಾ ಘಟನೆಗಳಿಗೆ ಕಾರಣಕರ್ತರಾಗಿ ಈಗ ಮತ್ತೆ... ಸುಮ್ಮನೆ ಏಕೆ ಹೇಳಬೇಕು?

ಶ್ರೀ ಟಿ.ಬಿ. ಜಯಚಂದ್ರ: ಇಲಾಖೆಯ ಜವಾಬ್ದಾರಿಕೆಯನ್ನು ಹೊತ್ತಿರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳು ಪೂರ್ತಿಯಾಗಿ ಉತ್ತರ ಕೊಡಲಿ.

ಶ್ರೀ ಸಿದ್ದರಾಮಯ್ಯ: ಇದನ್ನು ಇಡೀ ದೇಶದ ಜನ ನೋಡಿಲ್ಲವೇ? ಉತ್ತರ ಮುಗಿದಿದೆ, clarification ಕೇಳುವ ಹಂತದಲ್ಲಿ Point of Order ಎತ್ತಿರುವುದು ಜಗತ್ತಿಗೆ ಗೊತ್ತಾಯಿತಲ್ಲ. ಈಗ ನಾನು ಪುನಃ ಉತ್ತರ ಮುಗಿಸಿಲ್ಲ ಎಂದರೆ Could anybody believe this?

ಅಧ್ಯಕ್ಷರು: ಅವರು ಹೇಳಲಿಲ್ಲ.

ಶ್ರೀ ಬಸವರಾಜ್ ಬೊಮ್ಮಾಯಿ: ನೀವೇ ಹೇಳಿ. ವಿರೋಧ ಪಕ್ಷದ ನಾಯಕರು implicate ಮಾಡಬಾರದು.

ಶ್ರೀ ಸಿದ್ದರಾಮಯ್ಯ: ಈ ರೀತಿ ಯಾವಾಗಲಾದರೂ ನಡೆದಿತ್ತೇ? ಇದಕ್ಕೆ ನಾನು ಒಪ್ಪಿಕೊಳ್ಳಬೇಕೇ?

(ಗೊಂದಲ)

ಅಧ್ಯಕ್ಷರು: ತಾವು ಈ ರೀತಿ ಮಾತನಾಡಿದರೆ ಇವತ್ತು ಈ ಗೊಂದಲಕ್ಕೆ ನಿಯಮ ಬಿಟ್ಟು ನೀವು ಮಾತನಾಡಿದ್ದೇ ಕಾರಣ. ನೀವು ನಿಯಮ ಬಿಟ್ಟು point of order ಎತ್ತಿದ್ದೇ ಕಾರಣ ಎಂದು ಹೇಳಬೇಕಾಗುತ್ತದೆ. ಅನಾವಶ್ಯಕವಾಗಿ ವಿರೋಧ ಪಕ್ಷದ ನಾಯಕರು ಎದ್ದುನಿಂತಾಗ ಅವಶ್ಯಕತೆ ಇಲ್ಲದೆ point of order ಎತ್ತಿ ಈಗ ಮಾತನಾಡುತ್ತೀರಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಪೂರ್ತಿಯಾಗಲಿ.

ಅಧ್ಯಕ್ಷರು: ಪೂರ್ತಿ ಹೇಳಿಕೆ ಏನು ಆಗಬೇಕು? ಈಗ ನೀವು pointof order raise ಮಾಡಿದ್ದೀರಿ, I will give ruling. ನೀವು point of order raise ಮಾಡಿದ ಮೇಲೆ It is the duty of the chair to give ruling. I will give ruling.

ಶ್ರೀ ಟಿ.ಬಿ. ಜಯಚಂದ್ರ: ಅವರು ಹೇಳಿಕೆ ಪೂರ್ತಿ ಮಾಡಿಲ್ಲ. ಅವರು ಪೂರ್ತಿ ಮಾಡಲಿ.

ಅಧ್ಯಕ್ಷರು: ಮತ್ತೇ ಏಕೆ raise ಮಾಡಿದರು? ಹೇಳಿ. ಅವರು ಎಲ್ಲಾ objections withdraw ಮಾಡುತ್ತಾರಾ? ಅವರು withdraw ಮಾಡಲಿ. Withdraw ಮಾಡಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಜನಾರ್ಧನ ರೆಡ್ಡಿ ಇರಬಹುದು, ಕರುಣಾಕರರೆಡ್ಡಿ ಇರಬಹುದು, ಶ್ರೀರಾಮುಲು ಇರಬಹುದು, ನಾವು ನಿಜವಾಗಿ ನೇರವಾಗಿ ಅವರ ಮೇಲೆ allegation ಯಾವುದೂ ಮಾಡಲಿಲ್ಲ. ಅದು ಲೋಕಾಯುಕ್ತ ರಿಪೋರ್ಟ್‌ನಲ್ಲಿದೆ ಎಂದು ಹೇಳಿದ್ದು.

ಶ್ರೀ ಕೆ. ಜನಾರ್ಧನ ರೆಡ್ಡಿ: ನಮ್ಮ ಹೆಸರುಗಳನ್ನು ತೆಗೆದುಕೊಂಡು, ನಮ್ಮ ಓಬಳಾಪುರಂ ಮೈನಿಂಗ್ ಕಂಪನಿ ಎಂದು ತೆಗೆದುಕೊಂಡು ತಾವು ನೂರಾರು ಸಲ ಮಾತನಾಡಿದ್ದೀರಿ. record ತೆಗೆಸಿ ನೋಡಿ.

ಶ್ರೀ ಸಿದ್ದರಾಮಯ್ಯ: ಏನಂತ ಮಾತನಾಡಿದ್ದೇವೆ?

ಶ್ರೀ ಕೆ. ಜನಾರ್ಧನರೆಡ್ಡಿ: ಓಬಳಾಪುರಂ ಮೈನಿಂಗ್ ಕಂಪನಿಯವರು ಸುಗ್ಗಲಮ್ಮ ಗುಡ್ಡ ಬ್ಲಾಸ್ಟ್ ಮಾಡಿದ್ದಾರೆ, boundaries blast ಮಾಡಿದ್ದಾರೆ. ಆ ಜಿಲ್ಲೆಯಲ್ಲಿ ಇದು ಮಾಡಿದ್ದಾರೆ...

(ಗೊಂದಲ)

Sri. Siddaramaiah: It is a report of the Lokayuktha, It is not my statement. ಆರೋಪಿಗಳೆ how can accused sit over the judgement.

MR. SPEAKER: As a member he has got every right to defend himself here. ವಿಷಯಾಂತರ ಬೇಡ

ಶ್ರೀ ಕೆ. ಜನಾರ್ಧನ ರೆಡ್ಡಿ: ಲೋಕಾಯುಕ್ತ ರಿಪೋರ್ಟ್‌ನಲ್ಲಿ ನಮ್ಮ ಮನೆ ಬಗ್ಗೆ ಬರೆದಿದ್ದಾರಾ....?

ಅಧ್ಯಕ್ಷರು: ಒಬ್ಬ ಸದಸ್ಯರ ಮೇಲೆ ಆಪಾದನೆ ಮಾಡಬೇಕಾದರೆ what does the rules say?

ಶ್ರೀ ಸಿದ್ದರಾಮಯ್ಯ: ಮುಖ್ಯಮಂತ್ರಿಗಳು ಲೋಕಾಯುಕ್ತರ ಹತ್ತಿರ ಹೋದಮೇಲೆ ಅವರು ಒಂದು ವಾರದೊಳಗೆ ರಾಜೀನಾಮೆಯನ್ನು ವಾಪಸ್ಸು ತೆಗೆದುಕೊಂಡಿದ್ದಾರಲ್ಲವೇ? ಈ ಲೋಕಾಯುಕ್ತರ ರಿಪೋರ್ಟ್ ನೀವು ಒಪ್ಪುವುದಿಲ್ಲವೇ?

(ಗೊಂದಲ)

ಶ್ರೀ ಕೆ. ಜನಾರ್ಧನ ರೆಡ್ಡಿ: ಏನು ಬಾಯಿಗೆ ಬಂದ ಹಾಗೆ ಮಾತನಾಡುತ್ತಾರೆ...

ಶ್ರೀ ಸಿದ್ದರಾಮಯ್ಯ: ಯಾರನ್ನೋ ರಕ್ಷಣೆ ಮಾಡುವುದಕ್ಕೋಸ್ಕರವಾಗಿ ಅವರು 2,500 ಕೋಟಿ...

ಅಧ್ಯಕ್ಷರು: ಯಾವುದೂ ದಾಖಲೆಗೆ ಹೋಗಬಾರದು.

(ಈ ಹಂತದಲ್ಲಿ ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಿಕೊಂಡಿಲ್ಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಜೆಡಿಎಸ್ ಪಕ್ಷದ ಶಾಸಕರು ಸದನದ ಬಾವಿಗೆ ಬಂದರು)

ಅಧ್ಯಕ್ಷರು: ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು ಮಧ್ಯಾಹ್ನ 2.15ಕ್ಕೆ ಮುಕ್ತಾಯಗೊಂಡು, ದಿನಾಂಕ: 12–07–2010 ರಂದು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು).

***